بِسۡمِ اللّٰہِ الرَّحۡمٰنِ الرَّحِیۡمِ نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ وَعَلٰی عَبۡدِہِ الۡمَسِیۡحِ الۡمَوۡعُوۡد

وَلَقَدۡ نَصَرَکُمُ اللّٰہُ بِبَدۡرٍ وَّاَنۡتُمۡ اَذِلَّۃٌ

ಕನ್ನಡ
# ಬದರ್
ವಾರ ಪತ್ರಿಕೆ
WEEKLY BADAR QADIAN KANNADA

ಸಂಪಾದಕರು:
ತಾರಿಖ್ ಅಹ್ಮದ್ ಇದ್ರೀಸ್.


## ಅಲ್ಲಾಹನ ಉಪದೇಶ — ಅಲ್ಲಾಹನ ಭಯಭಕ್ತಿ ಇರಿಸಿಕೊಳ್ಳಿರಿ

يٰۤاَيُّهَا الَّذِيۡنَ اٰمَنُوا اتَّقُوا اللّٰهَ وَلۡتَنۡظُرۡ نَفۡسٌ مَّا قَدَّمَتۡ لِغَدٍ‌ۚ وَاتَّقُوا اللّٰهَ‌ؕ اِنَّ اللّٰهَ خَبِيۡرٌۢ بِمَا تَعۡمَلُوۡنَ۔ وَلَا تَكُوۡنُوۡا كَالَّذِيۡنَ نَسُوا اللّٰهَ فَاَنۡسٰٮهُمۡ اَنۡفُسَهُمۡ‌ؕ اُولٰٓٮِٕكَ هُمُ الۡفٰسِقُوۡنَ۔

(ಅಲ್‌ಹಶರ್ : 19-20)

ಅಂದರೆ: ಎಲೈ ಸತ್ಯವಿಶ್ವಾಸಿಗಳೇ, ನೀವು ಅಲ್ಲಾಹನಿಗೆ ಭಯಪಡಿರಿ. ನಾಳೆಗೋಸ್ಕರ ತಾನು ಏನನ್ನು ಸಿದ್ಧಪಡಿಸಿಟ್ಟಿದೆ ಎಂದು ಪ್ರತಿಯೊಂದು ಆತ್ಮವೂ ನೋಡಿಕೊಳ್ಳಲಿ. ನೀವು ಅಲ್ಲಾಹನ ಭಯಭಕ್ತಿ ಇರಿಸಿಕೊಳ್ಳಿರಿ. ನೀವು ಮಾಡುವುದನ್ನೆಲ್ಲ ಖಂಡಿತವಾಗಿಯೂ ಅಲ್ಲಾಹನು ಚೆನ್ನಾಗಿ ತಿಳಿಯುವವನಾಗಿದ್ದಾನೆ. ಅಲ್ಲಾಹನನ್ನು ಮರೆತುಬಿಟ್ಟವರಂತೆ ನೀವು ಆಗಬೇಡಿರಿ. ತತ್ಫಲವಾಗಿ ಅವರು ತಮ್ಮನ್ನೇ ಮರೆತು ಬಿಡುವಂತೆ ಅವನು (ಅಲ್ಲಾಹನು) ಮಾಡಿದ್ದನು. ಅವರೇ ಆಜ್ಞೋಲ್ಲಂಘಕರಾಗಿದ್ದಾರೆ.


ಸಂಪುಟ: 07, ಸಂಚಿಕೆ: 32, 06 ಆಗಸ್ಟ್ 2026, 06 ಝುಹೂರ್ 1405 ಹಿಜರಿ ಶಮ್‌ಸಿ,
22 ಸಫ಼ರ್ 1448 ಹಿಜರಿ ಖಮರಿ. (www.akhbarbadr.in)



## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ — ತನ್ನ ಮುಸ್ಲಿಮ್ ಸಹೋದರನನ್ನು ಕೀಳಾಗಿ ಕಾಣುವುದು ಅಥವಾ ತಿರಸ್ಕರಿಸುವುದೇ ಒಬ್ಬ ವ್ಯಕ್ತಿಯ ದುಷ್ಟತನಕ್ಕೆ ಸಾಕಾದ ಕಾರಣವಾಗಿದೆ

عَنۡ أَبِي هُرَيۡرَةَ قَالَ: قَالَ رَسُولُ اللّٰهِ صَلَّى اللّٰهُ عَلَيۡهِ وَسَلَّمَ: "لَا تَحَاسَدُوا، وَلَا تَنَاجَشُوا، وَلَا تَبَاغَضُوا، وَلَا تَدَابَرُوا، وَلَا يَبِعۡ بَعۡضُكُمۡ عَلَى بَيۡعِ بَعۡضٍ، وَكُونُوا عِبَادَ اللّٰهِ إِخۡوَانًا الۡمُسۡلِمُ أَخُو الۡمُسۡلِمِ لَا يَظۡلِمُهُ، وَلَا يَخۡذُلُهُ، وَلَا يَحۡقِرُهُ التَّقۡوَى هَاهُنَا، وَيُشِيرُ إِلَى صَدۡرِهِ ثَلَاثَ مَرَّاتٍ، بِحَسۡبِ امۡرِئٍ مِنَ الشَّرِّ أَنۡ يَحۡقِرَ أَخَاهُ الۡمُسۡلِمَ كُلُّ الۡمُسۡلِمِ عَلَى الۡمُسۡلِمِ، حَرَامٌ دَمُهُ، وَمَالُهُ، وَعِرۡضُهُ". (صحيح مسلم كتاب البر والصلة والآداب باب تحريم ظلم المسلم وخذله... حديث: ٦٥٤١)

ಹಝ್ರತ್ ಅಬು ಹುರೈರಾ(ರ) ವರದಿ ಮಾಡುತ್ತಾರೆ: ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಅವರು ಹೀಗೆ ಉಪದೇಶಿಸಿದರು: ನೀವು ಪರಸ್ಪರ ಅಸೂಯೆಪಡಬೇಡಿ. ಪರಸ್ಪರ ಮೋಸ ಮಾಡಬೇಡಿ. ಒಬ್ಬರ ಮೇಲೊಬ್ಬರು ದ್ವೇಷವನ್ನು ಬೆಳೆಸಿಕೊಳ್ಳಬೇಡಿ. ಪರಸ್ಪರ ವೈರಭಾವವನ್ನು ಇಟ್ಟುಕೊಳ್ಳಬೇಡಿ. ನಿಮ್ಮಲ್ಲಿ ಯಾರೂ ತಮ್ಮ ಸಹೋದರನ ವ್ಯಾಪಾರದ ಮೇಲೆ ಮತ್ತೊಂದು ವ್ಯವಹಾರ ಮಾಡಬಾರದು. ಓ ಅಲ್ಲಾಹನ ದಾಸರೇ! ನೀವು ಪರಸ್ಪರ ಸಹೋದರರಾಗಿರಿ. ಒಬ್ಬ ಮುಸಲ್ಮಾನನು ಮತ್ತೊಬ್ಬ ಮುಸಲ್ಮಾನನ ಸಹೋದರನಾಗಿದ್ದಾನೆ. ಅವನು ತನ್ನ ಸಹೋದರನ ಮೇಲೆ ಅನ್ಯಾಯ ಮಾಡುವುದಿಲ್ಲ, ಅವನನ್ನು ಅವಮಾನಿಸುವುದಿಲ್ಲ ಹಾಗೂ ಅವನನ್ನು ತಿರಸ್ಕರಿಸಿ ಕೀಳಾಗಿ ಕಾಣುವುದಿಲ್ಲ. ನಂತರ ಹಝ್ರತ್ ಪೈಗಂಬರ್(ಸ)ರು ತಮ್ಮ ಹೃದಯದ ಕಡೆಗೆ ಮೂರು ಬಾರಿ ಸೂಚಿಸಿ ಹೇಳಿದರು: "ತಖ್ವ ಇಲ್ಲಿದೆ, ತಖ್ವ ಇಲ್ಲಿದೆ, ತಖ್ವ ಇಲ್ಲಿದೆ." ತನ್ನ ಮುಸ್ಲಿಮ್ ಸಹೋದರನನ್ನು ಕೀಳಾಗಿ ಕಾಣುವುದು ಅಥವಾ ತಿರಸ್ಕರಿಸುವುದೇ ಒಬ್ಬ ವ್ಯಕ್ತಿಯ ದುಷ್ಟತನಕ್ಕೆ ಸಾಕಾದ ಕಾರಣವಾಗಿದೆ. ಪ್ರತಿಯೊಬ್ಬ ಮುಸಲ್ಮಾನನ ರಕ್ತ, ಆಸ್ತಿ ಮತ್ತು ಮಾನ-ಗೌರವವು ಮತ್ತೊಬ್ಬ ಮುಸಲ್ಮಾನನಿಗೆ ಪವಿತ್ರವಾಗಿದ್ದು, ಅವುಗಳ ಮೇಲೆ ಅತಿಕ್ರಮಣ ಮಾಡುವುದು ನಿಷಿದ್ಧವಾಗಿದೆ. (ಸಹೀಹ್ ಮುಸ್ಲಿಮ್ ಕಿತಾಬುಲ್ ಬಿರ್ರಿ ವಸ್ಸಿಲ ವಲ್‌ಆದಾಬಿ, ಹದೀಸ್-6541)



## ಹಝ್ರತ್ ಮಸೀಹ್ ಮೌಊದ್(ಅ)ರ ಅಧ್ಯಾಪನೆ — ಮನುಷ್ಯನು ಲೋಕದ ಆಸೆ-ಆಕಾಂಕ್ಷೆಗಳು ಮತ್ತು ಕ್ಷಣಿಕ ಸುಖಗಳನ್ನೇ ಸ್ವರ್ಗವೆಂದು ಭಾವಿಸುತ್ತಾನೆ. ಆದರೆ ವಾಸ್ತವದಲ್ಲಿ ಅವೇ ನರಕವಾಗಿವೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

"ಇಸ್ಲಾಮಿನಲ್ಲಿ ನಿಜವಾದ ಜೀವನವನ್ನು ಪಡೆಯಲು ಮೊದಲು ಒಂದು ಕಹಿಯಾದ ಮರಣವನ್ನು ಸ್ವೀಕರಿಸಬೇಕಾಗುತ್ತದೆ. ಆದರೆ ಆ ಕಹಿ ಮರಣವನ್ನು ಯಾರು ಸಂತೋಷದಿಂದ ಅಂಗೀಕರಿಸುತ್ತಾರೋ, ಅಂತಿಮವಾಗಿ ಅವರೇ ನಿಜವಾದ ಅರ್ಥದಲ್ಲಿ ಜೀವಂತರಾಗುತ್ತಾರೆ. ಹದೀಸಿನಲ್ಲಿ ತಿಳಿಸಲಾಗಿದೆ: ಮನುಷ್ಯನು ಲೋಕದ ಆಸೆ-ಆಕಾಂಕ್ಷೆಗಳು ಮತ್ತು ಕ್ಷಣಿಕ ಸುಖಗಳನ್ನೇ ಸ್ವರ್ಗವೆಂದು ಭಾವಿಸುತ್ತಾನೆ. ಆದರೆ ವಾಸ್ತವದಲ್ಲಿ ಅವೇ ನರಕವಾಗಿವೆ. ಮತ್ತೊಂದೆಡೆ, ಸೌಭಾಗ್ಯಶಾಲಿಯಾದವನು ಅಲ್ಲಾಹನ ಮಾರ್ಗದಲ್ಲಿ ಬರುವ ಕಷ್ಟ-ಸಂಕಟಗಳನ್ನು ಸಂತೋಷದಿಂದ ಸ್ವೀಕರಿಸುತ್ತಾನೆ; ನಿಜವಾದ ಸ್ವರ್ಗವೇ ಅದಾಗಿದೆ. ಈ ಲೋಕವು ನಶ್ವರವಾದದ್ದು ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಇಲ್ಲಿ ಜನಿಸಿದ ಪ್ರತಿಯೊಬ್ಬರೂ ಒಂದು ದಿನ ಮರಣವನ್ನು ಅನುಭವಿಸಲೇಬೇಕು. ಕೊನೆಗೆ ಒಂದು ಕಾಲ ಬರುತ್ತದೆ; ಆಗ ಸ್ನೇಹಿತರು, ಬಂಧುಗಳು ಮತ್ತು ಆತ್ಮೀಯರೆಲ್ಲರೂ ಒಬ್ಬರನ್ನೊಬ್ಬರು ಬಿಟ್ಟು ದೂರವಾಗುತ್ತಾರೆ. ಆಗ ಮನುಷ್ಯನು ಸುಖವೆಂದು ಭಾವಿಸಿದ್ದ ಎಲ್ಲಾ ಅನ್ಯಾಯವಾದ ಭೋಗ-ವಿಲಾಸಗಳು ಕಹಿ ನೋವಿನ ರೂಪದಲ್ಲಿ ಅವನ ಮುಂದೆ ವ್ಯಕ್ತವಾಗುತ್ತವೆ. ನಿಜವಾದ ಸುಖ, ಸಮೃದ್ಧಿ ಮತ್ತು ಮನಶ್ಶಾಂತಿ 'ತಕ್ವಾ' ಇಲ್ಲದೆ ದೊರೆಯುವುದಿಲ್ಲ. ತಕ್ವಾದ ಮೇಲೆ ಸ್ಥಿರವಾಗಿ ನಿಲ್ಲುವುದು ವಿಷದ ಪಾತ್ರೆಯನ್ನು ಕುಡಿಯುವಂತೆಯೇ ಕಠಿಣವಾಗಿದೆ. ಆದರೆ ಭಯಭಕ್ತಿವುಳ್ಳವನಿಗಾಗಿ ಸರ್ವಶಕ್ತನಾದ ಅಲ್ಲಾಹನು ಎಲ್ಲಾ ರೀತಿಯ ಸುಖ-ಸೌಲಭ್ಯಗಳ ವ್ಯವಸ್ಥೆಯನ್ನು ಮಾಡುತ್ತಾನೆ. **ಮೈಂ ಯತ್ತಖಿಲ್ಲಾಹ ಯಜ್‌ಅಲ್ಲಹು ಮಖ್ರಜನ್ ವಯರ್‌ಝುಖ್‌ಹು ಮಿನ್ ಹೈಸು ಲಾ ಯಹ್‌ತಸಿಬ್-** (ಅತ್ತಲಾಖ್: 3-4) 'ಯಾರಾದರೂ ಅಲ್ಲಾಹನ ಭಯಭಕ್ತಿ ಹೊಂದಿದ್ದರೆ ಅವನಿಗೆ ಅಲ್ಲಾಹನು (ಸಂಕಷ್ಟಗಳಿಂದ) ಪಾರಾಗುವ ಮಾರ್ಗವನ್ನು ಮಾಡಿಕೊಡುವನು. ಅವನು ನಿರೀಕ್ಷಿಸದ ಕಡೆಯಿಂದ ಅಲ್ಲಾಹನು ಅವನಿಗೆ ಜೀವನೋಪಾಯವನ್ನು ದಯಪಾಲಿಸುವನು.' ಆದ್ದರಿಂದ ನಿಜವಾದ ಸುಖ-ಸಮೃದ್ಧಿಯ ಮೂಲತತ್ವ ತಕ್ವಾವೇ (ಭಯಭಕ್ತಿ) ಆಗಿದೆ. ಆದರೆ ತಕ್ವಾವನ್ನು ಅಳವಡಿಸಿಕೊಳ್ಳಲು ನಾವು ಅಲ್ಲಾಹನ ಮುಂದೆ ಷರತ್ತುಗಳನ್ನು ವಿಧಿಸಬಾರದು. ತಕ್ವಾವನ್ನು ಸ್ವೀಕರಿಸಿದ ನಂತರ ನೀವು ಏನನ್ನು ಬೇಡಿದರೂ, ಸರ್ವಶಕ್ತನಾದ ಅಲ್ಲಾಹನು ಅದನ್ನು ಅನುಗ್ರಹಿಸುತ್ತಾನೆ. ಸರ್ವಶಕ್ತನಾದ ಅಲ್ಲಾಹನು ಅತ್ಯಂತ ಕರುಣಾಮಯನೂ, ಅಪಾರ ದಯಾಳುವೂ ಆಗಿದ್ದಾನೆ. ಆದ್ದರಿಂದ ತಕ್ವಾವನ್ನು ಅಳವಡಿಸಿಕೊಳ್ಳಿರಿ; ಆಗ ನೀವು ಏನನ್ನು ಬಯಸುವಿರೋ ಅದನ್ನೆಲ್ಲಾ ಆತನು ನಿಮಗೆ ಅನುಗ್ರಹಿಸುತ್ತಾನೆ."

**(ಮಲ್‌ಫೂಝಾತ್, ಸಂಪುಟ-3, ಪುಟ-90, ಆವೃತ್ತಿ 2003, ರಬ್ವಾ)**

## ತಫ್ಸೀರ್ ಕಬೀರ್‌ನಿಂದ ಉಲ್ಲೇಖ — ತತ್ತಖೂನ್ ಎಂಬುದರ ಒಂದು ಅರ್ಥವೇನೆಂದರೆ, ನೀವು ಭಗವಂತನನ್ನು ಪ್ರಾಮಾಣಿಕತೆ ಮತ್ತು ನಿಶ್ಚಿತತೆಯಿಂದ ಆರಾಧಿಸಿದರೆ, ನಿಮ್ಮ ನಡುವಿನ ಅನ್ಯಾಯದಿಂದ ನೀವು ರಕ್ಷಿಸಲ್ಪಡುತ್ತೀರಿ.

ಸೂರಾ ಅಲ್-ಬಖರಾದ 22ನೇ ಆಯತ್ತಿನ ವ್ಯಾಖ್ಯಾನವನ್ನು ವಿವರಿಸುತ್ತಾ ಹಝ್ರತ್ ಮುಸ್ಲೆಹ್ ಮೌಊದ್(ರ) ಹೇಳುತ್ತಾರೆ:

"ತತ್ತಕೂನ್' ಎಂಬ ಪದವು ಸರ್ವಶಕ್ತನಾದ ಅಲ್ಲಾಹನ ಮತ್ತು ಆತನ ದಾಸನ ನಡುವಿನ ಸಂಬಂಧವನ್ನು ಹಾಳುಮಾಡುವ ಸಂಗತಿಗಳಿಂದ ದೂರವಿರುವುದನ್ನು ಮಾತ್ರವಲ್ಲ, ಮನುಷ್ಯರ ಪರಸ್ಪರ ಸಂಬಂಧಗಳನ್ನು ಹಾಳುಮಾಡುವ ಕೃತ್ಯಗಳಿಂದಲೂ ದೂರವಿರಬೇಕೆಂಬ ಸಂದೇಶವನ್ನು ಒಳಗೊಂಡಿದೆ. ಅಲ್ಲಾಹನ ಆರಾಧನೆ (ಇಬಾದತ್) ಮನುಷ್ಯನನ್ನು ಇಂತಹ ತಪ್ಪುಗಳಿಂದಲೂ ಕಾಪಾಡುತ್ತದೆ. ಯಾರು ಸರ್ವಶಕ್ತನಾದ ಅಲ್ಲಾಹನೇ ತಮ್ಮ 'ರಬ್' ಎಂದು ನಿಜವಾಗಿ ನಂಬುತ್ತಾರೋ, ಅವರು ಅವನ ಸೃಷ್ಟಿಗಳೊಂದಿಗೂ ಉತ್ತಮ ಸಂಬಂಧವನ್ನು ಬೆಳೆಸುವುದು ಅನಿವಾರ್ಯ. ಅಂತಹ ವ್ಯಕ್ತಿಯು ಜನರ ಮೇಲೆ ಎಂದಿಗೂ ಅನ್ಯಾಯ ಮಾಡುವುದಿಲ್ಲ. ಏಕೆಂದರೆ ಯಾರು

*(ಪುಟ ಸಂಖ್ಯೆ-09 ರಲ್ಲಿ ಮುಂದುವರಿಸಲಾಗಿದೆ)*

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಸರ್ವಶಕ್ತನಾದ ಅಲ್ಲಾಹನು ಹುಝೂರ್ ಅವರಿಗೆ ದೀರ್ಘ ಮತ್ತು ಸಕ್ರಿಯ ಜೀವನವನ್ನು ನೀಡಲಿ ಮತ್ತು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

لا إله إلا الله محمد رسول الله

## ಜೀವನದ ನಿಜವಾದ ಉದ್ದೇಶ ಧರ್ಮನಿಷ್ಠೆಯನ್ನು ಸಾಧಿಸುವುದಾಗಿದೆ

## ಜಲ್ಸ ಸಾಲಾನ ಲಂಡನ್‌ನ 2019 ರಲ್ಲಿ ಹುಝೂರ್ ಅನ್ವರ್(ಅತಬಿಅ) ಅವರ ಉದ್ಘಾಟನಾ ಭಾಷಣದ ಸಾರಾಂಶ

## ಹಗಲು ಮತ್ತು ರಾತ್ರಿ ಒಂದೇ ಸಮಯದಲ್ಲಿ ಒಂದಾಗಲಾರವು; ಅದೇ ರೀತಿ ನಿಜವಾದ ಈಮಾನ್ (ಸತ್ಯವಿಶ್ವಾಸ) ಮತ್ತು ಪಾಪವೂ ಒಟ್ಟಿಗೆ ಬರಲು ಸಾಧ್ಯವಿಲ್ಲ

2019ರ ಆಗಸ್ಟ್ 2ರಂದು, ಶುಕ್ರವಾರ, ಜಮಾಅತ್ ಅಹ್ಮದಿಯ್ಯಾ ಯುಕೆ ಆಯೋಜಿಸಿದ್ದ ಜಲ್ಸಾ ಸಾಲಾನಾದ ಉದ್ಘಾಟನಾ ಅಧಿವೇಶನದಲ್ಲಿ, ಸಯ್ಯಿದನಾ ಹಝ್ರತ್ ಖಲೀಫತುಲ್ ಮಸೀಹ್ ಅಲ್-ಖಾಮಿಸ್(ಅತಬಿಅ) ಅವರು ಅತ್ಯಂತ ಜ್ಞಾನಪೂರ್ಣ ಹಾಗೂ ಆತ್ಮೋನ್ನತಿದಾಯಕ ಭಾಷಣ ಮಾಡಿದರು.

ಅಹ್ಮದಿಯ್ಯದ ಧ್ವಜಾರೋಹಣದ ಬಳಿಕ ಹುಝೂರ್ ಅನ್ವರ್(ಅತಬಿಅ) ದುವಾ ನಡೆಸಿದರು. ನಂತರ ಸಂಜೆ 4:37ಕ್ಕೆ ಸಭಾಂಗಣಕ್ಕೆ ಆಗಮಿಸಿ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದರು. ಇದರೊಂದಿಗೆ ಕಾರ್ಯಕ್ರಮವು ಅಧಿಕೃತವಾಗಿ ಆರಂಭವಾಯಿತು.

ಕಾರ್ಯಕ್ರಮವು ಪವಿತ್ರ ಖುರ್‌ಆನ್‌ನ ಪಠಣದಿಂದ ಆರಂಭವಾಯಿತು. ಮಕರ್ರಮ್ ರಾಶಿದ್ ಖತ್ತಾಬ್ ಸಾಹಿಬ್ (ಖಬಾಬೀರ್) ಅವರು ಸೂರಃ ಆಲಿ-ಇಮ್ರಾನ್‌ನ 191ರಿಂದ 196ನೇ ಆಯತ್‌ಗಳವರೆಗೆ ಪಠಿಸಿದರು. ಬಳಿಕ ಮೌಲಾನಾ ನಸೀರ್ ಅಹ್ಮದ್ ಖಮರ್ ಸಾಹಿಬ್ (ಅಡಿಷನಲ್ ವಕೀಲುಲ್ ಇಶಾಅತ್, ಲಂಡನ್) ಅವರು ಅದರ ಉರ್ದು ಅನುವಾದವನ್ನು ವಾಚಿಸಿದರು.

ನಂತರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾತು ವಸ್ಸಲಾಮ್ ಅವರ ಫಾರ್ಸಿ ಕಾವ್ಯದಿಂದ ಕೆಲವು ಪದ್ಯಗಳನ್ನು ಮಕರ್ರಮ್ ಸಯ್ಯದ್ ಆಶಿಕ್ ಹುಸೈನ್ ಸಾಹಿಬ್ ಹಾಗೂ ಉರ್ದು ಕಾವ್ಯದಿಂದ ಕೆಲವು ಪದ್ಯಗಳನ್ನು ಮಕರ್ರಮ್ ಮುಸವ್ವಿರ್ ಅಹ್ಮದ್ ಸಾಹಿಬ್ (ಆಸ್ಟ್ರಿಯಾ) ಅವರು ಭಕ್ತಿಭಾವದಿಂದ ಪ್ರಸ್ತುತಪಡಿಸಿದರು.

ಸಂಜೆ 5:04ಕ್ಕೆ ಹುಝೂರ್ ಅನ್ವರ್(ಅತಬಿಅ) ಮಿಂಬರ್‌ಗೆ ಆಗಮಿಸಿ, ಜಲ್ಸಾದಲ್ಲಿ ಉಪಸ್ಥಿತರಿದ್ದ ಎಲ್ಲರಿಗೂ ಹಾಗೂ MTA ಮೂಲಕ ವಿಶ್ವದಾದ್ಯಂತ ವೀಕ್ಷಿಸುತ್ತಿದ್ದ ಮತ್ತು ಆಲಿಸುತ್ತಿದ್ದ ಸದಸ್ಯರಿಗೆ "ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹು" ಎಂದು ಶುಭಾಶಯ ಕೋರಿ ತಮ್ಮ ಉದ್ಘಾಟನಾ ಭಾಷಣವನ್ನು ಆರಂಭಿಸಿದರು.

ತಶಹ್ಹುದ್, ತಅವ್ವುಝ್ ಮತ್ತು ಸೂರಃ ಅಲ್-ಫಾತಿಹಾ ಪಠಣದ ನಂತರ, ಹುಝೂರ್ ಅನ್ವರ್(ಅತಬಿಅ) ಸೂರಃ ಆಲಿ-ಇಮ್ರಾನ್‌ನ 194ನೇ ಆಯತನ್ನು ಪಠಿಸಿ ಅದರ ಅರ್ಥವನ್ನು ವಿವರಿಸಿದರು.

ಹುಝೂರ್ ಅನ್ವರ್(ಅತಬಿಅ) ಅವರು ಹೇಳಿದರು:

"ಇಂದು ನಾವು ಇಲ್ಲಿ ಒಂದಾಗಿ ಸೇರಿರುವುದರ ಉದ್ದೇಶವೆಂದರೆ, ಅಲ್ಲಾಹ್ ತಆಲಾ ತನ್ನ ಅಪಾರ ಕೃಪೆಯಿಂದ ನಮಗೆ ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ಅವರನ್ನು ಸ್ವೀಕರಿಸುವ ಸೌಭಾಗ್ಯವನ್ನು ನೀಡಿದ್ದಾನೆ ಎಂಬುದನ್ನು ಘೋಷಿಸುವುದು. ಅವರು ನಮ್ಮ ಗಮನವನ್ನು ಅಲ್ಲಾಹ್ ತಆಲಾ ಮತ್ತು ಹಝ್ರತ್ ಮುಹಮ್ಮದ್ ಮುಸ್ತಫಾ (ಸಲ್ಲಲ್ಲಾಹು ಅಲೈಹಿ ವ ಸಲ್ಲಂ) ಅವರ ಆದೇಶಗಳನ್ನು ಪಾಲಿಸುವತ್ತ ಸೆಳೆದರು ಮತ್ತು ಅವುಗಳ ಪಾಲನೆಯಲ್ಲಿಯೇ ನಮ್ಮ ಇಹಲೋಕ ಹಾಗೂ ಪರಲೋಕದ ಯಶಸ್ಸು ಅಡಗಿದೆ ಎಂದು ಸ್ಪಷ್ಟವಾಗಿ ಬೋಧಿಸಿದರು."

ಹುಝೂರ್ ಅನ್ವರ್(ಅತಬಿಅ) ಅವರು ಸೂರಃ ಆಲಿ-ಇಮ್ರಾನ್‌ನ 194 ಆಯತ್‌ನ ಉಲ್ಲೇಖದೊಂದಿಗೆ ಹೇಳಿದರು: ನಮ್ಮ ಜೀವನ ಮತ್ತು ನಮ್ಮ ಕರ್ಮಗಳು ಈ ದೈವಿಕ ಉಪದೇಶಕ್ಕೆ ಅನುಗುಣವಾಗಿರದಿದ್ದರೆ, ನಾವು ಈಮಾನ್ ತಂದಿದ್ದೇವೆ ಎಂಬ ನಮ್ಮ ದಾವೆ ಕೇವಲ ಖಾಲಿ ಮಾತಾಗಿಬಿಡುತ್ತದೆ.

ಹುಝೂರ್ ಅನ್ವರ್(ಅತಬಿಅ) ಅವರು ಮುಂದುವರಿದು, ನಮ್ಮಲ್ಲಿ ಪ್ರತಿಯೊಬ್ಬರೂ ಆತ್ಮಪರಿಶೀಲನೆ ಮಾಡಬೇಕೆಂದು ತಿಳಿಸಿದರು. ನಿಜವಾದ ಈಮಾನ್‌ನ್ನು ಪಡೆಯಬೇಕಾದರೆ, ಅಲ್ಲಾಹ್ ತಆಲಾದ ಆದೇಶಗಳನ್ನು ಆಳವಾಗಿ ಅರಿತು, ಅವುಗಳಿಗೆ ಅನುಗುಣವಾಗಿ ಬದುಕುವುದು ಅಗತ್ಯವಾಗಿದೆ.

ಹುಝೂರ್ ಅನ್ವರ್(ಅತಬಿಅ) ಅವರು ಪ್ರಶ್ನಿಸಿದರು:

ನಿಜವಾದ ಸತ್ಯವಿಶ್ವಾಸಿಗೆ (ಮುಮಿನ್‌ಗೆ) ಅಗತ್ಯವಾದ ಗುಣಗಳು ನಮ್ಮೊಳಗೆ ಬೆಳೆದಿವೆಯೇ? ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ನಮ್ಮ ಮುಂದೆ ಸ್ಥಾಪಿಸಿದ ಉನ್ನತ ಮಾನದಂಡಗಳನ್ನು ನಾವು ಸಾಧಿಸಿದ್ದೇವೆಯೇ?

ನಂತರ, ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾತು ವಸ್ಸಲಾಮ್) ಅವರ ಅಮೂಲ್ಯ ಉಪದೇಶಗಳ ಬೆಳಕಿನಲ್ಲಿ ಈಮಾನ್‌ನ ನಿಜಸ್ವರೂಪವನ್ನು ವಿವರಿಸಿದರು.

ಹುಝೂರ್ ಅನ್ವರ್(ಅತಬಿಅ) ಹೇಳಿದರು: ಒಬ್ಬ ವ್ಯಕ್ತಿಗೆ ಅಲ್ಲಾಹ್ ತಆಲಾದ ಅಸ್ತಿತ್ವದ ಮೇಲೆ ಸತ್ಯವಾದ ಮತ್ತು ಜೀವಂತ ಈಮಾನ್ ಉಂಟಾದರೆ, ಅವನು ಉದ್ದೇಶಪೂರ್ವಕವಾಗಿ ಪಾಪದ ಕಡೆಗೆ ಸಾಗಲು ಸಾಧ್ಯವೇ ಇಲ್ಲ. ನಿಜವಾದ ಈಮಾನ್ ಮಾನವನ ಹೃದಯವನ್ನು ಪಾಪದಿಂದ ದೂರವಿಟ್ಟು, ಸದ್ಗುಣಗಳತ್ತ ಮುನ್ನಡೆಸುತ್ತದೆ. ಮುಂದೆ ಅವರು ಹೇಳಿದರು: ಮಾನವ ಜೀವನದ ಪರಮ ಗುರಿ 'ತಕ್ವಾ'ವನ್ನು ಸಾಧಿಸುವುದಾಗಿದೆ. ತಕ್ವಾ ಇಲ್ಲದೆ ಪಾಪಗಳಿಂದ ಸಂಪೂರ್ಣವಾಗಿ ದೂರವಿರುವುದು ಅಸಾಧ್ಯ. ಆದ್ದರಿಂದ ಪ್ರತಿಯೊಬ್ಬ ಅಹ್ಮದಿಯೂ ತನ್ನ ಜೀವನದ ಮುಖ್ಯ ಗುರಿಯನ್ನಾಗಿ ತಕ್ವಾ ಸಾಧನೆಯನ್ನು ಮಾಡಬೇಕು.

ಪಾಪದ ಕುರಿತು ಹುಝೂರ್ ಅನ್ವರ್(ಅತಬಿಅ) ಅವರು ಹೇಳಿದರು: ಮಾನವನು ತಾನು ಒಬ್ಬನೇ ಇದ್ದೇನೆ, ಯಾರೂ ನನ್ನನ್ನು ನೋಡುತ್ತಿಲ್ಲ ಎಂದು ಭಾವಿಸಿದಾಗಲೇ ಪಾಪದತ್ತ ಹೆಜ್ಜೆಯಿಡುತ್ತಾನೆ. ಆದರೆ ಈ ಕಲ್ಪನೆ ತಪ್ಪಾಗಿದೆ. ಅಲ್ಲಾಹ್ ತಆಲಾ ಸದಾ ತನ್ನ ಸೃಷ್ಟಿಯನ್ನು ನೋಡುತ್ತಾನೆ ಮತ್ತು ಪ್ರತಿಯೊಂದು ಕೃತ್ಯಕ್ಕೂ ಸಾಕ್ಷಿಯಾಗಿದ್ದಾನೆ. ಆದ್ದರಿಂದ, "ನಾನು ಒಬ್ಬನೇ ಇದ್ದೇನೆ" ಎಂಬ ಭಾವನೆ ದೈವಸ್ಮರಣೆಯಿಂದ ದೂರವಾದ ಚಿಂತನೆಯಾಗಿದೆ.

ನಂತರ ಹುಝೂರ್ ಅನ್ವರ್(ಅತಬಿಅ) ಅವರು ತಕ್ವಾದ ಮಹತ್ವವನ್ನು ವಿವರಿಸುತ್ತಾ ಹೇಳಿದರು:

ಪವಿತ್ರ ಖುರ್‌ಆನ್ ತನ್ನ ಆರಂಭದಲ್ಲಿಯೇ ತಕ್ವಾಗೆ ವಿಶೇಷ ಸ್ಥಾನ ನೀಡುತ್ತದೆ. ಸೂರಃ ಅಲ್-ಬಕರಃನ ಆರಂಭದಲ್ಲೇ ಹೀಗೆ ಹೇಳಲಾಗಿದೆ: **ಹುದನ್ ಲಿಲ್ ಮುತ್ತಖೀನ್**, ಮಾನವನ ಹೃದಯದಲ್ಲಿ ತಕ್ವಾ ಬೆಳೆದಾಗ, ಪಾಪದ ಕಡೆಗೆ ಕರೆದೊಯ್ಯುವ ಎಲ್ಲ ಮಾರ್ಗಗಳು ಕ್ರಮೇಣ ಮುಚ್ಚಿಕೊಳ್ಳುತ್ತವೆ. ತಕ್ವಾ ಮಾನವನನ್ನು ಅಲ್ಲಾಹ್ ತಆಲಾದ ಸಮೀಪಕ್ಕೆ ತಂದು, ಅವನ ನೈತಿಕ ಮತ್ತು ಆತ್ಮಿಕ ಜೀವನವನ್ನು ಶುದ್ಧಗೊಳಿಸುತ್ತದೆ.

ಹುಝೂರ್ ಅನ್ವರ್(ಅತಬಿಅ) ಅವರು ಮತ್ತಷ್ಟು ಹೇಳಿದರು:

ತಕ್ವಾಕ್ಕಿಂತ ಶ್ರೇಷ್ಠವಾದ ಯಶಸ್ಸು ಇನ್ನೊಂದಿಲ್ಲ. ಇಂದಿನ ಅಶಾಂತ ಮತ್ತು ನೈತಿಕ ಕುಸಿತದ ಯುಗದಲ್ಲಿ ತಕ್ವಾದ ಅಗತ್ಯವು ಇನ್ನಷ್ಟು ಹೆಚ್ಚಾಗಿದೆ. ಅಲ್ಲಾಹ್ ತಆಲಾ ತನ್ನ ಪ್ರವಾದಿಗಳನ್ನು ಲೋಕಕ್ಕೆ ಕಳುಹಿಸುವ ಪ್ರಮುಖ ಉದ್ದೇಶವೇ ಜನರಲ್ಲಿ ತಕ್ವಾವನ್ನು ಸ್ಥಾಪಿಸುವುದಾಗಿದೆ. ಈ ಯುಗದಲ್ಲಿ ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ಅವರ ಆಗಮನದ ಉದ್ದೇಶವೂ ಇದೇ ಮಾನವಕುಲವನ್ನು ತಕ್ವಾದ ಹಾದಿಯಲ್ಲಿ ನಡೆಸಿ, ಅಲ್ಲಾಹ್ ತಆಲಾದೊಂದಿಗೆ ಜೀವಂತ ಸಂಬಂಧವನ್ನು ಸ್ಥಾಪಿಸುವುದು.

ಹುಝೂರ್ ಅನ್ವರ್(ಅತಬಿಅ) ಅವರು ಮುತ್ತಖಿ (ಸತ್ಯವಿಶ್ವಾಸಿ) ವ್ಯಕ್ತಿಯ ಮಹತ್ವವನ್ನು ವಿವರಿಸುತ್ತಾ ಹೇಳಿದರು:

ಪವಿತ್ರ ಖುರ್‌ಆನ್ ಮರುಮರುವಾಗಿ ತಕ್ವಾವಂತರಿಗೆ ಅಲ್ಲಾಹ್ ತಆಲಾದ ವಿಶೇಷ ಅನುಗ್ರಹಗಳು ಮತ್ತು ಪ್ರತಿಫಲಗಳನ್ನು ವಾಗ್ದಾನ ಮಾಡುತ್ತದೆ. ನಿಜವಾದ ಯಶಸ್ಸು ಮತ್ತು ಮುಕ್ತಿ ತಕ್ವಾವಂತರ ಪಾಲಾಗುತ್ತದೆ. ಅಲ್ಲಾಹ್ ತಆಲಾ ಅವರಿಗೆ ಅವರು ಊಹಿಸಲೂ ಸಾಧ್ಯವಾಗದ ಸ್ಥಳಗಳಿಂದ ಜೀವನೋಪಾಯವನ್ನು ಒದಗಿಸುತ್ತಾನೆ.

ಅದೇ ರೀತಿ, ಹದೀಸಿನಲ್ಲಿ ಅಲ್ಲಾಹ್ ತಆಲಾ ಮುತ್ತಕಿಯ ಸ್ನೇಹಿತ (ವಲಿ) ಆಗುತ್ತಾನೆ ಎಂದು ಉಲ್ಲೇಖಿಸಲಾಗಿದೆ. ಮಾನವನು ತಕ್ವಾದ ಜೀವನವನ್ನು ಅಳವಡಿಸಿಕೊಂಡಾಗ, ಅವನು ಅಲ್ಲಾಹ್ ತಆಲಾದ ವಿಶೇಷ ರಕ್ಷಣೆಯಲ್ಲಿಯೂ ಕೃಪೆಯಲ್ಲಿಯೂ ಬದುಕಲು ಪ್ರಾರಂಭಿಸುತ್ತಾನೆ.

ನಂತರ ಹುಝೂರ್ ಅನ್ವರ್(ಅತಬಿಅ) ಅವರು ನಮಾಝಿನ ನಿಯಮಿತ ಪಾಲನೆಯ ಮಹತ್ವವನ್ನು ವಿವರಿಸಿ ಹೇಳಿದರು:

ಸರ್ವಶಕ್ತನಾದ ಅಲ್ಲಾಹನು ಪ್ರತಿಯೊಬ್ಬ ಮುಸ್ಲಿಮನ ಮೇಲೂ ದಿನಕ್ಕೆ ಐದು ಬಾರಿ ನಮಾಝನ್ನು ಕಡ್ಡಾಯಗೊಳಿಸಿದ್ದಾನೆ. ನಮಾಝು ಕೇವಲ ಒಂದು ಧಾರ್ಮಿಕ ಆಚರಣೆಯಲ್ಲ; ಅದು ಮನುಷ್ಯ ಮತ್ತು ಅವನ ಸೃಷ್ಟಿಕರ್ತನ ನಡುವಿನ ಜೀವಂತ ಸಂಬಂಧವನ್ನು ಬಲಪಡಿಸುವ ಅತ್ಯುತ್ತಮ ಸಾಧನವಾಗಿದೆ.

ನಿಯಮಿತವಾಗಿ ಹಾಗೂ ವಿನಮ್ರತೆಯಿಂದ ನಮಾಝನ್ನು ಸಲ್ಲಿಸುವ ವ್ಯಕ್ತಿಯ ಹೃದಯದಲ್ಲಿ ಅಲ್ಲಾಹ್ ತಆಲಾದ ಮೇಲಿನ ಪ್ರೀತಿ, ಭಯ ಮತ್ತು ಮಹಿಮೆ ದಿನದಿಂದ ದಿನಕ್ಕೆ ಹೆಚ್ಚುತ್ತವೆ. ಇದೇ ನಿಜವಾದ ಈಮಾನ್‌ನ ಗುರುತು.


ಹುಝೂರ್ ಅನ್ವರ್(ಅತಬಿಅ) ಅವರು ಮತ್ತೊಮ್ಮೆ ಒತ್ತಿಹೇಳಿದರು:

ನಿಜವಾದ ಈಮಾನ್ ಎಂದರೆ, ಮನುಷ್ಯನು ತನ್ನ ಎಲ್ಲಾ ಅಗತ್ಯಗಳು, ಕಷ್ಟಗಳು ಮತ್ತು ಆಶೆಗಳನ್ನೆಲ್ಲ ಅಲ್ಲಾಹ್ ತಆಲಾ ಅವರ ಸನ್ನಿಧಿಯಲ್ಲೇ ಅರ್ಪಿಸುವುದು. ಒಬ್ಬ ಮೊಮಿನ್ ಸಂಕಷ್ಟದಲ್ಲಿಯೂ, ಸಮೃದ್ಧಿಯಲ್ಲಿಯೂ ತನ್ನ ರಬ್ಬಿನ ಮೇಲೆಯೇ ಸಂಪೂರ್ಣ ಭರವಸೆ ಇಡುತ್ತಾನೆ.

ಈ ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ಅವರ ಅತ್ಯಂತ ಸುಂದರವಾದ ಉದಾಹರಣೆಯನ್ನು ಉಲ್ಲೇಖಿಸಿ ಹುಝೂರ್ ಅನ್ವರ್(ಅತಬಿಅ) ಅನ್ವರ್ ಅವರು ಹೇಳಿದರು: ಹಗಲು ಮತ್ತು ರಾತ್ರಿ ಒಂದೇ ಸಮಯದಲ್ಲಿ ಒಂದಾಗಲಾರವು; ಅದೇ ರೀತಿ ನಿಜವಾದ ಈಮಾನ್ ಮತ್ತು ಪಾಪವೂ ಒಂದೇ ಹೃದಯದಲ್ಲಿ ಒಂದಾಗಿ ಉಳಿಯಲಾರವು. ನಿಜವಾದ ಈಮಾನ್ ಹೃದಯದಲ್ಲಿ ನೆಲೆಸಿದಾಗ, ಅದು ಪಾಪದ ಕತ್ತಲೆಯನ್ನು ದೂರಮಾಡಿ ಧರ್ಮನಿಷ್ಠೆಯ ಬೆಳಕನ್ನು ಹರಡುತ್ತದೆ.

ಮುಂದೆ ಹುಝೂರ್ ಅನ್ವರ್(ಅತಬಿಅ) ಅವರು 'ಬೈಅತ್' ನ ನಿಜವಾದ ಅರ್ಥವನ್ನು ವಿವರಿಸಿದರು. ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್)

*(ಪುಟ ಸಂಖೆ 11 ರಲ್ಲಿ ಮುಂದುವರಿಸಲಾಗಿದೆ)*



# ಖುತ್‌ಬ ಜುಮುಅ

## ಹಝ್ರತ್ ಪೈಗಂಬರ್(ಸ)ರ ದಾನಶೀಲತೆಯ ಸುಂದರ ಪ್ರಸ್ತಾವನೆ.

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **12–06–2026** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِينَ ـ اَلرَّحْمٰنِ الرَّحِيمِ ـ مٰلِكِ يَوْمِ الدِّينِ ـ

إِيَّاكَ نَعْبُدُ وَإِيَّاكَ نَسْتَعِينُ ـ اِهْدِنَا الصِّرَاطَ الْمُسْتَقِيمَ ـ

صِرَاطَ الَّذِينَ أَنْعَمْتَ عَلَيْهِمْ غَيْرِ الْمَغْضُوبِ عَلَيْهِمْ وَلَا الضَّالِّينَ ـ

**'ಅಲ್ಲಧೀನ ಯುನ್‌ಫಿಖೂನ ಅಮ್ವಾಲಹುಮ್ ಬಿಲ್ಲೈಲಿ ವನ್ನಹಾರಿ ಸಿರ್ರನ್ ವಅಲಾನಿಯತನ್ ಫಲಹುಮ್ ಅಜ್ರುಹುಮ್ ಇನ್‌ದ ರಬ್ಬಿಹಿಮ್ ವಲಾ ಖೌಫುನ್ ಅಲೈಹಿಮ್ ವಲಾ ಹುಮ್ ಯಹ್‌ಝನೂನ್.' 'ವಫೀ ಅಮ್ವಾಲಿಹಿಮ್ ಹಕ್ಕುಲ್ಲಿಸ್ಸಾಯಿಲಿ ವಲ್ ಮಹ್‌ರೂಮ್.'**

ನಾನು ಪಠಿಸಿದ ಮೊದಲ ಆಯತ್ ಸೂರಃ ಬಖರದಿಂದಾಗಿದೆ. ಅದರ ಅರ್ಥ: 'ಯಾರು ತಮ್ಮ ಸಂಪತ್ತನ್ನು ಹಗಲು–ರಾತ್ರಿ, ಗುಪ್ತವಾಗಿ ಮತ್ತು ಬಹಿರಂಗವಾಗಿ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುತ್ತಾರೋ, ಅವರಿಗೆ ಅವರ ಪ್ರಭುವಿನ ಬಳಿ ಅವರ ಪ್ರತಿಫಲ ಸುರಕ್ಷಿತವಾಗಿದೆ. ಅವರಿಗೆ ಯಾವುದೇ ಭಯವಿರದು, ಮತ್ತು ಅವರು ದುಃಖಿತರೂ ಆಗಲಾರರು.' ಎರಡನೆಯ ಆಯತ್ ಸೂರಃ ಅದ್ಧಾರಿಯಾತ್‌ನದ್ದು. ಸೂರಃ ಅದ್ಧಾರಿಯಾತ್‌ನಲ್ಲಿ ಅಲ್ಲಾಹನು ಹೀಗೆ ಹೇಳುತ್ತಾನೆ: 'ಅವರ ಸಂಪತ್ತಿನಲ್ಲಿ ಬೇಡುವವರಿಗೂ ಹಕ್ಕಿದೆ ಮತ್ತು ಯಾರು ಬೇಡದವರಿಗೂ ಹಕ್ಕಿದೆ.'

ಇಂದು ನಾನು ಹಝ್ರತ್ ಪೈಗಂಬರ್(ಸ)ರ ಔದಾರ್ಯ ಮತ್ತು ದಾನಶೀಲತೆಯ ಮಾದರಿಯ ಕುರಿತು ಕೆಲವು ವರದಿಗಳನ್ನು ಹೇಳುತ್ತೇನೆ. ಈ ಬಗ್ಗೆ ನಬಿ(ಸ) ಸತ್ಯವಿಶ್ವಾಸಿಗಳ ಗಮನವನ್ನು ಹೇಗೆ ಪದೇಪದೇ ಸೆಳೆದಿದ್ದರು ಮತ್ತು ಅದೇ ರೀತಿ ನಬಿ(ಸ)ರ ಸ್ವಂತ ಕೃತ್ಯ ಹೇಗಿತ್ತು ಎಂಬುದು ಈ ವರದಿಗಳಿಂದ ತಿಳಿದುಬರುತ್ತದೆ. ನಾನು ಪಠಿಸಿದ ಈ ಆಯತ್‌ಗಳಲ್ಲಿ ಹಾಗೂ ಇತರ ಅನೇಕ ಆಯತ್‌ಗಳಲ್ಲಿಯೂ, ಅಲ್ಲಾಹನು ದೇವನ ಹಕ್ಕುಗಳನ್ನು ಮತ್ತು ಸೃಷ್ಟಿಗಳ ಹಕ್ಕುಗಳನ್ನು ಪೂರೈಸುವ ಕಡೆಗೆ, ಧಾರ್ಮಿಕ ಅಗತ್ಯಗಳನ್ನು ಹಾಗೂ ನಿರ್ಗತಿಕರ ಅಗತ್ಯಗಳನ್ನು ಪೂರೈಸುವ ಕಡೆಗೆ ಗಮನ ಸೆಳೆದಿದ್ದಾನೆ. ಈ ಆದೇಶದ ಅಡಿಯಲ್ಲಿ ಹಝ್ರತ್ ಪೈಗಂಬರ್(ಸ) ನಿಜವಾದ ಸತ್ಯವಿಶ್ವಾಸಿಗಳಿಗೂ ಈ ಕಡೆಗೆ ಗಮನ ಸೆಳೆದಿದ್ದಾರೆ, ಎಲ್ಲಕ್ಕಿಂತ ಹೆಚ್ಚಾಗಿ ತಮ್ಮ ಮಾದರಿಯನ್ನು ಪ್ರಸ್ತುತಪಡಿಸಿದ್ದಾರೆ ಮತ್ತು ಅಲ್ಲಾಹನ ಆದೇಶಗಳ ಪ್ರಾಯೋಗಿಕ ಚಿತ್ರಣವನ್ನು ತಮ್ಮ ಮಾದರಿಯಿಂದ ನಮಗೆ ತೋರಿಸಿಕೊಟ್ಟಿದ್ದಾರೆ.

ಹಾಗಾಗಿ, ಒಂದು ಗುಣ ಮಾತ್ರವಲ್ಲ, ಬದಲಾಗಿ ನಬಿ(ಸ)ರ ಜೀವನದ ಪ್ರತಿಯೊಂದು ಕ್ಷಣವೂ ಪವಿತ್ರ ಖುರ್‌ಆನ್‌ಗೆ ಅನುಗುಣವಾಗಿತ್ತು; ಆದ್ದರಿಂದಲೇ ಹಝ್ರತ್ ಆಯಿಶಾ(ರ) ನಬಿ(ಸ)ರ ಗುಣಗಳ ಬಗ್ಗೆ **'ಕಾನ ಖುಲುಖುಹುಲ್ ಖುರ್‌ಆನ್'** ಎಂದು ಹೇಳಿದ್ದರು. (ಮುಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ–8, ಪುಟ–144, ಹದೀಸ್ ಸಂಖ್ಯೆ–25108, ಮಕ್ತಬ ಆಲಮುಲ್ ಕುತುಬ್ ಬೈರುತ್ 1998)

ಅಂದರೆ 'ನಿಮ್ಮ ನೈತಿಕತೆಯು ಪವಿತ್ರ ಖುರ್‌ಆನ್‌ಗೆ ಸಂಪೂರ್ಣ ಅನುಗುಣವಾಗಿತ್ತು.' ಯಾವುದೇ ಗುಣವನ್ನು ತೆಗೆದುಕೊಂಡರೂ ನಬಿ(ಸ) ಅದರ ಅತ್ಯುನ್ನತ ಉದಾಹರಣೆಯಾಗಿದ್ದರು, ಅದಕ್ಕಿಂತ ಮಿಗಿಲಾದ ಬೇರೆ ಯಾವ ಉದಾಹರಣೆಯನ್ನೂ ಪ್ರಸ್ತುತಪಡಿಸಲು ಸಾಧ್ಯವಿಲ್ಲ. ಹೇಗಿದ್ದರೂ, ನಾನು ಹೇಳಿದಂತೆ, ಇಂದು ನಾನು ನಬಿ(ಸ)ರ ಔದಾರ್ಯ ಮತ್ತು ದಾನಶೀಲತೆಯ ಗುಣದ ಬಗ್ಗೆ ವರದಿಗಳನ್ನು ಪ್ರಸ್ತುತಪಡಿಸುತ್ತೇನೆ.

ಹಝ್ರತ್ ಅನಸ್(ರ) ವಿವರಿಸುತ್ತಾರೆ: ನಬಿ(ಸ) ಈ ಪ್ರಾರ್ಥನಾ ಪದಗಳೊಂದಿಗೆ ದುಆ ಮಾಡುತ್ತಿದ್ದರು: **'ಅಲ್ಲಾಹುಮ್ಮ ಇನ್ನೀ ಅಊಝುಬಿಕ ಮಿನಲ್ ಬುಖ್ಲಿ ವಲ್ ಕಸಲಿ ವ ಅರ್ಝಲಿಲ್ ಉಮುರಿ ವ ಅಝಾಬಿಲ್ ಖಬ್ರಿ ವ ಫಿತ್ನತಿಲ್ ಮಹ್ಯಾ ವಲ್ ಮಮಾತ್.'** ಅಂದರೆ: 'ಹೇ ಅಲ್ಲಾಹ್, ನಾನು ಜಿಪುಣತನದಿಂದ, ಸೋಮಾರಿತನದಿಂದ, ಮುದಿವಯಸ್ಸಿನ ಕೆಟ್ಟ ಸ್ಥಿತಿಯಿಂದ ಮತ್ತು ಖಬರಿನ ಶಿಕ್ಷೆಯಿಂದ ಹಾಗೂ ಜೀವನ ಮತ್ತು ಮರಣದ ಪರೀಕ್ಷೆಗಳಿಂದ ನಿನ್ನ ಆಶ್ರಯ ಬೇಡುತ್ತೇನೆ.' (ಸಹೀಹ್ ಮುಸ್ಲಿಮ್ ಉರ್ದು ಅನುವಾದ, ಸಂಪುಟ–14, ಪುಟ–79, ಕಿತಾಭುಝ್ಝಿಕರ್ ವದುಆ ವತ್ತೌಬಃ...., ಹದೀಸ್ ಸಂಖ್ಯೆ–4865, ನೂರ್ ಫೌಂಡೇಶನ್)

ಅದೇ ರೀತಿ ಈ ಬಗ್ಗೆ ಮತ್ತೊಂದು ದುಆ ಕೂಡ ಇದೆ. ಹಝ್ರತ್ ಅನಸ್(ರ) ಅವರಿಂದಲೇ ವರದಿಯಾಗಿದೆ, ಅವರು ಹೇಳುತ್ತಾರೆ: ನಬಿ(ಸ) ಈ ದುಆ ಮಾಡುತ್ತಿದ್ದರು: **'ಅಲ್ಲಾಹುಮ್ಮ ಇನ್ನೀ ಅಊಝುಬಿಕ ಮಿನಲ್ ಹಮ್ಮಿ ವಲ್ ಹಝನಿ ವಲ್ ಅಜ್‌ಝಿ ವಲ್ ಕಸಲಿ ವಲ್ ಜುಬ್ನಿ ವಲ್ ಬುಖ್ಲಿ ವ ಝಲಇದ್ದೈನಿ ವ ಗಲಬತಿರ್ರಿಜಾಲ್.'** ಅಂದರೆ: 'ಹೇ ಅಲ್ಲಾಹ್, ನಾನು ಚಿಂತೆ ಮತ್ತು ದುಃಖದಿಂದ, ಅಸಹಾಯಕತೆ ಮತ್ತು ಸೋಮಾರಿತನದಿಂದ, ಹೇಡಿತನ ಮತ್ತು ಜಿಪುಣತನದಿಂದ, ಸಾಲದ ಹೊರೆಯಿಂದ ಮತ್ತು ಜನರ ದಬ್ಬಾಳಿಕೆಯಿಂದ ನಿನ್ನಲ್ಲಿ ಅಭಯ ಯಾಚಿಸುತ್ತೇನೆ.'
(ಸಹೀಹ್ ಬುಖಾರಿ ಅನುವಾದ, ಸಂಪುಟ–15, ಪುಟ–109, ಕಿತಾಬುದ್ದಅ್‌ವಾತ್, ಹದೀಸ್–6369, ನಝ್ಹಾರತ್ ಇಶಾಅತ್)

ಅದೇ ರೀತಿ, ದೇವನ ಮಾರ್ಗದಲ್ಲಿ ಖರ್ಚು ಮಾಡುವ ಮತ್ತು ಜನರ ಸಹಾಯ ಮಾಡುವ ಬಗ್ಗೆಯೂ ನಬಿ(ಸ) ಸತ್ಯವಿಶ್ವಾಸಿಗಳಿಗೆ ಉಪದೇಶ ನೀಡಿದ್ದರು.

ಹಝ್ರತ್ ಅಸ್ಮಾಅ(ರ) ವಿವರಿಸುತ್ತಾರೆ: ನಬಿ(ಸ) ನನ್ನೊಡನೆ ಹೇಳಿದರು: 'ಚೀಲದ ಬಾಯಿಯನ್ನು ಕಟ್ಟಿಡಬೇಡಿ, ಇಲ್ಲದಿದ್ದರೆ ನಿಮ್ಮಿಂದಲೂ ತಡೆಹಿಡಿಯಲಾಗುವುದು.' ಅಂದರೆ, ಯಾವುದರಲ್ಲಿ ನೀವು ನಿಮ್ಮ ಸಂಪತ್ತನ್ನು ಇಟ್ಟಿದ್ದೀರೋ ಅದರ ಬಾಯಿಯನ್ನು ಮುಚ್ಚಬೇಡಿ, ಅಗತ್ಯಕ್ಕೆ ತಕ್ಕಂತೆ ಖರ್ಚು ಮಾಡಿ ಹಾಗೂ ಇತರರಿಗೆ ಸಹಾಯ ಮಾಡಿರಿ. ಮತ್ತೊಂದು ವರದಿಯಲ್ಲಿ ಈ ಪದಗಳಿವೆ: 'ಎಣಿಸುತ್ತಲೇ ಇರಬೇಡಿ, ಇಲ್ಲದಿದ್ದರೆ ಅಲ್ಲಾಹನು ಕೂಡ ಎಣಿಸಿಯೇ ನೀಡುವನು.' (ಸಹೀಹ್ ಬುಖಾರಿ ಅನುವಾದ, ಸಂಪುಟ–03, ಪುಟ–55–56, ಕಿತಾಬುದ್ದಅ್‌ವಾತ್, ಹದೀಸ್–6369, ನಝ್ಹಾರತ್ ಇಶಾಅತ್)

ಅಂದರೆ, ಅಲ್ಲಾಹನು ನಿಮಗೆ ಸಂಪತ್ತನ್ನು ದಯಪಾಲಿಸಿದ್ದರೆ ನೀವು ಅವನಿಗೆ ಕೃತಜ್ಞತೆಯ ಹಕ್ಕನ್ನು ಪೂರೈಸಿರಿ; ಮತ್ತು ಕೃತಜ್ಞತೆಯ ಹಕ್ಕು ಏನೆಂದರೆ, ಇತರರಿಗೆ ಸಹಾಯ ಮಾಡುವುದು, ಆಗ ಅಲ್ಲಾಹನು ನಿಮಗೆ ಇನ್ನೂ ಹೆಚ್ಚು ನೀಡುವನು.

ಹಝ್ರತ್ ಅಬೂ ಹುರೈರಾ(ರ)ರಿಂದ ವರದಿಯಾಗಿದೆ, ನಬಿ(ಸ) ಹೇಳಿದರು: 'ದಾನ ಮಾಡುವವನು ಅಲ್ಲಾಹನಿಗೆ ಹತ್ತಿರವಾಗಿರುತ್ತಾನೆ, ಸ್ವರ್ಗಕ್ಕೆ ಹತ್ತಿರವಾಗಿರುತ್ತಾನೆ, ಜನರಿಗೆ ಹತ್ತಿರವಾಗಿರುತ್ತಾನೆ ಮತ್ತು ನರಕಾಗ್ನಿಯಿಂದ ದೂರವಿರುತ್ತಾನೆ. ಆದರೆ ಜಿಪುಣನು ಅಲ್ಲಾಹನಿಂದ ದೂರವಿರುತ್ತಾನೆ, ಸ್ವರ್ಗದಿಂದ ದೂರವಿರುತ್ತಾನೆ, ಜನರಿಂದ ದೂರವಿರುತ್ತಾನೆ ಮತ್ತು ನರಕಾಗ್ನಿಗೆ ಹತ್ತಿರವಾಗಿರುತ್ತಾನೆ. ಮತ್ತು ದಾನ ಮಾಡುವವನಾದ ಓರ್ವ ಅಜ್ಞಾನಿಯು, ಜಿಪುಣನಾದ ಓರ್ವ ಆರಾಧಕನಿಗಿಂತಲೂ ಅಲ್ಲಾಹನ ದೃಷ್ಟಿಯಲ್ಲಿ ಹೆಚ್ಚು ಪ್ರಿಯನಾಗಿದ್ದಾನೆ.' (ಜಾಮಿ ಅತ್ತಿಮಿಧ್ಹಿ, ಅಬ್ವಾಬುಲ್ ಬಿರ್ರಿ ವಸ್ಸಿಲ ಅನ್ ರಸೂಲುಲ್ಲಾಹ್(ಸ) ಮಾಜಾಅ ಫಿಸ್ಸಖಾ, ಹದೀಸ್–1961)

ಓರ್ವ ಜಿಪುಣನು ಎಷ್ಟೇ ಆರಾಧನೆ ಮಾಡುವವನಾಗಿದ್ದರೂ ಸರಿ, ಆದರೆ ಅವನಿಗೆ ಹೋಲಿಸಿದರೆ ಒಬ್ಬ ಅಜ್ಞಾನಿಯು ದಾನಶೀಲನಾಗಿದ್ದರೆ, ಅಲ್ಲಾಹನು ಅವನನ್ನು ಹೆಚ್ಚು ಇಷ್ಟಪಡುತ್ತಾನೆ.

ಅದೇ ರೀತಿ ಹಝ್ರತ್ ಅಬೂಬಕರ್ ಸಿದ್ದೀಖ್(ರ) ವಿವರಿಸಿದರು, ನಬಿ(ಸ) ಹೇಳಿದರು: 'ವಂಚಕನು, ಮತ್ತು ಜಿಪುಣನು, ಮತ್ತು ಮಾಡಿದ ಉಪಕಾರವನ್ನು ಎತ್ತಿತೋರಿಸುವವನು ಸ್ವರ್ಗವನ್ನು ಪ್ರವೇಶಿಸಲಾರನು.'

(ಜಾಮಿ ಅತ್ತಿಮಿಧ್ಹಿ, ಅಬ್ವಾಬುಲ್ ಬಿರ್ರಿ ವಸ್ಸಿಲ ಅನ್ ರಸೂಲುಲ್ಲಾಹ್(ಸ) ಮಾಜಾಅ ಫಿಲ್ ಬುಖ್ಹುಲ್, ಹದೀಸ್–1963)

ಇವು ಮೂರು ಗುಣಗಳಾಗಿವೆ; ವಂಚನೆ ಮಾಡುವವನು, ಜಿಪುಣ, ಮತ್ತು ಯಾವುದೇ ವಿಷಯದಲ್ಲಿ ಹೆಚ್ಚಾಗಿ ಉಪಕಾರವನ್ನು ಎತ್ತಿತೋರಿಸುವವನು, ಇವರು ಸ್ವರ್ಗವನ್ನು ಪ್ರವೇಶಿಸಲಾರರು.

ಅದೇ ರೀತಿ ಒಂದು ವರದಿಯಿದೆ, ಹಝ್ರತ್ ಅಬೂ ಹುರೈರಾ(ರ) ವಿವರಿಸಿದರು, ರಸೂಲುಲ್ಲಾಹ್(ಸ) ಹೇಳಿದರು: 'ಸತ್ಯವಿಶ್ವಾಸಿಯು ಸರಳ ಸ್ವಭಾವದವನು ಮತ್ತು ದಾನಶೀಲನಾಗಿರುತ್ತಾನೆ, ಆದರೆ ದುಷ್ಟನು (ಫಾಜಿರ್) ವಂಚಕ ಮತ್ತು ನೀಚನಾಗಿರುತ್ತಾನೆ.' (ಜಾಮಿ ಅತ್ತಿಮಿಧ್ಹಿ, ಅಬ್ವಾಬುಲ್ ಬಿರ್ರಿ ವಸ್ಸಿಲ ಅನ್ ರಸೂಲುಲ್ಲಾಹ್(ಸ) ಮಾಜಾಅ ಫಿಲ್ ಬುಖ್ಹುಲ್, ಹದೀಸ್–1964)

ಆದ್ದರಿಂದ ಸರಳ ಸ್ವಭಾವ ಎಂದರೆ – ನಮ್ಮ ಭಾಷೆಯಲ್ಲಿ ಕೆಲವರು ಸರಳ ಸ್ವಭಾವ ಎಂದರೆ ಕಡಿಮೆ ಬುದ್ಧಿಯುಳ್ಳವನು ಎಂದು ಭಾವಿಸುತ್ತಾರೆ.

ಆದರೆ ಸತ್ಯವಿಶ್ವಾಸಿಯ ಬಗ್ಗೆ ಬಂದಿರುವುದೇನೆಂದರೆ, ಸತ್ಯವಿಶ್ವಾಸಿಯು ವಿವೇಕದಲ್ಲಿ ಬಹಳ ಮುಂದಿರುತ್ತಾನೆ, ಮತ್ತು ಸತ್ಯವಿಶ್ವಾಸಿಯ ವಿವೇಕಕ್ಕೂ ಬಹಳ ಪ್ರಾಮುಖ್ಯತೆಯಿದೆ. (ಜಾಮಿ ಅತ್ತಿಮಿಧಿ, ಕಿತಾಬ್ ತಫ್ಸೀರುಲ್ ಖುರ್‌ಆನ್, ಬಾಬ್ ವಮಿನ್ ಸೂರತುಲ್ ಹಜರ್, ಹದೀಸ್–3127)

ಅದರಿಂದ ಎಚ್ಚರದಿಂದಿರಬೇಕು. ಇಲ್ಲಿ ಅರ್ಥವೇನೆಂದರೆ, ಆತನು ಜಗಳಗಳಿಂದ ದೂರವಿರುವವನು ಮತ್ತು ಉದಾರನಾಗಿರುತ್ತಾನೆ, ಮತ್ತು ಬಹಳ ವಿಶಾಲ ಹೃದಯದವನು ಹಾಗೂ ಜನರಿಂದ ಇಷ್ಟಪಡಲ್ಪಡುವವನೂ, ಗೌರವಾರ್ಹನೂ ಆಗಿರುತ್ತಾನೆ. ಹಾಗಾಗಿ, ಇದು ಸತ್ಯವಿಶ್ವಾಸಿಯ ಗುರುತಾಗಿದೆ, ಮತ್ತು ಇದು ನಮ್ಮನ್ನೇ ನಾವು ವಿಮರ್ಶಿಸಿಕೊಳ್ಳಲು ನಮಗೊಂದು ಮಾನದಂಡವಾಗಿದೆ. ಒಂದು ವರದಿಯಲ್ಲಿ, ಮುತರಿಫ್ ತಮ್ಮ ತಂದೆಯಿಂದ ವರದಿ ಮಾಡುತ್ತಾರೆ: 'ನಾನು ನಬಿ(ಸ)ರ ಬಳಿಗೆ ಬಂದಾಗ, ಅವರು 'ಅಲ್‌ಹಾಕುಮುತ್ತಕಾಸುರ್' ಪಠಿಸುತ್ತಿದ್ದರು. ಅವರು ಹೇಳಿದರು: 'ಆದಮನ ಪುತ್ರ (ಮನುಷ್ಯ) ಹೇಳುತ್ತಾನೆ: ನನ್ನ ಸಂಪತ್ತು, ನನ್ನ ಸಂಪತ್ತು.' ಅಂದರೆ, ಶ್ರೀಮಂತನಾದ ಮನುಷ್ಯನು, 'ಇದು ನನ್ನ ಸಂಪತ್ತು, ನನ್ನ ಸಂಪತ್ತು' ಎಂದು ಹೇಳುತ್ತಾನೆ. ನಬಿ(ಸ) ಹೇಳಿದರು, 'ಹೇ ಆದಮನ ಪುತ್ರ, ನೀನು ತಿಂದು ಮುಗಿಸಿದ್ದು, ಧರಿಸಿ ಹಳೆಯದನ್ನಾಗಿ ಮಾಡಿದ್ದು, ಅಥವಾ ದಾನ ಮಾಡಿ ಮುಂದೆ ಕಳುಹಿಸಿದ್ದು ನಿನ್ನ ಸಂಪತ್ತಾಗಿದೆ.' (ಸಹೀಹ್ ಮುಸ್ಲಿಮ್ ಅನುವಾದ, ಸಂಪುಟ–15, ಪುಟ–155, ಕಿತಾಬುಝ್ಝುಹುದ್ ವರ್‍ರಖಾಯೆಖ್, ಹದೀಸ್–5244, ನೂರ್ ಫೌಂಡೇಷನ್)

ನಬಿ(ಸ) ಹೇಳಿದರು, 'ನಿನ್ನ ಸಂಪತ್ತೆಂದರೆ ನೀನು ಖರ್ಚು ಮಾಡಿದ್ದಾಗಿರಬಹುದು, ಆದರೆ ಅತ್ಯುತ್ತಮ ಸಂಪತ್ತು ನೀನು ದಾನ ಮಾಡಿರುವುದಾಗಿದೆ. ನೀನು ಅದನ್ನು ಅಲ್ಲಾಹನ ಸನ್ನಿಧಿಯಲ್ಲಿ ಸಮರ್ಪಿಸಿದೆ, ಅವನ ದಾಸರ ಹಕ್ಕುಗಳನ್ನು ಪೂರೈಸಲು ಸಮರ್ಪಿಸಿದೆ, ಅವನ ಮಾರ್ಗದಲ್ಲಿ ಖರ್ಚು ಮಾಡಿದೆ. ಆ ಸಂಪತ್ತೇ ಮುಂದಿನ ಲೋಕದಲ್ಲಿ ನಿನಗೆ ಹಲವು ಪಟ್ಟು ಹೆಚ್ಚಾಗಿ ಲಭಿಸುವುದು.' ಆದ್ದರಿಂದಲೇ ಅಲ್ಲಾಹನು ಹೇಳಿದ್ದಾನೆ, 'ಅವರಿಗೆ ಯಾವುದೇ ಭಯವಿರದು' (ಮೊದಲು ಆಯತ್‌ನಲ್ಲಿ ಹೇಳಿದಂತೆ), 'ಮತ್ತು ಅವರು ದುಃಖಿತರೂ ಆಗಲಾರರು.' ಏಕೆಂದರೆ ಅವರು ಮಾಡಿದ ತ್ಯಾಗಗಳು, ಅವರು ತೋರಿದ ಔದಾರ್ಯ ಮತ್ತು ದಾನಶೀಲತೆ, ಬೇರೆಯವರ ಮೇಲೆ ಖರ್ಚು ಮಾಡಿದ ತಮ್ಮ ಸಂಪತ್ತು, ಅದು ಅವರಿಗೆ ಮುಂದಿನ ಲೋಕದಲ್ಲಿ ಸಿಗುವುದು.

ಹಝ್ರತ್ ಅಬ್ದುಲ್ಲಾಹ್ ಬಿನ್ ಮಸೂದ್(ರ) ಹೇಳುತ್ತಿದ್ದರು, ನಬಿ(ಸ) ಹೇಳಿದರು: 'ಕೇವಲ ಎರಡು ವಿಷಯಗಳಲ್ಲಿ ಮಾತ್ರ ಅಸೂಯೆಪಡುವುದು ಅನುಮತಿಸಲಾಗಿದೆ. ಒಂದು, ಒಬ್ಬನಿಗೆ ಅಲ್ಲಾಹನು ಸಂಪತ್ತನ್ನು ನೀಡಿ, ಆಮೇಲೆ ಅದನ್ನು ಸೂಕ್ತ ಸ್ಥಳದಲ್ಲಿ, ಧಾರಾಳವಾಗಿ ಖರ್ಚು ಮಾಡುವ ಶಕ್ತಿಯನ್ನು ಪಡೆಯುವವನ ಬಗ್ಗೆ. ಮತ್ತೊಬ್ಬ, ಒಬ್ಬನಿಗೆ ಅಲ್ಲಾಹನು ವಿವೇಕ–ಜ್ಞಾನವನ್ನು ನೀಡಿದಾಗ ಅದರಂತೆ ತೀರ್ಮಾನಗಳನ್ನು ಮಾಡುವವನ, ಕಾರ್ಯನಿರ್ವಹಿಸುವವನ ಮತ್ತು ಇತರರಿಗೂ ಕಲಿಸುವವನ ಬಗ್ಗೆ ಅಸೂಯೆ ಪಡಬಹುದು.' (ಸಹೀಹ್ ಬುಖಾರಿ ಅನುವಾದ, ಸಂಪುಟ–1, ಪುಟ–144–145, ಕಿತಾಬುಲ್ ಇಲ್ಮ್, ಹದೀಸ್–73, ನಝ್ಝಾರತ್ ಇಶಾಅತ್)

ನಂತರ ಒಂದು ಸಂದರ್ಭದಲ್ಲಿ ಉಪದೇಶಿಸುತ್ತಾ ನಬಿ(ಸ) ಹೇಳಿದರು, ಹಝ್ರತ್ ಅಬೂ ಉಮಾಮಾ(ರ) ಹೇಳುತ್ತಾರೆ, ರಸೂಲುಲ್ಲಾಹ್(ಸ) ಹೇಳಿದರು: 'ಹೇ ಆದಮನ ಪುತ್ರ, ನಿನ್ನ ಅಗತ್ಯಕ್ಕಿಂತ ಹೆಚ್ಚಿನ ಸಂಪತ್ತನ್ನು ಖರ್ಚು ಮಾಡುವುದು ನಿನಗೆ ಉತ್ತಮವಾಗಿದೆ.' ಅಲ್ಲಾಹನು ನಿನಗೆ ನೀಡಿದ ಸಂಪತ್ತಿನಲ್ಲಿ, ನಿನ್ನ ಅಗತ್ಯಗಳನ್ನು ಖಂಡಿತ ಪೂರೈಸು, ಆದರೆ ಅದಕ್ಕಿಂತ ಹೆಚ್ಚಿನ ಸಂಪತ್ತನ್ನು ಖರ್ಚು ಮಾಡು. 'ಅದನ್ನು ತಡೆಹಿಡಿಯುವುದು ನಿನಗೆ ಕೆಟ್ಟದ್ದಾಗಿದೆ; ಮತ್ತು ನಿನ್ನ ಅಗತ್ಯಕ್ಕೆ ತಕ್ಕಷ್ಟು ಇಟ್ಟುಕೊಳ್ಳುವುದರ ಮೇಲೆ ನಿನ್ನನ್ನು ದೂಷಿಸಲಾಗುವುದಿಲ್ಲ.' (ನೀನು ನಿನ್ನ ಅಗತ್ಯವನ್ನು ಪೂರೈಸಲು ಸಂಪತ್ತನ್ನು ಇಟ್ಟುಕೊಂಡಿದ್ದೀಯಲ್ಲ, ಅದಕ್ಕಾಗಿ ನಿನ್ನನ್ನು ಪ್ರಶ್ನಿಸಲಾಗುವುದಿಲ್ಲ.) 'ಯಾರ ಪೋಷಣೆ ನಿನ್ನ ಜವಾಬ್ದಾರಿಯೋ, ಅವರಿಂದ ಶುರುಮಾಡು.' (ಖರ್ಚು ಮಾಡುವ ವಿಧಾನವೇನೆಂದರೆ, ನಿನ್ನ ಜವಾಬ್ದಾರಿಗಳೇನಿವೆಯೋ, ನಿನ್ನ ಮಕ್ಕಳಿದ್ದಾರೆ, ನಿನ್ನ ಹೆಂಡತಿ–ಮಕ್ಕಳಿದ್ದಾರೆ, ನಿನ್ನ ಬಡ ಸಂಬಂಧಿಕರಿದ್ದಾರೆ, ಅಥವಾ ಯಾರ ಪೋಷಣೆಯ ಜವಾಬ್ದಾರಿಯನ್ನು ನಿನಗೆ ವಹಿಸಲಾಗಿದೆಯೋ, ನಿನ್ನ ಸಂಪತ್ತಿನಿಂದ ಸಹಾಯ ಪಡೆಯಲು ಮೊದಲು ಅವರೇ ಹಕ್ಕುದಾರರಾಗಿದ್ದಾರೆ.) ಅನಂತರ ಹೇಳಿದರು: 'ಮೇಲಿನ ಕೈ (ಕೊಡುವ ಕೈ) ಕೆಳಗಿನ ಕೈಗಿಂತ (ಪಡೆಯುವ ಕೈಗಿಂತ) ಉತ್ತಮವಾಗಿದೆ.'
(ಸಹೀಹ್ ಮುಸ್ಲಿಮ್, ಅನುವಾದ ಸಂಪುಟ–4, ಪುಟ–209, ಕಿತಾಬುಝ್ಝಕಾತ್....., ಹದೀಸ್–1704, ನೂರ್ ಫೌಂಡೇಷನ್)

ಹಝ್ರತ್ ಅಬ್ದುಲ್ಲಾಹ್ ಬಿನ್ ಮಸೂದ್(ರ) ಹೇಳಿದರು, ನಬಿ(ಸ) ಕೇಳಿದರು: 'ನಿಮ್ಮಲ್ಲಿ ಯಾರಾದರೂ ತನಗಿಂತ ಹೆಚ್ಚಾಗಿ ತನ್ನ ಉತ್ತರಾಧಿಕಾರಿಯ ಸಂಪತ್ತನ್ನು ಹೆಚ್ಚು ಪ್ರೀತಿಸುವವನಿದ್ದಾನೆಯೇ?' (ನಾನು ಬಿಟ್ಟುಹೋಗುತ್ತಿರುವ ಸಂಪತ್ತು ನನ್ನ ಉತ್ತರಾಧಿಕಾರಿಗೆ ಸೇರುತ್ತದೆ, ಅದು ನನಗೆ, ನನ್ನ ಬಳಿ ಇಟ್ಟುಕೊಂಡಿರುವ ಅಥವಾ ನನ್ನ ಮೇಲೆ ಖರ್ಚು ಮಾಡುತ್ತಿರುವ ಸಂಪತ್ತಿಗಿಂತ ಹೆಚ್ಚು ಪ್ರಿಯವಾಗಿದೆ ಎಂದು ಯಾರಾದರೂ ಹೇಳಬಲ್ಲರೇ?) ಜನರು ಹೇಳಿದರು: 'ಯಾ ರಸೂಲುಲ್ಲಾಹ್, ನಮ್ಮಲ್ಲಿ ತನಗಿಂತ ಹೆಚ್ಚಾಗಿ ತನ್ನ ಸಂಪತ್ತನ್ನು ಪ್ರೀತಿಸದವನು ಯಾರೂ ಇಲ್ಲ.' (ಹೇಗಿದ್ದರೂ, ನಮ್ಮ ಬಳಿ ಇರುವುದೇ ನಮಗೆ ಹೆಚ್ಚು ಪ್ರಿಯವಾಗಿದೆ.) ನಬಿ(ಸ) ಹೇಳಿದರು: 'ಹಾಗಾದರೆ ಅವನ ಸಂಪತ್ತು ಎಂದರೆ ಅವನು ಅಲ್ಲಾಹನ ಮಾರ್ಗದಲ್ಲಿ ಮುಂದೆ ಕಳುಹಿಸಿದ್ದಾಗಿದೆ; ಮತ್ತು ಅವನ ಉತ್ತರಾಧಿಕಾರಿಯ ಸಂಪತ್ತು ಎಂದರೆ ಅವನು ಹಿಂದೆ ಬಿಟ್ಟುಹೋದದ್ದಾಗಿದೆ.' (ಸಹೀಹ್ ಬುಖಾರಿ ಅನುವಾದ, ಸಂಪುಟ–15, ಪುಟ–206–207, ಕಿತಾಬುರ್‍ರಿಖಾಕ್, ಹದೀಸ್–6442, ನಝ್ಝಾರತ್ ಇಶಾಅತ್)

ನೀನು ಏನು ಮುಂದೆ ಕಳುಹಿಸಿದೆಯೋ, ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿದೆಯೋ, ಬಡವರಿಗೆ ಸಹಾಯ ಮಾಡಿದೆಯೋ, ಅದೇ ಅತ್ಯುತ್ತಮವಾದದ್ದು. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೇಳಿದಂತೆ, ನಿನಗೆ ಕೊನೆಯಲ್ಲಿ ಅದರ ಪ್ರತಿಫಲ ಸಿಗುವುದು.

ಹಝ್ರತ್ ಪೈಗಂಬರ್(ಸ) ತಮ್ಮ ಸ್ವಂತ ಕೃತ್ಯವು, ಸಂಪತ್ತನ್ನು ಧಾರಾಳವಾಗಿ ಖರ್ಚು ಮಾಡುವ ಮತ್ತು ಅಲ್ಲಾಹನ ಮೇಲೆ ಭರವಸೆ ಇಡುವ ಬಗ್ಗೆ ಹೇಗಿತ್ತು? ಈ ಬಗ್ಗೆ ಹಝ್ರತ್ ಅಬ್ದುಲ್ಲಾಹ್ ಬಿನ್ ಮಸೂದ್(ರ) ವಿವರಿಸುತ್ತಾರೆ: ನಬಿ(ಸ) ಬಿಲಾಲ್(ರ) ಬಳಿಗೆ ಬಂದರು, ಮತ್ತು ಅವರ ಬಳಿ ಖರ್ಜೂರದ ಒಂದು ರಾಶಿಯಿತ್ತು. ನಬಿ(ಸ) ಕೇಳಿದರು: 'ಬಿಲಾಲ್, ಇದೇನು?' ಹಝ್ರತ್ ಬಿಲಾಲ್ ಹೇಳಿದರು: 'ಯಾ ರಸೂಲುಲ್ಲಾಹ್, ಇದನ್ನು ನಾನು ನಿಮಗಾಗಿ ಮತ್ತು ನಿಮ್ಮ ಅತಿಥಿಗಳಿಗಾಗಿ ಶೇಖರಿಸಿಟ್ಟಿದ್ದೇನೆ.' ನಬಿ(ಸ) ಹೇಳಿದರು: 'ಈ ಸಂಗ್ರಹದ ಮೇಲೆ ನರಕದ ಬಿಸಿಗಾಳಿ ಅಪ್ಪಳಿಸಬಹುದು ಎಂಬ ಭಯ ನಿನಗಿಲ್ಲವೇ?' ನಂತರ ನಬಿ(ಸ) ಬಿಲಾಲ್(ರ)ಗೆ ಉಪದೇಶಿಸುತ್ತಾ ಹೇಳಿದರು: 'ಹೇ ಬಿಲಾಲ್, ಖರ್ಚು ಮಾಡುತ್ತಲೇ ಇರು, ಮತ್ತು ಸಿಂಹಾಸನದೊಡೆಯನಾದ ದೇವನು ಇರುವಾಗ ಬಡತನ ಮತ್ತು ಹಸಿವಿನ ಬಗ್ಗೆ ಭಯಪಡಬೇಡ.'

(ಅಲ್‌ಮುಜಮುಲ್ ಕಬೀರ್ ಅತ್ತಬರಾನಿ, ಭಾಗ–1, ಪುಟ–340, ಹದೀಸ್–1020, ಮಕ್ತಬ ಅತ್ತೈಮಿಯ, ಅಲ್‌ಖಾಹಿರಃ)

ಈ ಬಗ್ಗೆ ನಬಿ(ಸ) ಮಾದರಿಯ ಮತ್ತೊಂದು ಉದಾಹರಣೆಯಿದೆ. ಹಝ್ರತ್ ಆಯಿಶಾ(ರ) ವಿವರಿಸುತ್ತಾರೆ: ನಬಿ(ಸ) ಒಂದು ಕುರಿಯನ್ನು ಕೊಯ್ಯಲು ಹೇಳಿದರು ಮತ್ತು ಅದರ ಮಾಂಸವನ್ನು ಬಡವರಿಗೆ ಹಂಚಿದರು ಮತ್ತು ಮನೆಯಲ್ಲಿ ತಿನ್ನಲು ಸ್ವಲ್ಪ ಇಟ್ಟುಕೊಂಡರು. ನಬಿ(ಸ) ಕೇಳಿದರು: 'ಎಷ್ಟು ಮಾಂಸ ಉಳಿದಿದೆ?' ಹಝ್ರತ್ ಆಯಿಶಾ ಉತ್ತರಿಸಿದರು: 'ಮುಂಗಾಲು ಮಾತ್ರ ಉಳಿದಿದೆ.' (ಕುರಿಯ ಮುಂದಿನ ಕಾಲು, ಕಾಲು ಮಾತ್ರ ಉಳಿದಿದೆ.) ಇದನ್ನು ಕೇಳಿ ನಬಿ(ಸ) ಹೇಳಿದರು: 'ನೀನು ಹಂಚಿದ್ದೆಲ್ಲ ಸಂಪತ್ತೂ ಉಳಿದಿದೆ, ಕೇವಲ ಈ ಮುಂಗಾಲನ್ನು ಹೊರತುಪಡಿಸಿ; ಏಕೆಂದರೆ ಇದು ಯಾರಿಗೂ ಉಪಯೋಗಕ್ಕೆ ಬರಲಿಲ್ಲ, ನಮ್ಮ ಊಟಕ್ಕಾಗಿ ನೀನು ಇಟ್ಟುಕೊಂಡಿದ್ದೀಯಾ. ಮುಂದಿನ ಲೋಕದಲ್ಲಿ, ನೀನು ಏನು ಖರ್ಚು ಮಾಡಿದೆಯೋ ಅದೇ ಕೆಲಸಕ್ಕೆ ಬರುತ್ತದೆ.' (ಜಾಮಿ ಅತ್ತಿಮಿಧಿ, ಕಿತಾಬ್ ಸಿಫ್ಫತುಲ್ ಖಿಯಾಮಃ...., ಬಾಬ್–33, ಹದೀಸ್–2470)

ಹಝ್ರತ್ ಮುಆವಿಯಾ(ರ) ಭಾಷಣ ಮಾಡುತ್ತಾ ಹೇಳಿದರು: ನಬಿ ಕರೀಮ್(ಸ) ಹೀಗೆ ಹೇಳುತ್ತಿರುವುದನ್ನು ನಾನು ಕೇಳಿದ್ದೇನೆ, 'ನಾನು ಹಂಚುವವನು ಮಾತ್ರ, ನೀಡುವವನು ಅಲ್ಲಾಹನಾಗಿದ್ದಾನೆ.'
(ಸಹೀಹ್ ಬುಖಾರಿ ಅನುವಾದ, ಸಂಪುಟ–1, ಪುಟ–144–145, ಕಿತಾಬುಲ್ ಇಲ್ಮ್, ಹದೀಸ್–71, ನಝ್ಝಾರತ್ ಇಶಾಅತ್)

ಔದಾರ್ಯ ಮತ್ತು ದಾನಶೀಲತೆಯ ಗುಣವು ರಸೂಲುಲ್ಲಾಹ್(ಸ)ರ ಪವಿತ್ರ ವ್ಯಕ್ತಿತ್ವದಲ್ಲಿ ಪ್ರವಾದಿತ್ವಕ್ಕಿಂತ ಮೊದಲೇ ಅತ್ಯುನ್ನತ ಮಟ್ಟದಲ್ಲಿತ್ತು. ಇದರ ಸಾಕ್ಷ್ಯವನ್ನು ನಾವು ಓದಿದಂತೆ, ನಬಿ(ಸ)ರ ಪವಿತ್ರ ಪತ್ನಿ ಹಝ್ರತ್ ಖದೀಜಾ(ರ), ನಬಿ(ಸ)ರ ಮೇಲೆ ಮೊದಲ ವಹ್ಯ್ (ದಿವ್ಯವಾಣಿ) ಅವತೀರ್ಣವಾದಾಗ ಮತ್ತು ನಬಿ(ಸ) ಗಾಬರಿಗೊಂಡು ಮನೆಗೆ ಬಂದಾಗ ನೀಡಿದ್ದರು. ಹಝ್ರತ್ ಖದೀಜಾ(ರ) ಹೇಳಿದ್ದರು: 'ಗಾಬರಿಪಡುವ ಅಗತ್ಯವಿಲ್ಲ. ದೇವನಾಣೆ, ಅಲ್ಲಾಹನು ನಿಮ್ಮನ್ನು ಎಂದಿಗೂ ಅವಮಾನಿಸಲಾರ. ನೀವು ಸಂಬಂಧಗಳನ್ನು ಬೆಸೆಯುತ್ತೀರಿ, ಅಸಹಾಯಕರ ಹೊರೆಯನ್ನು ಹೊರುತ್ತೀರಿ, ಯಾರು ಮಾಡದ ಸತ್ಕಾರ್ಯಗಳನ್ನು ಮಾಡುತ್ತೀರಿ, ಅತಿಥಿ ಸತ್ಕಾರ ಮಾಡುತ್ತೀರಿ ಮತ್ತು ನಿಜವಾದ ಸಂಕಷ್ಟಗಳ ಸಮಯದಲ್ಲಿ ಸಹಾಯ ಮಾಡುತ್ತೀರಿ.' (ದಾಎರ ಮಾರಿಫ಼್ ಸೀರತ್ ಮುಹಮ್ಮದ್(ಸ), ಸಂಪುಟ–11, ಪುಟ–48, ಬಝ್ಮ್ ಇಖ್ಬಾಲ್ ಲಾಹೋರ್, ಸಹೀಹ್ ಬುಖಾರಿ ಕಿತಾಬ್ ಬದಅಲ್ ವಹೀ, ಹದೀಸ್–3)

ಒಂದು ವರದಿಯಿದೆ, ಹಝ್ರತ್ ಅಬೂಸಯೀದ್ ಖುದ್ರಿ(ರ) ವಿವರಿಸಿದರು: ರಸೂಲುಲ್ಲಾಹ್(ಸ) ಹೇಳಿದರು: 'ಎರಡು ಅಭ್ಯಾಸಗಳು ಸತ್ಯವಿಶ್ವಾಸಿಯಲ್ಲಿ ಒಟ್ಟಿಗಿರಲು ಸಾಧ್ಯವಿಲ್ಲ. ಜಿಪುಣತನ ಮತ್ತು ದುರ್ನಡತೆ.' ಅಂದರೆ ಸತ್ಯವಿಶ್ವಾಸಿಯಲ್ಲಿ ಜಿಪುಣತನವೂ ಇರಬಾರದು ಮತ್ತು ದುರ್ನಡತೆಯೂ ಇರಬಾರದು. ಇದು ನಮ್ಮನ್ನು ನಾವೇ ವಿಮರ್ಶಿಸಿಕೊಳ್ಳಲು

ಒಂದು ಮಾನದಂಡವಾಗಿದೆ.

ಜಿಪುಣತನದಿಂದ ದೂರವಿರಲು ಮಾರ್ಗದರ್ಶನ ನೀಡುತ್ತಾ ನಬಿ(ಸ) ಹೇಳಿದರು: ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾಹ್(ರ)ರಿಂದ ವರದಿಯಾಗಿದೆ, ರಸೂಲುಲ್ಲಾಹ್(ಸ) ಹೇಳಿದರು: 'ಅನ್ಯಾಯದಿಂದ ದೂರವಿರಿ, ಖಂಡಿತವಾಗಿಯೂ ಅನ್ಯಾಯವು ಖಿಯಾಮತ್ ದಿನದ ಕತ್ತಲೆಯಾಗಿರುತ್ತದೆ. ಮತ್ತು ಜಿಪುಣತನ ಹಾಗೂ ದುರಾಸೆಯಿಂದ ದೂರವಿರಿ, ಖಂಡಿತವಾಗಿಯೂ ಜಿಪುಣತನವು ನಿಮಗಿಂತ ಹಿಂದಿನವರನ್ನು ನಾಶಮಾಡಿದೆ. ಈ ಜಿಪುಣತನವು ಅವರನ್ನು ಪ್ರಚೋದಿಸಿತು, ಆಗ ಅವರು ರಕ್ತ ಹರಿಸಿದರು ಮತ್ತು ನಿಷೇಧಿತ ವಸ್ತುಗಳನ್ನು ಹಲಾಲ್ (ಅನುಮತನೀಯ) ಮಾಡಿಕೊಂಡರು.'
(ಸಹೀಹ್ ಮುಸ್ಲಿಮ್ ಅನುವಾದ, ಸಂಪುಟ-13, ಪುಟ-242, ಕಿತಾಬುಲ್ ಬಿರ್ರಿ ವಸ್ಸಿಲಃ....., ಹದೀಸ್-4661, ನೂರ್ ಫೌಂಡೇಷನ್)

ಹಝ್ರತ್ ಅಬೂ ಹುರೈರಾ(ರ) ವಿವರಿಸಿದರು, ರಸೂಲುಲ್ಲಾಹ್(ಸ) ಹೇಳಿದರು: 'ಯಾವುದೇ ದಾಸನ ಒಳಗೆ ದೇವನ ಮಾರ್ಗದ ಧೂಳು ಮತ್ತು ನರಕದ ಹೊಗೆ ಎಂದಿಗೂ ಒಟ್ಟಿಗಿರಲು ಸಾಧ್ಯವಿಲ್ಲ. ಮತ್ತು ಯಾವುದೇ ದಾಸನ ಹೃದಯದಲ್ಲಿ ದುರಾಸೆ ಹಾಗೂ ಜಿಪುಣತನ ಮತ್ತು ಸತ್ಯವಿಶ್ವಾಸ ಎಂದಿಗೂ ಒಟ್ಟಿಗಿರಲು ಸಾಧ್ಯವಿಲ್ಲ.' (ಸುನನ್ ನಿಸಾಇ, ಕಿತಾಬುಲ್ ಜಿಹಾದ್, ಹದೀಸ್-3112)

ಮೊದಲಿನ ಒಂದು ವರದಿಯಲ್ಲಿ ವಿವರಿಸಿದಂತೆ: ದುರಾಸೆಯುಳ್ಳವನು, ಆಸೆಬುರುಕ ಮತ್ತು ಜಿಪುಣನು ಎಂದಿಗೂ ಸತ್ಯವಿಶ್ವಾಸಿಯಾಗಲು ಸಾಧ್ಯವಿಲ್ಲ. ಆದ್ದರಿಂದ ಸತ್ಯವಿಶ್ವಾಸಿಯಾಗಬೇಕೆಂದರೆ, ಇವು ಮಾನದಂಡಗಳಾಗಿವೆ; ದುರಾಸೆಯಿಂದಲೂ ದೂರವಿರಬೇಕು, ಅತ್ಯಾಸೆಯಿಂದ ದೂರವಿರಬೇಕು ಮತ್ತು ಜಿಪುಣತನದಿಂದಲೂ ದೂರವಿರಬೇಕು.

ಹಝ್ರತ್ ಅಬೂ ಹುರೈರಾ(ರ)ರಿಂದ ವರದಿಯಾಗಿದೆ, ನಬಿ(ಸ) ಹೇಳಿದರು: 'ಬೆಳಿಗ್ಗೆ ಏಳುವಾಗ ದಾಸರ ಬಳಿಗೆ ಇಬ್ಬರು ದೇವದೂತರು ಇಳಿಯದಿರುವಂತಹ ಯಾವುದೇ ದಿನವಿಲ್ಲ. ಅವರಲ್ಲಿ ಒಬ್ಬನು ಹೇಳುತ್ತಾನೆ, ಹೇ ಅಲ್ಲಾಹ್, ಖರ್ಚು ಮಾಡುವವನಿಗೆ ಪ್ರತಿಫಲ ನೀಡು.' ಮತ್ತು ಮತ್ತೊಬ್ಬನು ಹೇಳುತ್ತಾನೆ, 'ಹೇ ಅಲ್ಲಾಹ್, ಜಿಪುಣನ ಸಂಪತ್ತನ್ನು ನಾಶಮಾಡು.'
(ಸಹೀಹ್ ಬುಖಾರಿ ಅನುವಾದ, ಸಂಪುಟ-3, ಪುಟ-66, ಕಿತಾಬುಝ್ಝಕಾತ್....., ಹದೀಸ್-1442, ನಝ್ಹಾರತ್ ಇಶಾಅತ್)

ಅಂದರೆ, ಯಾರು ಖರ್ಚು ಮಾಡುತ್ತಿದ್ದಾನೋ ಅವನಿಗೆ ಬದಲಿಯಾಗಿ ಇನ್ನೂ ಹೆಚ್ಚು ಕೊಡು; ಮತ್ತು ಯಾರು ಆಗಿದ್ದಾನೋ, ಜಿಪುಣತನ ತೋರುತ್ತಿದ್ದಾನೋ, ಅವನ ಸಂಪತ್ತನ್ನು ನಾಶಮಾಡು. ಈ ಲೋಕದಲ್ಲೂ ಆ ಸಂಪತ್ತಿನಲ್ಲಿ ಬರ್ಕತ್ (ಸಮೃದ್ಧಿ) ಇರುವುದಿಲ್ಲ, ಇದನ್ನೇ ನಾವು ನೋಡುತ್ತೇವೆ, ಬಹಳಷ್ಟು ಜನರು ಇದನ್ನು ವ್ಯಕ್ತಪಡಿಸುತ್ತಾರೆ; ಮುಂದಿನ ಲೋಕದಲ್ಲಿಯೂ ಆ ಸಂಪತ್ತು ಅವನಿಗೆ ಯಾವುದೇ ಪ್ರಯೋಜನವನ್ನು ನೀಡುವುದಿಲ್ಲ. ಅಲ್ಲಾಹನು ಒಂದು ಕಡೆ ಹೇಳಿದ್ದಾನೆ: 'ಅಲ್ಲಾಹನ ಮಾರ್ಗದಲ್ಲಿ, ಅವನ ಪ್ರೀತಿಗಾಗಿ ಯಾರು ಖರ್ಚು ಮಾಡುತ್ತಾರೋ, ಅವನು ಅವರಿಗೆ ಪ್ರತಿಫಲ ನೀಡುತ್ತಾನೆ.'

(ಸಹೀಹ್ ಮುಸ್ಲಿಮ್ ಅನುವಾದ, ಸಂಪುಟ-12, ಪಉಟ-217, ಕಿತಾವಬ್ ಅಲ್‌ಫ಼ಝ್ಹಾಎಲ್, ಹದೀಸ್-4252, ನೂರ್ ಫೌಂಡೇಷನ್)

ಹಝ್ರತ್ ಅನಸ್ ಬಿನ್ ಮಾಲಿಕ್(ರ) ವಿವರಿಸುತ್ತಾರೆ: 'ರಸೂಲುಲ್ಲಾಹ್(ಸ) ಜನರಲ್ಲಿ ಅತ್ಯಂತ ಸುಂದರರಾಗಿದ್ದರು, ಜನರಲ್ಲಿ ಅತ್ಯಂತ ದಾನಶೀಲರಾಗಿದ್ದರು, ಮತ್ತು ಜನರಲ್ಲಿ ಅತ್ಯಂತ ಧೈರ್ಯಶಾಲಿಯಾಗಿದ್ದರು.' ಅದೇ ರೀತಿ ಒಂದು ವರದಿಯಿದೆ. ಹಝ್ರತ್ ಅನಸ್(ರ) ವಿವರಿಸುತ್ತಾರೆ, ರಸೂಲುಲ್ಲಾಹ್(ಸ) ಹೇಳಿದರು: 'ಎಲ್ಲ ದಾನಶೀಲರಿಗಿಂತಲೂ ಅತ್ಯಂತ ದೊಡ್ಡ ದಾನಶೀಲನ ಬಗ್ಗೆ ನಾನು ನಿಮಗೆ ತಿಳಿಸಲೇ?' ಅನಂತರ ನಬಿ(ಸ) ಹೇಳಿದರು: 'ಅಲ್ಲಾಹನು ಎಲ್ಲ ದಾನಶೀಲರಿಗಿಂತಲೂ ಅತ್ಯಂತ ದೊಡ್ಡ ದಾನಶೀಲನಾಗಿದ್ದಾನೆ. ನಾನು ಆದಮ್ ಸಂತತಿಗಳಲ್ಲಿ ಎಲ್ಲರಿಗಿಂತ ಹೆಚ್ಚು ದಾನಶೀಲನಾಗಿದ್ದೇನೆ.' ಭೂಮಿಯ ಮೇಲಿನ ಮನುಷ್ಯರಲ್ಲಿ ಅತಿ ಹೆಚ್ಚು ದಾನಶೀಲನು ನಾನೇ ಆಗಿದ್ದೇನೆ.

(ಮಜ್ಮಅ ಅಝ್ಝುವಾಹಿದ್, ಸಂಪುಟ-8, ಪುಟ-409, ಕಿತಾಬ್ ಅಲಾಮಾತುನ್ನುಬುವ್ವ, ಹದೀಸ್-14178, ದಾರುಲ್ ಕುತುಬ್ ಇಲ್ಮಿಯಾ ಬೈರುತ್ 2001)

ಅದೇ ರೀತಿ ಹಝ್ರತ್ ಇಬ್ನೆ ಅಬ್ಬಾಸ್(ರ)ರಿಂದ ವರದಿಯಾಗಿದೆ: 'ರಸೂಲುಲ್ಲಾಹ್(ಸ) ಒಳಿತು ಮತ್ತು ಕಲ್ಯಾಣದಲ್ಲಿ ಎಲ್ಲ ಜನರಿಗಿಂತ ಹೆಚ್ಚು ದಾನಶೀಲರಾಗಿದ್ದರು, ಮತ್ತು ರಮಝಾನ್ ತಿಂಗಳಲ್ಲಿ ನಬಿ(ಸ) ಎಲ್ಲರಿಗಿಂತ ಹೆಚ್ಚು ದಾನಶೀಲರಾಗುತ್ತಿದ್ದರು. ಜಿಬ್ರೀಲ್(ಅ) ಪ್ರತಿ ವರ್ಷ ರಮಝಾನ್‌ನಲ್ಲಿ ನಬಿ(ಸ)ರನ್ನು ಭೇಟಿಯಾಗುತ್ತಿದ್ದರು, ರಮಝಾನ್ ಕಳೆಯುವವರೆಗೂ. ರಸೂಲುಲ್ಲಾಹ್(ಸ)ರಿಗೆ ಖುರ್‌ಆನ್ ಓದಿ ಹೇಳುತ್ತಿದ್ದರು. ಜಿಬ್ರೀಲ್ ನಬಿ(ಸ)ರನ್ನು ಭೇಟಿಯಾಗುವಾಗ, ರಸೂಲುಲ್ಲಾಹ್(ಸ) ಒಳಿತು ಮತ್ತು ಕಲ್ಯಾಣದಲ್ಲಿ ವೇಗವಾದ ಬಿರುಗಾಳಿಗಿಂತಲೂ ಹೆಚ್ಚು ದಾನಶೀಲರಾಗುತ್ತಿದ್ದರು.' ಬಿರುಗಾಳಿ ಮತ್ತು ಚಂಡಮಾರುತ ಬಂದಂತೆ ಖರ್ಚು ಮಾಡುತ್ತಿದ್ದರು. (ಸಹೀಹ್ ಮುಸ್ಲಿಮ್ ಅನುವಾ, ಸಂಪುಟ-12, ಪುಟ-218-219, ಕಿತಾಬ್ ಫ಼ಝಾಎಲ್, ಹದೀಸ್-4254, ನೂರ್ ಫೌಂಡೇಷನ್)

ಇದೇ ಮಾತನ್ನು ಹಝ್ರತ್ ಮುಸ್ಲಿಹ್ ಮೌಊದ್(ರ) ಒಂದು ಖುತ್ಬದಲ್ಲಿ ಹೀಗೆ ವಿವರಿಸಿದ್ದಾರೆ:

'ನಬಿ(ಸ) ದಾನಶೀಲತೆ ತೋರುವಾಗ ಅದು ಪರಾಕಾಷ್ಠೆಯನ್ನು ತಲುಪುತ್ತಿತ್ತು; ಎಲ್ಲಿಯವರೆಗೆ ಎಂದರೆ, ನಬಿ(ಸ) ವಿಶೇಷವಾಗಿ ರಮಝಾನ್‌ನಲ್ಲಿ ವೇಗವಾದ ಬಿರುಗಾಳಿಯಂತೆ ದಾನ ಮಾಡುತ್ತಿದ್ದರು ಎಂದು ಸಹಾಬಿಯರು ವಿವರಿಸಿದ್ದಾರೆ. ಮತ್ತು ಅದೇ ಸಮಯದಲ್ಲಿ 'ಲಾ ತುಬಝ್ಝಿರ್ ತಬ್ಝೀರಾ' (ವ್ಯರ್ಥವಾಗಿ ಖರ್ಚು ಮಾಡಬೇಡಿ) ಎಂಬ ಆದೇಶವನ್ನು ಪಾಲಿಸುತ್ತಿದ್ದರು. ಅಂದರೆ ದಾನವನ್ನು ಅನಗತ್ಯವಾಗಿ ಮತ್ತು ನಿರರ್ಥಕವಾಗಿ ಕಳೆದುಕೊಳ್ಳುತ್ತಿರಲಿಲ್ಲ ಅಥವಾ ಅಸಮರ್ಪಕವಾಗಿ ಬಳಸುತ್ತಿರಲಿಲ್ಲ.' ದಾನಶೀಲತೆ ಇತ್ತು, ಆದರೆ ವ್ಯರ್ಥವಾಗಿ ಖರ್ಚು ಮಾಡಬಾರದು, ವಿನಾಕಾರಣ ಹಾಳುಮಾಡಬಾರದು ಎಂಬುದು ಅಲ್ಲಾಹನ ಆದೇಶವೂ ಆಗಿದೆ. ಅಲ್ಲಾಹನು ಅನಾವಶ್ಯಕವಾದ ಖರ್ಚನ್ನು ತಡೆದಿದ್ದಾನೆ. 'ಹಾತಿಮ್ ತಾಯಿಯ ದಾನಶೀಲತೆ ಇತ್ತು, ಆದರೆ ಅದು ಅಸಮರ್ಪಕವಾಗಿತ್ತು.' ಹಾತಿಮ್ ತಾಯಿ ದೊಡ್ಡ ದಾನಿ ಎಂದು ಕರೆಸಿಕೊಳ್ಳುತ್ತಾನೆ, ಆದರೆ ಅವನ ದಾನಶೀಲತೆಯು ಸಮಯ ಸಂದರ್ಭಕ್ಕೆ ತಕ್ಕಂತೆ ಇರುತ್ತಿರಲಿಲ್ಲ, ಯೋಚಿಸದೆ ತಿಳಿಯದೆ ಮಾಡುತ್ತಿದ್ದನು. ಏಕೆಂದರೆ ಅದು ಸಿಹಿತಿಂಡಿಯ ಅಂಗಡಿಯಲ್ಲಿ ಅಜ್ಜನ ಹೆಸರಿನಲ್ಲಿ ದಾನ ಮಾಡಿದಂತಿತ್ತು. ಇದೊಂದು ನಾಣ್ಣುಡಿ. ತನ್ನ ಸ್ವಂತ ಸಂಪತ್ತು ಏನೂ ಇರಲಿಲ್ಲ, ತಂದೆಯ ಸಂಪತ್ತಿನ ಮೇಲೆ ಅದನ್ನು ಹಂಚಲು ಅವನಿಗೆ ಏನು ಹಕ್ಕಿತ್ತು? ಹಾತಿಮ್ ತಾಯಿಯ ಬಗ್ಗೆ ಹೀಗೆ ಹೇಳಲಾಗುತ್ತದೆ: ಅವನ ಸ್ವಭಾವದಲ್ಲೇ ಬಾಲ್ಯದಿಂದಲೂ ದಾನಶೀಲತೆ ಇತ್ತು. ಕೊನೆಗೆ ಅವನ ತಂದೆ, 'ಇವನಂತೂ ನನ್ನ ಸಂಪತ್ತನ್ನು ಪೋಲು ಮಾಡುತ್ತಿದ್ದಾನೆ' ಎಂದು ನೋಡಿ, ಒಂಟೆಗಳನ್ನು ಕಾಯಲು ಅವನನ್ನು ಹೊರಗೆ ಕಳುಹಿಸಿದನು. ಒಂದು ದಿನ ಅವನು ನೋಡಿದನು, ಮೂವರು ವ್ಯಕ್ತಿಗಳು ಬಂದಿದ್ದಾರೆ, ಮೂವರೂ ದೊಡ್ಡ ಕವಿಗಳಾಗಿದ್ದರು. ಅವರು ಅವನನ್ನು ಯಾತ್ರೆಯ ನಡುವೆ ಕಂಡಾಗ, ಅವರ ಅತಿಥಿ ಸತ್ಕಾರಕ್ಕಾಗಿ ಮೂರು ಒಂಟೆಗಳನ್ನು ಬಲಿಕೊಟ್ಟನು. ಅವರು ಹೇಳಿದರು: 'ನಾವು ಕೇವಲ ಮೂರು ಜನ, ಒಂದು ಒಂಟೆ ಸಾಕು.' ಅವನು ಹೇಳಿದನು: 'ಇಲ್ಲ, ನಾನು ಒಂದನ್ನೇ ಬಲಿಕೊಟ್ಟರೆ, ಉಳಿದಿಬ್ಬರು ಪರಾವಲಂಬಿಗಳಾಗುವರು.' ಹೇಗಿದ್ದರೂ ಅದು ತಂದೆಯ ಸಂಪತ್ತಾಗಿತ್ತು, ಪುಕ್ಕಟೆಯಾಗಿತ್ತು, ಅವರಿಗಾಗಿ ಮೂರೂ ಒಂಟೆಗಳನ್ನು ಕೊಯ್ದುಬಿಟ್ಟನು. ಉಳಿದದ್ದು ವ್ಯರ್ಥವಾಗಿರಬಹುದು ಅಥವಾ ಯಾರಿಗಾದರೂ ಕೊಟ್ಟಿರಬಹುದು, ಹೇಗಿದ್ದರೂ. 'ನನ್ನ ಸಂಪತ್ತು ಹೀಗೆ ಪೋಲಾಗುತ್ತಿದೆಯಲ್ಲಾ' ಎಂದು ತಂದೆಗೂ ಬಹಳ ಬೇಸರವಾಯಿತು. ಆದರೆ ನಬಿ(ಸ) ಬಳಿ ಬರುತ್ತಿದ್ದ ಸಂಪತ್ತು ಅವರದ್ದೇ ಸಂಪತ್ತಾಗಿತ್ತು ಮತ್ತು ಪವಿತ್ರ ಖುರ್‌ಆನ್ ಮಾರ್ಗದರ್ಶನದಂತೆ ಸಮಯ ಸಂದರ್ಭಕ್ಕೆ ತಕ್ಕಂತೆ ನಬಿ(ಸ) ಖರ್ಚು ಮಾಡುತ್ತಿದ್ದರು. ಎಲ್ಲಿ ನಬಿ(ಸ) ಧಾರಾಳವಾಗಿ ಖರ್ಚು ಮಾಡಿರಿ ಎಂದು ಹೇಳಿದ್ದೀರೋ ಆ ಹದೀಸ್‌ಗಳ ವಿವರಣೆ ಇದೆ. ಇದರ ಅರ್ಥವೇನೆಂದರೆ, ಸಮಯ-ಸಂದರ್ಭಕ್ಕೆ ತಕ್ಕಂತೆ ಖರ್ಚು ಮಾಡಿ, ಆಗ ಯಾವುದೇ ರೀತಿಯ ಹಿಂಜರಿಕೆ ಇರಬಾರದು. ಕಾಡಿನಲ್ಲಿ ಮೂರು ಜನ ಬಂದಿರುವಾಗ, ಮೂರು ಒಂಟೆಗಳನ್ನು ಕೊಯ್ದುಬಿಡುವುದು ಮತ್ತು ನಂತರ ಆ ಮಾಂಸ ವ್ಯರ್ಥವಾಗುವುದು ಎಂಬುದು ಧಾರಾಳವಾಗಿ ಖರ್ಚು ಮಾಡು ಎಂಬುದರ ಅರ್ಥವಲ್ಲ. ಏಕೆಂದರೆ ಅಲ್ಲಿ ತಿನ್ನುವವರು ಬೇರೆ ಯಾರೂ ಇರಲಿಲ್ಲ. ಖಂಡಿತವಾಗಿಯೂ ಕಾಡಿನಲ್ಲಿ ಬೇರೆ ಯಾರೂ ಸಿಕ್ಕಿರಲಾರರು. ಯಾರಾದರೂ ಸಿಕ್ಕಿದ್ದರೂ ಕೆಲವು ಜನರು ಮಾತ್ರ. ಆದರೂ ಸಾಕಷ್ಟು ಮಾಂಸ ಉಳಿದಿರಬಹುದು, ಅದು ವ್ಯರ್ಥವಾಯಿತು. ಅದರಿಂದ ಯಾವುದೇ ಪ್ರಯೋಜನವಿಲ್ಲ. ಹಾಗಾಗಿ, ಸಮಯ-ಸಂದರ್ಭಕ್ಕೆ ತಕ್ಕಂತೆ ಖರ್ಚು ಮಾಡಬೇಕು. ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುತ್ತಿದ್ದರೆ ಮತ್ತು ಸಮಯ-ಸಂದರ್ಭಕ್ಕೆ ತಕ್ಕಂತೆ ಖರ್ಚು ಮಾಡುತ್ತಿದ್ದರೆ, ಆಗ ನಿಶ್ಚಿಂತರಾಗಿರಿ; ಏಕೆಂದರೆ ಅಲ್ಲಾಹನ ವಾಗ್ದಾನವಿದೆ, ಆಯತ್‌ನಲ್ಲಿ ಅಲ್ಲಾಹನು ಹೇಳಿದಂತೆ ಅವರಿಗೆ ಯಾವುದೇ ಚಿಂತೆ ಮತ್ತು ದುಃಖ ಇರುವುದಿಲ್ಲ. ಹೇಗಿದ್ದರೂ, ಹಝ್ರತ್ ಮುಸ್ಲಿಹ್ ಮೌಊದ್ ಹೇಳುತ್ತಾರೆ: 'ಇದಕ್ಕೆ ಪ್ರತಿಯಾಗಿ, ನಬಿ(ಸ) ಒಂದೆಡೆ ಎಷ್ಟೊಂದು ದಾನಶೀಲರಾಗಿದ್ದರೆಂದರೆ, ಸಹಾಬಿಯರು ಹೇಳಿದಂತೆ ರಮಝಾನ್ ದಿನಗಳಲ್ಲಿ ನಬಿ(ಸ) ವೇಗವಾದ ಬಿರುಗಾಳಿಯಂತೆ ದಾನ ಮಾಡುತ್ತಿದ್ದರು; ಆದರೆ ಇನ್ನೊಂದೆಡೆ ಯೋಚಿಸಿ ತಿಳಿದು ಖರ್ಚು ಮಾಡುವವರಾಗಿದ್ದರು.'

(ಖುತ್ಬಾತೆ ಮಹ್ಮೂದ್, ಸಂಪುಟ-18, ಪುಟ-641, ಬಲೂಗ್ಹುಲ್ ಅರಬ್ ಫೀ ಮಾರಿಉಫತಿಲ್ ಅಹ್ವಾಲುಲ್ ಅರಬ್, ಸಂಪುಟ-1, ಪುಟ-74 "ಹಾತಿಮ್ ತೈ", ದಾರುಲ್ ಕುತುಬ್ ಇಲ್ಮಿಯಾ ಬೈರುತ್ 2020)

ಹಝ್ರತ್ ಅಬ್ದುಲ್ಲಾಹ್ ಬಿನ್ ಉಮರ್(ರ)ರಿಂದ ವರದಿಯಾಗಿದೆ, ರಸೂಲುಲ್ಲಾಹ್(ಸ) ಹೇಳಿದರು: 'ನನ್ನ ಬಳಿ ತಿಹಾಮಾ ಪರ್ವತಗಳಷ್ಟು (ಅಂದರೆ ಅರೇಬಿಯಾದ ಕರಾವಳಿ ಪರ್ವತ ಶ್ರೇಣಿಗಳಷ್ಟು) ಚಿನ್ನವಿದ್ದರೂ, ನಾನು ಅದೆಲ್ಲವನ್ನೂ ನಿಮ್ಮ ನಡುವೆ ಹಂಚಿಬಿಡುತ್ತಿದ್ದೆ, ನೀವು ನನ್ನನ್ನು ಸುಳ್ಳುಗಾರನಾಗಿಯೋ ಅಥವಾ ಜಿಪುಣನಾಗಿಯೋ ಕಾಣಲಾರಿರಿ.'
(ಸಬ್ಲುಲ್ ಹುದಾ ವರ್‌ರಶಾದ್, ಸಂಪುಟ-7, ಪುಟ-53, ದಾರುಲ್ ಕುತುಬ್ ಇಲ್ಮಿಯಾ ಬೈರುತ್ 1993)

ಒಂದು ವರದಿಯಿದೆ, ಹಝ್ರತ್ ಅಬೂಝರ್(ರ) ವಿವರಿಸುತ್ತಾರೆ: 'ನಾನು ನಬಿ ಕರೀಮ್(ಸ)ರೊಂದಿಗೆ ಮದೀನಾದ ಮೈದಾನದಲ್ಲಿ ನಡೆದುಕೊಂಡು ಹೋಗುತ್ತಿದ್ದೆ. ಅಷ್ಟರಲ್ಲಿ ಉಹುದ್ ಪರ್ವತ ನಮ್ಮ ಕಣ್ಮುಂದೆ ಬಂತು. ನಬಿ(ಸ) ಕರೆದರು: 'ಅಬೂಝರ್', ನಾನು ಹೇಳಿದೆ: 'ಹಾಜರಿದ್ದೇನೆ ಯಾ ರಸೂಲುಲ್ಲಾಹ್'. ನಬಿ(ಸ) ಹೇಳಿದರು: 'ನನ್ನ ಬಳಿ ಈ ಉಹುದ್ ಪರ್ವತದಷ್ಟು ಚಿನ್ನವಿದ್ದು, ಮೂರನೇ ರಾತ್ರಿ ಕಳೆದರೂ ನನ್ನ ಬಳಿ ಅದರಲ್ಲಿ ಒಂದು ದೀನಾರ್ ಕೂಡ ಉಳಿದಿರುವುದು ನನಗೆ ಇಷ್ಟವಿಲ್ಲ; ಸಾಲ ತೀರಿಸಲು ಇಟ್ಟುಕೊಂಡಿರುವುದನ್ನು ಹೊರತುಪಡಿಸಿ. ಬದಲಾಗಿ ನಾನು ಖಂಡಿತವಾಗಿಯೂ ಅದನ್ನು ಅಲ್ಲಾಹನ ದಾಸರಲ್ಲಿ ಹೀಗೆ, ಹೀಗೆ ಮತ್ತು ಹೀಗೆ ಖರ್ಚು ಮಾಡಿಬಿಡುತ್ತೇನೆ.' ಅಂದರೆ, 'ನನ್ನ ಬಲಕ್ಕೆ, ನನ್ನ ಎಡಕ್ಕೆ ಮತ್ತು ನನ್ನ ಹಿಂದೆ' (ಹೀಗೆ ಖರ್ಚು ಮಾಡುತ್ತೇನೆ). ನಂತರ ನಬಿ(ಸ) ಹೇಳಿದರು: 'ಯಾರು ಅತಿ ಶ್ರೀಮಂತರಾಗಿದ್ದಾರೋ, ಅವರೇ ಖಿಯಾಮತ್ ದಿನದಂದು ಬಡವರು ಆಗುವರು.' ಶ್ರೀಮಂತರಾಗಿದ್ದುಕೊಂಡು ಹಣ ಕೂಡಿಡುವವರು, ನಿರ್ಗತಿಕರ ಮತ್ತು ಬಡವರ ಮೇಲೆ ಖರ್ಚು ಮಾಡದವರು, ಖಿಯಾಮತ್ ದಿನದಂದು ಬಡವರಾಗುವರು.' ಯಾರು ಖರ್ಚು ಮಾಡುತ್ತಾರೋ ಅವರು ಖಿಯಾಮತ್ ದಿನದಂದು ಬಡವರಾಗುವುದಿಲ್ಲ (ಅಂದರೆ ತಮ್ಮ ಬಲಕ್ಕೆ, ಎಡಕ್ಕೆ ಮತ್ತು ಹಿಂದೆ ಖರ್ಚು ಮಾಡುವವರು). ಅಂತಹ ಜನರು, ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವವರು ಬಹಳ ಕಡಿಮೆ ಎಂದು ನಬಿ(ಸ) ಹೇಳಿದರು. ಒಬ್ಬ ಶ್ರೀಮಂತ ಸತ್ಯವಿಶ್ವಾಸಿಯು ಅಲ್ಲಾಹನ ಮಾರ್ಗದಲ್ಲಿ ನಿರ್ಭಯವಾಗಿ ಖರ್ಚು ಮಾಡುತ್ತಾನೆ. ಅಲ್ಲಾಹನು ಅವರಿಗೆ ಇನ್ನಷ್ಟು ನೀಡುತ್ತಲೇ ಇರುತ್ತಾನೆ. (ಸ್ಹೀಹ್ ಬುಖಾರಿ ಅನುವಾದ, ಸಂಪುಟ-15, ಪುಟ-211-212, ಕಿತಾಬುಲ್ ರಿಘಾಖ್, ಹದೀಸ್-6444, ನಝ್ಹಾರತ್ ಇಶಾಅತ್)

ಹಝ್ರತ್ ಅನಸ್(ರ)ರಿಂದ ವರದಿಯಾಗಿದೆ: ಒಬ್ಬ ವ್ಯಕ್ತಿಯು ನಬಿ(ಸ)ರಿಂದ ಎರಡು ಪರ್ವತಗಳ ನಡುವೆ ಎಷ್ಟೆಲ್ಲ ಮೇಕೆಗಳಿದ್ದವೋ ಅದೆಲ್ಲವನ್ನೂ ಬೇಡಿದನು, ನಬಿ(ಸ) ಅದನ್ನು ಅವನಿಗೆ ದಯಪಾಲಿಸಿದರು. ಅವನು ತನ್ನ ಜನಾಂಗದ ಬಳಿಗೆ ಬಂದು ಹೇಳಿದನು: 'ಹೇ ನನ್ನ ಜನರೇ, ಇಸ್ಲಾಂ ಸ್ವೀಕರಿಸಿ; ದೇವನಾಣೆ, ಮುಹಮ್ಮದ್(ಸ) ಎಷ್ಟೊಂದು ನೀಡುತ್ತಾರೆಂದರೆ ಬಡತನದ ಭಯವೇ ಇರಲಾರದು.' ಹಝ್ರತ್ ಅನಸ್ ಹೇಳುತ್ತಾರೆ: 'ಕೆಲವೊಮ್ಮೆ ಒಬ್ಬ ವ್ಯಕ್ತಿ ಲೌಕಿಕ ಆಸೆಗಾಗಿ ಮಾತ್ರ ಇಸ್ಲಾಂ ಸ್ವೀಕರಿಸುತ್ತಿದ್ದನು, ಆದರೆ ಇಸ್ಲಾಂ ಸ್ವೀಕರಿಸಿದ ಕೂಡಲೇ ಇಸ್ಲಾಂ ಅವನಿಗೆ ಲೋಕ ಮತ್ತು ಅದರಲ್ಲಿರುವ ಎಲ್ಲದಕ್ಕಿಂತಲೂ ಹೆಚ್ಚು ಪ್ರಿಯವಾಗುತ್ತಿತ್ತು.'
(ಸಹೀಹ್ ಮುಸ್ಲಿಮ್ ಅನುವಾದ, ಸಂಪುಟ-12, ಪುಟ-223-224, ಕಿಬಾಬ್ ಅಲ್‌ಫಝಾಎಲ್, ಹದೀಸ್ ಸಂಖ್ಯೆ-339, ನೂರ್ ಫೌಂಡೇಷನ್)

ಹಝ್ರತ್ ಅನಸ್ ಬಿನ್ ಮಾಲಿಕ್(ರ) ಹೇಳುತ್ತಾರೆ: 'ನಬಿ ಕರೀಮ್(ಸ) ನಾಳೆಗಾಗಿ ಯಾವುದೇ ವಸ್ತುವನ್ನು ಉಳಿಸಿ ಇಡುತ್ತಿರಲಿಲ್ಲ.'

(ಶಮಾಎಲುನ್ನಬೀ(ಸ), ಪುಟ-148, ಬಾಬ್ ಮಾಜಾಅ ಫೀ ಖಲ್ಖಿ ರಸೂಲುಲ್ಲಾಹ್(ಸ), ಹದೀಸ್-339, ನೂರ್ ಫೌಂಡೇಷನ್)

ಹಝ್ರತ್ ಉತ್ಬಾ ಬಿನ್ ಹಾರಿಸ್(ರ) ವಿವರಿಸಿದರು: ನಬಿ(ಸ) ನಮಗೆ ಅಸ್ರ್ ನಮಾಝಿನ ಇಮಾಮತ್ ವಹಿಸಿದರು. ಅನಂತರ ನಬಿ(ಸ) ವೇಗವಾಗಿ ಮನೆಗೆ ಹೋದರು ಮತ್ತು ಸ್ವಲ್ಪ ಹೊತ್ತಿನಲ್ಲೇ ಹೊರಬಂದರು. ವರದಿಗಾರರು ಹೇಳುತ್ತಾರೆ: 'ನಾನು ಇದರ ಬಗ್ಗೆ ಕೇಳಿದೆ, ಅಥವಾ ಬೇರೊಬ್ಬರು ಕೇಳಿದರು, ಆಗ ನಬಿ(ಸ) ಹೇಳಿದರು: 'ನಾನು ಮನೆಯಲ್ಲಿ ದಾನದ ಸಂಪತ್ತಿನಲ್ಲಿದ್ದ ಚಿನ್ನದ ಒಂದು ತುಂಡನ್ನು ಬಿಟ್ಟುಬಂದಿದ್ದೆ. ಅದು ರಾತ್ರಿಯಿಡೀ ನನ್ನ ಬಳಿಯಿರುವುದು ನನಗೆ ಇಷ್ಟವಾಗಲಿಲ್ಲ. ಆದ್ದರಿಂದ ನಾನು ಅದನ್ನು ಹಂಚಿಬಿಟ್ಟೆ.' (ಸಹೀಹ್ ಬುಖಾರಿ ಅನುವಾದ, ಸಂಪುಟ-3, ಪುಟ-53-54, ಕಿತಾಬುಝ್ಝಕಾತ್, ಹದೀಸ್-1430, ನಝ್ಹಾರತ್ ಇಶಾಅತ್)

ಹಝ್ರತ್ ಉಮ್ಮು ಸಲ್ಮಾ(ರ) ವಿವರಿಸುತ್ತಾರೆ: ರಸೂಲುಲ್ಲಾಹ್(ಸ) ನನ್ನ ಬಳಿಗೆ ಬಂದರು, ಆಗ ನಬಿ(ಸ)ರ ಮುಖದ ಬಣ್ಣ ಬದಲಾಗಿತ್ತು. ಹಝ್ರತ್ ಉಮ್ಮು ಸಲ್ಮಾ ಹೇಳುತ್ತಾರೆ: 'ಯಾವುದಾದರೂ ನೋವು ಅಥವಾ ಕಾಯಿಲೆಯಿಂದಾಗಿ ಹೀಗಾಗಿರಬಹುದು ಎಂದು ನಾನು ಭಾವಿಸಿದೆ.' ನಾನು ಕೇಳಿದೆ: ಯಾ ರಸೂಲುಲ್ಲಾಹ್, ನಿಮ್ಮ ಮುಖದ ಬಣ್ಣ ಬದಲಾಗಿರುವುದನ್ನು ನಾನು ನೋಡುತ್ತಿದ್ದೇನೆ, ಯಾವುದಾದರೂ ನೋವಿನಿಂದಾಗಿ ಹೀಗಾಗಿದೆಯೇ? ನಬಿ(ಸ) ಹೇಳಿದರು: 'ಇಲ್ಲ, ಸಂಜೆ ನಮ್ಮ ಬಳಿ ಬಂದಿದ್ದ ಆ ಏಳು ದೀನಾರ್‌ಗಳ ಕಾರಣದಿಂದಾಗಿದೆ; ರಾತ್ರಿ ಕಳೆದರೂ ನಾವು ಅವುಗಳನ್ನು ಖರ್ಚು ಮಾಡಲಿಲ್ಲ. ನಾನು ಅವುಗಳನ್ನು ಹಾಸಿಗೆಯ ಮೂಲೆಯಲ್ಲಿ ಮರೆತುಬಿಟ್ಟಿದ್ದೆ, ನನಗೆ ನೆನಪಾದಾಗ ನನಗೆ ಬಹಳ ಚಿಂತೆಯಾಯಿತು.' (ಮ್ಉಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ-8, ಪುಟ-630-631, ಹದೀಸ್-27207, ಆಲಮುಲ್ ಕುತುಬ್ ಬೈರುತ್ 1998)

ಹಝ್ರತ್ ಉಖ್ಬಾ(ರ)ರಿಂದ ವರದಿಯಾಗಿದೆ, ಅವರು ಹೇಳಿದರು: ನಾನು ನಬಿ(ಸ)ರ ಹಿಂದೆ ಮದೀನಾದಲ್ಲಿ ಅಸ್ರ್ ನಮಾಝ್ ನಿರ್ವಹಿಸಿದೆ. ನಬಿ(ಸ) ಸಲಾಂ ಹೇಳಿದರು ಮತ್ತು ವೇಗವಾಗಿ ಎದ್ದುನಿಂತು, ಕುಳಿತಿದ್ದ ಜನರನ್ನು ದಾಟಿಕೊಂಡು ತಮ್ಮ ಪವಿತ್ರ ಪತ್ನಿಯರ ಕೊಠಡಿಯ ಕಡೆಗೆ ಹೋದರು. ಜನರು ನಬಿ(ಸ)ರ ಈ ಆತುರವನ್ನು ಕಂಡು ಗಾಬರಿಗೊಂಡರು. ಅನಂತರ ನಬಿ(ಸ) ಅವರ ಬಳಿ ಹೊರಬಂದಾಗ, ಅವರು ನಬಿ(ಸ)ರ ಈ ಆತುರವನ್ನು ಕಂಡು ಆಶ್ಚರ್ಯಚಕಿತರಾಗಿದ್ದಾರೆ ಎಂದು ನೋಡಿದರು. ಆಗ ನಬಿ(ಸ) ಹೇಳಿದರು: 'ನನ್ನ ಬಳಿ ಸ್ವಲ್ಪ ಚಿನ್ನವಿತ್ತು, ಅದು ನನಗೆ ನೆನಪಾಯಿತು ಮತ್ತು ಅದು ನನ್ನ ಗಮನವನ್ನು ದೇವಸ್ಮರಣೆಯಿಂದ ತಡೆಯುವುದು ನನಗೆ ಇಷ್ಟವಾಗಲಿಲ್ಲ. ಆದ್ದರಿಂದ ನಾನು ಅದನ್ನು ಹಂಚಿಕೊಳ್ಳುವಂತೆ ಹೇಳಲಿಕ್ಕಾಗಿ ಹೋದೆ.' (ಸಹೀಹ್ ಬುಖಾರಿ ಅನುವಾದ, ಸಂಪುಟ-2, ಪುಟ-252-253, ಕಿತಾಬುಲ್ ಅಝಾನ್, ಹದೀಸ್-1430, ನಝ್ಹಾರತ್ ಇಶಾಅತ್)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: 'ನಬಿ(ಸ)ರ ಸ್ಥಿತಿ ಹೇಗಿತ್ತೆಂದರೆ, ತಮ್ಮ ಬಳಿ ಏನಿರುತ್ತಿತ್ತೋ ಅದನ್ನು ದಾನ ಮಾಡಿಬಿಡುತ್ತಿದ್ದರು. ಒಮ್ಮೆ ನಬಿ(ಸ)ರ ಮನೆಯಲ್ಲಿ ಒಂದು ಚಿನ್ನದ ನಾಣ್ಯ ಇತ್ತು, ನಬಿ(ಸ) ಅದನ್ನು ತೆಗೆದುಕೊಂಡು ಹಂಚಿಬಿಟ್ಟರು.'
(ಮಲ್‌ಫೂಝಾತ್, ಸಂಪುಟ-3, ಪುಟ-323, 2022)

ಇದೇ ಘಟನೆಯನ್ನು ಉಲ್ಲೇಖಿಸುತ್ತಾ ಒಂದು ಕಡೆ ಹಝ್ರತ್ ಮುಸ್ಲಿಹ್ ಮೌಊದ್(ರ) ಹೀಗೆ ಬರೆದಿದ್ದಾರೆ: 'ಒಮ್ಮೆ ದಾನದ ಸ್ವಲ್ಪ ಹಣ ಬಂತು ಮತ್ತು ಅದನ್ನು ಹಂಚುವಾಗ ಒಂದು ದೀನಾರ್ ಯಾವುದೋ ಮೂಲೆಯಲ್ಲಿ ಬಿದ್ದುಹೋಯಿತು, ಅದನ್ನು ಎತ್ತಿಕೊಳ್ಳಲು ನಬಿ(ಸ)ರಿಗೆ ನೆನಪಾಗಲಿಲ್ಲ. ನಮಾಝಿನ ನಂತರ ನೆನಪಾದಾಗ, ಜನರ ಹೆಗಲನ್ನು ದಾಟುತ್ತಾ ನಬಿ(ಸ) ವೇಗವಾಗಿ ತಮ್ಮ ಮನೆಗೆ ಹೋದರು. ಸಹಾಬಿಯರು ಕೇಳಿದರು: 'ಯಾ ರಸೂಲುಲ್ಲಾಹ್, ಏನಾಯಿತು?' ನಬಿ(ಸ) ಹೇಳಿದರು: 'ಹೀಗೆ ಒಂದು ದೀನಾರ್ ಹಂಚಲು ಬಾಕಿಯಿತ್ತು, ಸಾಧ್ಯವಾದಷ್ಟು ಬೇಗ ಅದನ್ನೂ ಹಂಚಿಬಿಡಬೇಕೆಂದು ನಾನು ಬಯಸಿದೆ.' ಒಟ್ಟಿನಲ್ಲಿ, ಸಂಪತ್ತು ಇದ್ದಾಗ್ಯೂ ನಬಿ(ಸ) ಎಂತಹ ಉದಾರತೆ ಮತ್ತು ನಿರಪೇಕ್ಷತೆಯನ್ನು ತೋರಿದರೆಂದರೆ, ಅದನ್ನು ಕಂಡು ಆಶ್ಚರ್ಯವಾಗುತ್ತದೆ; ಏನೇ ಬಂದರೂ ನಬಿ(ಸ) ಅದನ್ನು ದೇವನ ಮಾರ್ಗದಲ್ಲಿ ಹಂಚಿಬಿಡುತ್ತಿದ್ದರು.' (ತ್ಫ್ಸೀರ್ ಕಬೀರ್, ಸಂಪುಟ-7, ಪುಟ-478-479, 2023)

ಹಝ್ರತ್ ಅನಸ್(ರ) ವಿವರಿಸುತ್ತಾರೆ: 'ನಬಿ(ಸ)ರ ಬಳಿ ಬಹ್ರೇನ್‌ನಿಂದ ಸಂಪತ್ತು ತರಲಾಯಿತು. ನಬಿ(ಸ) ಹೇಳಿದರು: 'ಇದನ್ನು ಮಸೀದಿಯಲ್ಲಿ ಹಾಕಿ.' ರಸೂಲುಲ್ಲಾಹ್(ಸ)ರ ಬಳಿ ತರಲಾದ ಅತ್ಯಂತ ದೊಡ್ಡ ಸಂಪತ್ತು ಇದಾಗಿತ್ತು. ರಸೂಲುಲ್ಲಾಹ್(ಸ) ನಮಾಝ್‌ಗಾಗಿ ಹೊರಬಂದರು. ನಬಿ(ಸ) ಅದರ ಕಡೆಗೆ ಗಮನ ಹರಿಸಲಿಲ್ಲ, ಅದರ ಕಡೆಗೆ ನೋಡಲಿಲ್ಲ. ನಬಿ(ಸ) ನಮಾಝ್ ಮುಗಿಸಿದ ನಂತರ ಬಂದು ಆ ಸಂಪತ್ತಿನ ಬಳಿ ಹೋದರು, ಮತ್ತು ಯಾರನ್ನು ನೋಡುತ್ತಿದ್ದರೋ ಅವರಿಗೆಲ್ಲ ಕೊಡುತ್ತಿದ್ದರು. ಅಷ್ಟರಲ್ಲಿ ನಬಿ(ಸ)ರ ಬಳಿ ಹಝ್ರತ್ ಅಬ್ಬಾಸ್(ರ) ಬಂದರು ಮತ್ತು ಹೇಳಿದರು: 'ಯಾ ರಸೂಲುಲ್ಲಾಹ್, ನನಗೂ ಕೊಡಿ; ಏಕೆಂದರೆ ನಾನು ಬದ್ರ್‌ನ ದಿನ ನನ್ನ ಫಿದ್ಯಾ (ಬಿಡುಗಡೆ ಹಣ) ಕೊಟ್ಟಿದ್ದೆ ಮತ್ತು ಅಖೀಲ್‌ನ ಫಿದ್ಯಾ ಕೂಡ ಕೊಟ್ಟಿದ್ದೆ.' ಈತ ಹಝ್ರತ್ ಅಬ್ಬಾಸ್‌ರ ಅಣ್ಣನ ಮಗ ಅಖೀಲ್ ಬಿನ್ ಅಬೂ ತಾಲಿಬ್ ಆಗಿದ್ದನು. 'ಇದರಿಂದ ತೆಗೆದುಕೊ' ಎಂದು ನಬಿ(ಸ) ಹೇಳಿದರು. ಆಗ ಅವರು ಎರಡೂ ಕೈಗಳಿಂದ ತುಂಬಿ ತಮ್ಮ ಬಟ್ಟೆಯಲ್ಲಿ ಹಾಕಿಕೊಂಡರು. ನಂತರ ಅದನ್ನು ಎತ್ತಿಕೊಳ್ಳಲು ಮುಂದಾದರು, ಆದರೆ ಎತ್ತಿಕೊಳ್ಳಲು ಸಾಧ್ಯವಾಗಲಿಲ್ಲ. ಆಗ ಅವರು ಹೇಳಿದರು: 'ಯಾ ರಸೂಲುಲ್ಲಾಹ್, ಇದನ್ನು ನನಗೆ ಎತ್ತಿಕೊಡಲು ಯಾರಿಗಾದರೂ ಆದೇಶಿಸಿ.' ನಬಿ(ಸ) ಹೇಳಿದರು: 'ಇಲ್ಲ, ಇದು ಸಾಧ್ಯವಿಲ್ಲ.' ಅವರು ಹೇಳಿದರು: 'ಹಾಗಾದರೆ ನೀವೇ ಎತ್ತಿ ನನ್ನ ಮೇಲಿಡಿ.' ನಬಿ(ಸ) ಹೇಳಿದರು: 'ಇಲ್ಲ, ಇದೂ ಆಗುವುದಿಲ್ಲ.' ಆಗ ಅವರು ಅದರಿಂದ ಸ್ವಲ್ಪ ತೆಗೆದುಹಾಕಿದರು, ಮತ್ತೆ ಎತ್ತಲು ಯತ್ನಿಸಿದರು, ಆದರೂ ಎತ್ತಲಾಗಲಿಲ್ಲ. ಆಗ ಅವರು ಹೇಳಿದರು: 'ಯಾ ರಸೂಲುಲ್ಲಾಹ್, ಇದನ್ನು ನನಗೆ ಎತ್ತಿಕೊಡಲು ಯಾರಿಗಾದರೂ ಆದೇಶಿಸಿ.' ನಬಿ(ಸ) ಹೇಳಿದರು: 'ಇಲ್ಲ.' ಅವರು ಹೇಳಿದರು: 'ಹಾಗಾದರೆ ನೀವೇ ಎತ್ತಿ ನನ್ನ ಮೇಲಿಡಿ.' ನಬಿ(ಸ) ಹೇಳಿದರು: 'ಇಲ್ಲ.' ಆಗ ಅವರು ಅದರಿಂದ ಇನ್ನೂ ಸ್ವಲ್ಪ ತೆಗೆದುಹಾಕಿದರು, ನಂತರ ಅದನ್ನು ಎತ್ತಿ ತಮ್ಮ ಭುಜದ ಮೇಲಿಟ್ಟುಕೊಂಡು ಹೊರಟುಹೋದರು. ಅವರು ಹೋದಾಗ, ಅವರು ನಮ್ಮ ಕಣ್ಣಿನಿಂದ ಮರೆಯಾಗುವವರೆಗೂ ನಬಿ(ಸ) ನಿರಂತರವಾಗಿ ಅವರನ್ನು ನೋಡುತ್ತಲೇ ಇದ್ದರು.' ಪ್ರತಿಯೊಂದು ಸಂದರ್ಭದಲ್ಲೂ ನಬಿ(ಸ) ಸಹಾಬಿಯರಿಗೆ ಸಮತೋಲನದ ಉಪದೇಶ ನೀಡುತ್ತಿದ್ದರು. 'ಸರಿ, ನಾನು ಕೊಡುತ್ತೇನೆ. ನೀನು ಎತ್ತಿಕೊ, ಆದರೆ ಸಮತೋಲನದಿಂದ.' ಆತ ಹತ್ತಿರದ ಸಂಬಂಧಿಯೇ ಆಗಿರಲಿ, ಸಮತೋಲನವಿರಬೇಕು. ಎಷ್ಟು ಅಗತ್ಯವಿದೆಯೋ ಅಷ್ಟು ಮಾತ್ರ ತೆಗೆದುಕೊಳ್ಳಿ. ಹೆಚ್ಚಿಗೆ ತೆಗೆದುಕೊಳ್ಳಬಾರದು. ಈ ಹದೀಸ್‌ನ ಕೊನೆಯಲ್ಲಿರುವ ವರದಿಗಾರನು ಇದನ್ನೂ ಬರೆದಿದ್ದಾನೆ: 'ನಬಿ(ಸ)ರಿಗೆ ಅವರ ಈ ದುರಾಸೆಯ ಬಗ್ಗೆ ಆಶ್ಚರ್ಯವಾಯಿತು.' (ಸಹೀಹ್ ಬುಖಾರಿ ಅನುವಾದ, ಸಂಪುಟ-1, ಪುಟ-517-518, ಕಿತಾಬುಸ್ಸಲಾತ್, ಹದೀಸ್-421, ನಝ್ಹಾರತ್ ಇಶಾಅತ್)

ಇದು ವರದಿಗಾರನ ಸ್ವಂತ ಅಭಿಪ್ರಾಯ. ಬಹುಶಃ ನಬಿ(ಸ) ಅವರ

ದುರಾಸೆಗೆ ಆಶ್ಚರ್ಯಪಟ್ಟು ನೋಡಿರಲಾರರು. ಬದಲಾಗಿ ನಬಿ(ಸ)ರಿಗೆ ಸಹಾಬಿಯರ ಹಳೆಯ ಸ್ಥಿತಿಯಾಗಿದ್ದ ಆ ಬಡತನದ ಕಾಲ ನೆನಪಾಗಿರಬೇಕು. ಅದರ ಬಗ್ಗೆ ಯೋಚಿಸುತ್ತಾ ಅವರನ್ನು ಬಹಳ ದೂರದವರೆಗೆ ನೋಡುತ್ತಿರಬಹುದು; 'ಹೇಗೆ ಈ ಜನರು ತ್ಯಾಗಗಳನ್ನು ಮಾಡಿದ್ದರು, ಹೇಗೆ ಅವರ ಮೇಲೆ ಬಡತನದ ಕಾಲವಿತ್ತು, ಇಂದು ಅಲ್ಲಾಹನು ನಮಗೆ ಹೇಗೆ ಕರುಣಿಸುತ್ತಿದ್ದಾನೆ' ಎಂದು ಯೋಚಿಸಿರಬಹುದು. ವಿವಿಧ ವಿಮರ್ಶಕರು ಕೂಡ ಇದು ವರದಿಗಾರನ ಸ್ವಂತ ಆಲೋಚನೆ ಎಂದು ಪರಿಗಣಿಸಿದ್ದಾರೆ. ನಬಿ(ಸ) ದುರಾಸೆ ಪಡುತ್ತಿದ್ದಾನೆಂದು ಆಶ್ಚರ್ಯಪಡಲಿಲ್ಲ, ಬದಲಾಗಿ ಇತರ ಆಲೋಚನೆಗಳ ಬಗ್ಗೆ ವಿಮರ್ಶಕರು ಬರೆದಿದ್ದಾರೆ.

ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾಹ್(ರ) ವಿವರಿಸುತ್ತಾರೆ: 'ರಸೂಲುಲ್ಲಾಹ್(ಸ)ರಿಂದ ಯಾವುದಾದರೂ ವಸ್ತುವನ್ನು ಕೇಳುವಾಗ 'ಇಲ್ಲ' ಎಂದು ಹೇಳಿದಂತಹ ಸಂದರ್ಭ ಎಂದಿಗೂ ಆಗಿಲ್ಲ.'

(ಸಹೀಹ್ ಮುಸ್ಲಿಮ್ ಅನುವಾದ, ಸಂಪುಟ–12, ಪುಟ–222–223, ಕಿತಾಬ್ ಅಲ್‌ಫ಼ಝ಼ಾಎಲ್, ಹದೀಸ್–4260, ನೂರ್ ಫ಼ೌಂಡೇಷನ್)

ಹಝ್ರತ್ ಸಹ್ಲ್ ಬಿನ್ ಸಅದ್(ರ) ಹೇಳುತ್ತಾರೆ: 'ರಸೂಲುಲ್ಲಾಹ್(ಸ) ಬಹಳ ನಾಚಿಕೆ ಉಳ್ಳವರಾಗಿದ್ದರು. ನಬಿ(ಸ)ರ ಬಳಿ ಏನಾದರೂ ಕೇಳಿದಾಗಲೆಲ್ಲಾ ಅವರು ಅದನ್ನು ದಯಪಾಲಿಸುತ್ತಿದ್ದರು.' (ಸಬ್ಲುಲ್ ಹುದಾವರ್ರಶಾದ್, ಸಂಪುಟ–7, ಪುಟ–50, ದಾರುಲ್ ಕುತುಬ್ ಇಲ್ಮಿಯಾ ಬೈರತ್ 1993)

ಇಬ್ನೆ ಅಬೀ ಖೈಸಾಮಾ ಹಝ್ರತ್ ಅಲಿ(ರ)ರಿಂದ ವರದಿ ಮಾಡುತ್ತಾರೆ: ಹಝ್ರತ್ ಅಲಿ(ರ) ರಸೂಲುಲ್ಲಾಹ್(ಸ)ರ ಗುಣಗಳನ್ನು ವಿವರಿಸುವಾಗಲೆಲ್ಲಾ ಹೀಗೆ ಹೇಳುತ್ತಿದ್ದರು: 'ನಬಿ(ಸ) ದಾನ ಮಾಡುವ ವಿಷಯದಲ್ಲಿ ಎಲ್ಲ ಜನರಿಗಿಂತಲೂ ಹೆಚ್ಚು ದಾನಶೀಲರಾಗಿದ್ದರು.'

(ಸಬ್ಲುಲ್ ಹುದಾವರ್ರಶಾದ್, ಸಂಪುಟ–7, ಪುಟ–52, ದಾರುಲ್ ಕುತುಬ್ ಇಲ್ಮಿಯಾ ಬೈರತ್ 1993)

ಹಝ್ರತ್ ಸಹ್ಲ್ ಬಿನ್ ಸಅದ್(ರ) ವಿವರಿಸುತ್ತಾರೆ: 'ಒಬ್ಬ ಮಹಿಳೆಯು ಬುರ್ದಾ – ಇದು ಒಂದು ರೀತಿಯ ಚಾದರವಾಗಿದೆ – ತಂದು ಹೇಳಿದಳು: 'ಯಾ ರಸೂಲುಲ್ಲಾಹ್, ನಾನು ಇದನ್ನು ನಿಮಗಾಗಿ ತೊಡಿಸಲು ನನ್ನ ಕೈಯಾರೆ ನೇಯ್ದಿದ್ದೇನೆ.' ನಬಿ(ಸ) ಅದನ್ನು, ಅದರ ಅಗತ್ಯವಿದ್ದಂತೆ, ತೆಗೆದುಕೊಂಡರು. ನಂತರ ನಬಿ(ಸ) ನಮ್ಮ ಬಳಿಗೆ ಬಂದರು ಮತ್ತು ಅದೇ ಚಾದರವನ್ನು ಧೋತಿಯಾಗಿ ಆಗಿ ಧರಿಸಿದ್ದರು, ಅಂದರೆ ಕಟ್ಟಿಕೊಂಡರು. ಜನರಲ್ಲಿ ಒಬ್ಬನು ಹೇಳಿದನು: 'ಯಾ ರಸೂಲುಲ್ಲಾಹ್, ಈ ಚಾದರವನ್ನು ನನಗೆ ಧರಿಸಲು ಕೊಡಿರಿ.' ನಬಿ(ಸ) ಹೇಳಿದರು: 'ಸರಿ.' ನಬಿ(ಸ) ಸ್ವಲ್ಪ ಹೊತ್ತು ಸಭೆಯಲ್ಲಿ ಕುಳಿತಿದ್ದರು, ನಂತರ ಒಳಗೆ ಹೋಗಿ ಅದನ್ನು ಮಡಚಿ ಆ ವ್ಯಕ್ತಿಯ ಬಳಿಗೆ ಕಳುಹಿಸಿಕೊಟ್ಟರು. ಬಟ್ಟೆ ಬದಲಾಯಿಸಿ, ಬೇರೆ ಚಾದರ ಧರಿಸಿ ಬಂದರು. ಜನರು ಅವನೊಡನೆ ಹೀಗೆ ಹೇಳಿದರು: 'ನೀನು ಹೀಗೆ ಕೇಳಿ ಒಳ್ಳೆಯದು ಮಾಡಲಿಲ್ಲ. ನಬಿ(ಸ) ಬೇಡುವವನನ್ನು ಹಿಂತಿರುಗಿಸುವುದಿಲ್ಲ ಎಂದು ನಿನಗೆ ಗೊತ್ತಿರುವ ವಿಷಯ'. ಆಗ ಆ ವ್ಯಕ್ತಿ ಹೇಳಿದನು: 'ದೇವನಾಣೆ, ನಾನು ಇದನ್ನು ಕೇಳಿರುವುದು, ನಾನು ಮರಣವನ್ನಪ್ಪುವಾಗ ಇದನ್ನು ನನ್ನ ಕಫನ್ ಆಗಿ ಉಪಯೋಗಿಸಲಿಕ್ಕಾಗಿದೆ.' ಅದೇ ಚಾದರವನ್ನು ನಂತರ ಅವರ ಕಫನ್ ಆಗಿ ಬಳಸಲಾಯಿತು ಎಂದು ಹಝ್ರತ್ ಸಹ್ಲ್ ಹೇಳಿದ್ದಾಗಿ ಬರೆಯಲಾಗಿದೆ.

(ಸಹೀಹ್ ಬುಖಾರಿ, ಸಂಪುಟ–4, ಪುಟ–58–59, ಕಿತಾಬುಲ್ ಬುಯೂ, ಹದೀಸ್–2093, ನಝ಼ಾರತ್ ಇಶಾಅತ್)

ಒಂದು ವರದಿಯಲ್ಲಿದೆ, ಹಝ್ರತ್ ಮಿಸ್ವರ್ ಬಿನ್ ಮಖ್ರಮಾರಿಂದ ವರದಿಯಾಗಿದೆ: 'ರಸೂಲುಲ್ಲಾಹ್(ಸ) ಕೆಲವು ಉಡುಪುಗಳನ್ನು ಹಂಚಿದರು ಮತ್ತು ಮಖ್ರಮಾಗೆ ಯಾವುದೇ ಉಡುಪನ್ನು ನೀಡಲಿಲ್ಲ. ಮಖ್ರಮಾ ತಮ್ಮ ಮಗನಿಗೆ, 'ಹೇ ನನ್ನ ಮಗನೇ, ನನ್ನೊಂದಿಗೆ ರಸೂಲುಲ್ಲಾಹ್(ಸ)ರ ಬಳಿಗೆ ಬಾ' ಎಂದರು. ನಾನು ಅವರ ಜೊತೆ ಹೋದೆ.' (ಅವರ ಮಗ ವರದಿ ಮಾಡಿದ್ದಾರೆ, ಮಿಸ್ವರ್). ಅವರು ಹೇಳಿದರು: 'ಒಳಗೆ ಹೋಗು ಮತ್ತು ಅವರನ್ನು ನನ್ನ ಬಳಿಗೆ ಕರೆಯಿಸು.' ಹೇಗಿದ್ದರೂ, 'ನಾನು ಚಿಕ್ಕವನಾಗಿದ್ದೆ'. 'ಒಳಗೆ ಹೋದೆ, ಅವರನ್ನು ಕರೆದೆ, 'ನನ್ನ ತಂದೆ ಬಂದಿದ್ದಾರೆ' ಎಂದು ತಿಳಿಸಿದೆ. ನಬಿ(ಸ) ಅವರ ಬಳಿಗೆ ಬಂದರು, ಮತ್ತು ಅವುಗಳಲ್ಲಿ ಒಂದು ಉಡುಪು ನಬಿ(ಸ) ಕೈಯಲ್ಲಿತ್ತು. ನಬಿ(ಸ) ಹೇಳಿದರು: 'ನಾನು ನಿನಗಾಗಿ ಇದನ್ನು ಎತ್ತಿಟ್ಟಿದ್ದೆ.' ನೀನು ದೂರು ತಂದಿದ್ದೆ ಅಲ್ಲವೇ. ಅವರು ದೂರನ್ನು ವ್ಯಕ್ತಪಡಿಸುವ ಮೊದಲೇ ನಬಿ(ಸ) ಆ ಚಾದರವನ್ನು ಅವರಿಗೆ ಕೊಟ್ಟು, 'ನಾನು ನಿನಗಾಗಿ ಇದನ್ನು ಎತ್ತಿಟ್ಟಿದ್ದೆ' ಎಂದರು.' ವರದಿಗಾರರು ಹೇಳುತ್ತಾರೆ, 'ನಬಿ(ಸ) ಆ ಮಖ್ರಮಾ ಕಡೆಗೆ ನೋಡಿದರು ಮತ್ತು ಹೇಳಿದರು: 'ಇದು ನೋಡು.' ನಂತರ ಹೇಳಿದರು, 'ಈ ಚಾದರ ನಿನಗಾಗಿ.' ಮಖ್ರಮಾ ಈ ಮಾತಿಗೆ ಸಂತೋಷಪಟ್ಟರು.'

(ಸಹೀಹ್ ಮುಸ್ಲಿಮ್, ಸಂಪುಟ–4, ಪುಟ–229, ಕಿತಾಬುಲ್ ಝ಼ಕಾತ್, ಹದೀಸ್–1736, ನೂರ್ ಫ಼ೌಂಡೇಷನ್) (ಫ಼ತಹ್ ಅಲ್‌ಬಾರಿ, ಸಂಪುಟ–10, ಪುಟ–281, ಕಿತಾಭುಲ್ ಲಿಬಾಸ್, ವರದಿ ಸಂಖ್ಯೆ–5800, ಮಕ್ತಬ ಅಲ್‌ಮಲಕ್ ಫ಼ಹದ್, ರಿಯಾದ್ 2001)

ಮತ್ತೊಂದು ವರದಿಯಲ್ಲಿದೆ: ನಬಿ(ಸ) ಹಝ್ರತ್ ಮಖ್ರಮಾರ ಧ್ವನಿಯನ್ನು ಗುರುತಿಸಿದರು ಮತ್ತು ಹೊರಬಂದರು. ಮಗ ಒಳಗೆ ಹೋಗುವ ಬದಲು, ನಬಿ(ಸ) ಸ್ವತಃ ಹೊರಬಂದರು. ನಬಿ(ಸ)ರ ಬಳಿ ಒಂದು ಉಡುಪು ಇತ್ತು, ನಬಿ(ಸ) ಅದರ ವಿಶೇಷತೆಗಳನ್ನು ಅವರಿಗೆ ತೋರಿಸುತ್ತಿದ್ದರು ಮತ್ತು ಹೀಗೆ ಹೇಳುತ್ತಿದ್ದರು: 'ನಾನು ಇದನ್ನು ನಿನಗಾಗಿಯೇ ಎತ್ತಿಟ್ಟಿದ್ದೆ. ನಾನು ಇದನ್ನು ನಿನಗಾಗಿಯೇ ಎತ್ತಿಟ್ಟಿದ್ದೆ.' (ಸಹೀಹ್ ಮುಸ್ಲಿಮ್ ಅನುವಾದ, ಸಂಪುಟ–4, ಪುಟ–229, ಕಿತಾಬುಝ್ಝಕಾತ್, ಹದೀಸ್–1737, ನೂರ್ ಫೌಂಡೇಷನ್)

ಹಝ್ರತ್ ಅನಸ್ ಬಿನ್ ಮಾಲಿಕ್(ರ)ರಿಂದ ವರದಿಯಾಗಿದೆ: 'ನಾನು ರಸೂಲುಲ್ಲಾಹ್(ಸ)ರೊಂದಿಗೆ ಹೋಗುತ್ತಿದ್ದೆ. ನೀವು ನಜ್ರಾನಿ ಚಾದರವನ್ನು ಹೊದ್ದುಕೊಂಡಿದ್ದರು, ಅದರ ಅಂಚು ಒರಟಾಗಿತ್ತು. ಒಬ್ಬ ಹಳ್ಳಿಗ ಬಂದು ನಬಿ(ಸ)ರ ಚಾದರವನ್ನು ಬಹಳ ಬಲವಾಗಿ ಎಳೆದನು. ನಾನು ರಸೂಲುಲ್ಲಾಹ್(ಸ)ರ ಕತ್ತಿನ ಒಂದು ಬದಿಯನ್ನು ನೋಡಿದೆ, ಅವನು ಬಲವಾಗಿ ಎಳೆದ ಕಾರಣದಿಂದ ಆ ಚಾದರದ ಅಂಚು ಕತ್ತಿನ ಮೇಲೆ ಗಾಯ ಮಾಡಿತ್ತು. ನಂತರ ಅವನು ಹೇಳಿದನು: 'ಹೇ ಮುಹಮ್ಮದ್, ನಿಮ್ಮ ಬಳಿ ಇರುವ ಅಲ್ಲಾಹನ ಸಂಪತ್ತಿನಲ್ಲಿ ನನಗೂ ನೀಡಲು ಆದೇಶಿಸಿ.' ರಸೂಲುಲ್ಲಾಹ್ ಅವನ ಕಡೆಗೆ ತಿರುಗಿ ನಕ್ಕರು, ಮತ್ತು ನಂತರ ಅವನಿಗೆ ನೀಡಲು ಆದೇಶಿಸಿದರು.'

(ಸಹೀಹ್ ಮುಸ್ಲಿಮ್ ಅನುವಾದ, ಸಂಪುಟ–4, ಪುಟ–227–228, ಕಿತಾಬುಝ್ಝಕಾತ್, ಹದೀಸ್–1735, ನೂರ್ ಫೌಂಡೇಷನ್)

ಇದರ ವಿವರಣೆಯನ್ನು ಒಂದೆಡೆ ಹೀಗೆ ನೀಡಲಾಗಿದೆ: ಹಝ್ರತ್ ಅಬೂ ಹುರೈರಾ(ರ) ವಿವರಿಸುತ್ತಾರೆ, 'ನಬಿ ಕರೀಮ್(ಸ) ನಮ್ಮೊಂದಿಗೆ ಸಭೆಯಲ್ಲಿ ಕುಳಿತು ಮಾತನಾಡುತ್ತಿದ್ದರು. ನಂತರ ನಬಿ(ಸ) ಎದ್ದು ನಿಲ್ಲುವಾಗ, ನಾವೂ ಎದ್ದು ನಿಲ್ಲುತ್ತಿದ್ದೆವು. ಕೊನೆಗೆ ನಬಿ(ಸ) ತಮ್ಮ ಪತ್ನಿಯಂದಿರಲ್ಲಿ ಒಬ್ಬರ ಮನೆಗೆ ಹೋಗುತ್ತಿದ್ದರು. ಹೀಗೆ ಒಂದು ದಿನ ನಬಿ(ಸ) ನಮ್ಮೊಂದಿಗೆ ಮಾತನಾಡುತ್ತಿದ್ದಾಗ, ನಬಿ(ಸ) ಎದ್ದು ನಿಂತಾಗ ನಾವೂ ಎದ್ದು ನಿಂತೆವು. ನಾವು ಒಬ್ಬ ಹಳ್ಳಿಗನನ್ನು ನೋಡಿದೆವು, ಆತ ನಬಿ(ಸ)ರ ಚಾದರವನ್ನು ಹಿಡಿದು ಎಳೆದನು. ಇದರಿಂದ ನಬಿ(ಸ)ರ ಕುತ್ತಿಗೆ ಕೆಂಪಾಯಿತು. ಹಝ್ರತ್ ಅಬೂ ಹುರೈರಾ(ರ) ವಿವರಿಸುತ್ತಾರೆ, ನಬಿ ಕರೀಮ್(ಸ)ರ ಆ ಚಾದರ ಬಹಳ ಒರಟಾಗಿತ್ತು. ನಂತರ ನಬಿ(ಸ) ಅವನ ಕಡೆಗೆ ತಿರುಗಿದಾಗ, ಆ ಹಳ್ಳಿಗನು ನಬಿ(ಸ)ರೊಡನೆ ಹೇಳಿದನು: 'ನನ್ನ ಈ ಎರಡು ಒಂಟೆಗಳ ಮೇಲೆ ನೀವು ಸಂಪತ್ತನ್ನು ಹೇರಿ ಕೊಡಿ; ಏಕೆಂದರೆ ನೀವು ನಿಮ್ಮ ಸಂಪತ್ತಿನಿಂದಲೂ ಹೇರಿ ಕೊಡುತ್ತಿಲ್ಲ ಮತ್ತು ನಿಮ್ಮ ತಂದೆಯ ಸಂಪತ್ತಿನಿಂದಲೂ ಅಲ್ಲ.' ಬಹಳ ಅಸಭ್ಯವಾಗಿ ಮಾತನಾಡಿದನು. ವರದಿಗಾರರು ಹೇಳುತ್ತಾರೆ, ಇದಕ್ಕೆ ನಬಿ ಕರೀಮ್(ಸ) ಹೇಳಿದರು: 'ಅದು ಸಾಧ್ಯವಲ್ಲ ಮತ್ತು ನಾನು ಅಲ್ಲಾಹನಲ್ಲಿ ಕ್ಷಮೆ ಯಾಚಿಸುತ್ತೇನೆ. ಇಲ್ಲ ಮತ್ತು ನಾನು ಅಲ್ಲಾಹನಲ್ಲಿ ಕ್ಷಮೆ ಯಾಚಿಸುತ್ತೇನೆ. ಇಲ್ಲ, ಮತ್ತು ನಾನು ಅಲ್ಲಾಹನಲ್ಲಿ ಕ್ಷಮೆ ಯಾಚಿಸುತ್ತೇನೆ.' ಜೊತೆಗೆ ಇಸ್ತಿಗ್ಫಾರ್ ಕೂಡ ಮಾಡಿದರು ಮತ್ತು 'ಸಾಧ್ಯವಲ್ಲ' ಎಂದರು. 'ನಾನು ಅಲ್ಲಿಯವರೆಗೆ ನಿನಗೆ ಕೊಡುವುದಿಲ್ಲ.' 'ಕೊಡುವುದಿಲ್ಲ' ಎಂದು ಹೇಳಿದ್ದಲ್ಲ. ಬದಲಾಗಿ ಒಂದು ಷರತ್ತನ್ನು ವಿಧಿಸಿದರು. 'ನೀನು ನನ್ನನ್ನು ಎಳೆದಿದ್ದಕ್ಕೆ ಪ್ರಾಯಶ್ಚಿತ್ತ ನೀಡುವ ತನಕ ಕೊಡುವುದಿಲ್ಲ. ನೀನು ನನ್ನ ಚಾದರವನ್ನು ಎಳೆದು ನನ್ನ ಕುತ್ತಿಗೆಯನ್ನು ಗಾಯಗೊಳಿಸಿದ್ದೀಯಲ್ಲ, ಅದಕ್ಕೆ ಪ್ರಾಯಶ್ಚಿತ್ತ ನೀಡು.' ಆ ಹಳ್ಳಿಗ ಪ್ರತಿ ಬಾರಿಯೂ ಹೇಳುತ್ತಿದ್ದ: 'ದೇವನಾಣೆ, ನಾನು ಇದಕ್ಕೆ ಪ್ರಾಯಶ್ಚಿತ್ತ ನೀಡುವುದಿಲ್ಲ.' ಅವನು ಹೇಳಿದ, 'ಇಲ್ಲ, ನಾನು ಯಾವುದೇ ಪ್ರಾಯಶ್ಚಿತ್ತ ನೀಡುವುದಿಲ್ಲ. ಏಕೆಂದರೆ ನೀವು ಕೆಡುಕಿಗೆ ಕೆಡುಕಿನಿಂದ ಪ್ರತೀಕಾರ ಮಾಡಲ್ಲ.' ಆತ ಈ ತಂತ್ರವನ್ನು ಬಳಸಿದನು, ಹಳ್ಳಿಗನೂ ಜಾಣನಾಗಿದ್ದನು: 'ನಬಿ(ಸ) ಕೆಡುಕಿಗೆ ಕೆಡುಕಿನಿಂದ ಪ್ರತಿಕ್ರಿಯೆ ಮಾಡಲ್ಲ, ಹಾಗಾಗಿ ನಾನು ಪ್ರಾಯಶ್ಚಿತ್ತ ನೀಡುವ ಪ್ರಶ್ನೆಯೇ ಇಲ್ಲ. ನಾನೇನೋ ಕೆಡುಕು ಮಾಡಿದ್ದೇನೆ, ನೀವಂತೂ ಕೆಡುಕು ಮಾಡುವುದಿಲ್ಲ.' ಇದನ್ನು ಕೇಳಿ ನಬಿ ಕರೀಮ್(ಸ) ನಕ್ಕರು. ನಂತರ ಹಝ್ರತ್ ಉಮರ್(ರ)ರೊಡನೆ ಹೀಗೆ ಹೇಳಿದರು: 'ಅವನ ಎರಡು ಒಂಟೆಗಳಲ್ಲಿ ಒಂದರ ಮೇಲೆ ಬಾರ್ಲಿ ಮತ್ತು ಮತ್ತೊಂದರ ಮೇಲೆ ಖರ್ಜೂರಗಳನ್ನು ಹೇರಿಕೊಡಿ'. ಎರಡನ್ನೂ ತುಂಬಿಸಿಕೊಡಿ. ಆತನಿಗೆ ಕೇವಲ ಸಂಪತ್ತನ್ನು ನೀಡಲಿಲ್ಲ, ಬದಲಾಗಿ ಆತನ ಅತಿರೇಕವನ್ನೂ ಕ್ಷಮಿಸಿದರು.' (ಸುನನ್ ಅಬಿದಾವುದ್, ಕಿತಾಬುಲ್ ಅದಬ್ ಫಿಲ್‌ಹಿಲ್ಮಿ ವ ಅಖ್ಲಾಖಿನ್ನಬೀ(ಸ), ಹದೀಸ್–4775, ಸಂಪುಟ–6, ಪುಟ–25, ದಾರುಲ್ ಕುತುಬ್ ಇಲ್ಮಿಯಾ ಬೈರುತ್ 1996)

ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾಹ್(ರ) ವಿವರಿಸುತ್ತಾರೆ: 'ರಸೂಲುಲ್ಲಾಹ್(ಸ) ಹೇಳಿದರು, 'ನಮ್ಮ ಬಳಿ ಬಹ್ರೇನ್‌ನ ಸಂಪತ್ತು ಬಂದರೆ ನಾನು ನಿನಗೆ ಹೀಗೆ, ಹೀಗೆ ಮತ್ತು ಹೀಗೆ ನೀಡುವೆನು.' ನೀವು ಎರಡೂ ಕೈಗಳನ್ನು ಸೇರಿಸಿ ಹೇಳಿದರು. ಆದರೆ ಬಹ್ರೇನ್‌ನ ಸಂಪತ್ತು ಬರುವ ಮೊದಲೇ ನಬಿ(ಸ) ತೀರಿಕೊಂಡರು. ನಂತರ ಆ ಸಂಪತ್ತು ಹಝ್ರತ್ ಅಬೂಬಕರ್(ರ)ರ ಬಳಿ ಬಂತು. ಅವರು ಒಬ್ಬ ಘೋಷಕನಿಗೆ ಹೀಗೆ ಘೋಷಿಸಲು ಆದೇಶಿಸಿದರು: ನಬಿ(ಸ)ರ ಕಡೆಯಿಂದ ಯಾರ ಮೇಲಾದರೂ ಯಾವುದೇ ವಾಗ್ದಾನ ಅಥವಾ ಸಾಲವಿದ್ದರೆ, ಅವರು ಬರಬೇಕು.' ಆಗ ನಾನು ಎದ್ದುನಿಂತು ವಿನಂತಿಸಿದೆ:

'ನಬಿ(ಸ) ಹೇಳಿದ್ದರು, ಬಹ್ರೇನ್‌ನ ಸಂಪತ್ತು ಬಂದರೆ ನಾನು ನಿನಗೆ ಹೀಗೆ, ಹೀಗೆ ಮತ್ತು ಹೀಗೆ ನೀಡುವೆನು.' ಇದಕ್ಕೆ ಹಝ್ರತ್ ಅಬೂಬಕರ್ ಒಂದು ಬೊಗಸೆ ತುಂಬಿ ಕೊಟ್ಟರು. ಎರಡೂ ಕೈಗಳನ್ನು ಸೇರಿಸಿ ತುಂಬಿಕೊಟ್ಟರು. ನಂತರ ನನ್ನೊಡನೆ, 'ಇದನ್ನು ಎಣಿಸು' ಎಂದರು. ನಾನು ಎಣಿಸಿದಾಗ ಅದು ಐನೂರು ದಿರ್ಹಮ್ ಆಗಿತ್ತು. ನಂತರ ಅವರು ಹೇಳಿದರು: 'ಇದರ ಎರಡು ಪಟ್ಟು ಇನ್ನೂ ತೆಗೆದುಕೊ.' ರಸೂಲುಲ್ಲಾಹ್(ಸ) ಹಝ್ರತ್ ತಲ್ಹಾ ಬಿನ್ ಹಝ್ರುಮಿರನ್ನು ಬಹ್ರೇನ್‌ನ ಅಧಿಕಾರಿಯಾಗಿ ನೇಮಿಸಿದ್ದರು, ಅವರು ಬಹ್ರೇನ್‌ನಿಂದ ಈ ಸಂಪತ್ತನ್ನು ಕಳುಹಿಸಿದ್ದರು. ನಬಿ(ಸ)ರ ನಿಧನದ ಬಳಿಕವೂ ಹಝ್ರತ್ ತಲ್ಹಾ ಅದೇ ಹುದ್ದೆಯಲ್ಲಿದ್ದರು. (ಸಹೀಹ್ ಮುಸ್ಲಿಮ್ ಅನುವಾದ, ಸಂಪುಟ-12, ಪುಟ-225-226, ಕಿತಾಬ್ ಅಲ್‌ಫಝಾಇಲ್, ಹದೀಸ್-4264, ನೂರ್ ಫೌಂಡೇಷನ್, ಶರಹ್ ಅಝ್ಝುರ್ಖಾನಿ ಅಲಲ್ ಮವಾಹಿಬ್ ಅದ್ದುನಿಯ, ಸಂಪುಟ-4, ಪುಟ-556, ದಾರುಲ್ ಕುತುಬ್ ಇಲ್ಮಿಯಾ ಬೈರುತ್ 1996)

ಹಾರೂನ್ ಬಿನ್ ರಿಯಾಬ್ ವಿವರಿಸುತ್ತಾರೆ: 'ಒಮ್ಮೆ ನಬಿ(ಸ)ರ ಬಳಿಗೆ ಎಪ್ಪತ್ತು ಸಾವಿರ ದಿರ್ಹಮ್ ಬಂತು. ನಬಿ(ಸ)ರ ಬಳಿಗೆ ಬಂದ ಅತ್ಯಂತ ದೊಡ್ಡ ಸಂಪತ್ತು ಇದಾಗಿತ್ತು. ನಂತರ ಈ ಸಂಪತ್ತನ್ನು ಒಂದು ಚಾಪೆಯ ಮೇಲೆ ಇಡಲಾಯಿತು. ನಂತರ ನಬಿ(ಸ) ಅದನ್ನು ಹಂಚಲು ನಿಂತರು, ಆಗ ಯಾವ ಯಾಚಕ ಬಂದನೋ, ಅವನನ್ನು ಖಾಲಿ ಕೈಯಲ್ಲಿ ಮರಳಿಸಲಿಲ್ಲ. ಎಲ್ಲಿಯವರೆಗೆ ಎಂದರೆ ನಬಿ(ಸ) ಆ ಸಂಪೂರ್ಣ ಸಂಪತ್ತನ್ನು ಹಂಚಿಬಿಟ್ಟರು.'

(ಅಖ್ಲಾಖುನ್ನಬೀ(ಸ) ವ ಆದಾಬಹು, ಪುಟ-103-104, ಹದೀಸ್-97, ದಾರುಲ್ ಉಲು)

ಈ ಸಂಪತ್ತಿಗಿಂತಲೂ ಹೆಚ್ಚು ಸಂಪತ್ತು ಬರುತ್ತಲೇ ಇತ್ತು. ಬಹುಶಃ ವರದಿಗಾರನ ಜ್ಞಾನದ ಪ್ರಕಾರ ಇದು ಅತ್ಯಂತ ದೊಡ್ಡ ಸಂಪತ್ತಾಗಿರಬಹುದು, ಅಥವಾ ಈ ವರದಿಯನ್ನು ವಿವರಿಸುತ್ತಿರುವ ಸಮಯದವರೆಗೆ ಇದು ಅತ್ಯಂತ ದೊಡ್ಡ ಸಂಪತ್ತಾಗಿರಬಹುದು; ಏಕೆಂದರೆ ಇದಕ್ಕಿಂತ ಹಿಂದಿನ ವರದಿಯಲ್ಲಿ, ಬಹ್ರೇನ್‌ನಿಂದ ಬಂದ ಸಂಪತ್ತು ಇದಕ್ಕಿಂತ ಬಹಳ ಹೆಚ್ಚಾಗಿತ್ತು.

ಹಝ್ರತ್ ಅಬೂ ಹುರೈರಾ(ರ)ರಿಂದ ವರದಿಯಾಗಿದೆ: 'ಒಬ್ಬ ವ್ಯಕ್ತಿ ನಬಿ(ಸ)ರ ಸನ್ನಿಧಿಗೆ ಬಂದು ನಬಿ(ಸ) ರೊಡನೆ ಯಾಚಿಸಿದನು. ರಸೂಲುಲ್ಲಾಹ್(ಸ) ಅವನಿಗೆ ಅರ್ಧ ವಸ್ಕ್ ಧಾನ್ಯವನ್ನು ಸಾಲ ಪಡೆದು ನೀಡಿದರು. (ಒಂದು ವಸ್ಕ್ ಅಂದರೆ ಸುಮಾರು ಎರಡೂವರೆ-ಅರವತ್ತು ಸಾಅ್, ಮತ್ತು ಒಂದು ಸಾಅ್ ಅಂದರೆ ಎರಡೂವರೆ ಸೇರಿಗೆ ಸಮಾನವಾಗಿರುತ್ತದೆ). ನಂತರ ಸಾಲ ನೀಡಿದ ವ್ಯಕ್ತಿ ಅದನ್ನು ಮರಳಿ ಕೇಳಲು ಬಂದಾಗ, ನೀವು ಅವನಿಗೆ ಒಂದು ವಸ್ಕ್ ನೀಡಿದರು ಮತ್ತು ಹೇಳಿದರು: 'ಅರ್ಧ ಅವನ ಸಾಲ ತೀರಿಸಲು, ಮತ್ತು ಅರ್ಧ ಅವನಿಗೆ ಉಡುಗೊರೆಯಾಗಿ.' (ಅಶ್ಶಿಫಾ ಬಿತಅ್‌ರೀಫ್ ಹುಖೂಖುಲ್ ಮುಸ್ತಫಾ ಲಿಖಾಝಿ ಅಯಾಝ್, ಪುಟ-77-78, ದಾರುಲ್ ಕುತುಬ್ ಇಲ್ಮಿಯಾ ಬೈರುತ್ 2002, ಲುಗಾತುಲ್ ಹದೀಸ್, ಸಂಪುಟ-2, ಪುಟ-648, ಸಂಪುಟ-4, ಪುಟ-487)

ಇದು ಸಾಲ ಮರಳಿಸುವ ಅತ್ಯುತ್ತಮ ವಿಧಾನವಾಗಿದೆ.' ಅವನಿಂದ ಅರ್ಧ ವಸ್ಕ್ ಧಾನ್ಯವನ್ನು ಸಾಲ ಪಡೆದು ನೀಡಿದ್ದರು. ಸಾಲ ನೀಡಿದವನಿಗೆ ಪೂರ್ತಿ ಒಂದು ವಸ್ಕ್ ನೀಡಿದರು. 'ಇದು ಸಾಲ ಮರಳಿಸುವ ಅತ್ಯುತ್ತಮ ವಿಧಾನ. ಅದಲ್ಲದೇ ಪಡೆದ ಸಾಲವನ್ನು ಮರಳಿಸದೇ ಕಾರಣಗಳನ್ನು ಹೇಳುವುದಲ್ಲ'

ಹಝ್ರತ್ ಸಹ್ಲ್‌ರಿಂದ ವರದಿಯಾಗಿದೆ: 'ರಸೂಲುಲ್ಲಾಹ್(ಸ)ರಿಗಾಗಿ ಕಪ್ಪು ಬಣ್ಣದ ಉಣ್ಣೆಯ ಜುಬ್ಬಾ ಮಾಡಿಸಲಾಗಿತ್ತು. ಒಂದು ದಿನ ನಬಿ(ಸ) ಆ ಖಬಾವನ್ನು ಧರಿಸಿ ಸಹಾಬಿಯರ ಬಳಿಗೆ ಬಂದರು. ನಬಿ(ಸ) ಹೇಳಿದರು: 'ಇದು ಎಷ್ಟೊಂದು ಸುಂದರವಾಗಿದೆ ಎಂದು ನೀವು ನೋಡುವುದಿಲ್ಲವೇ.' ಒಬ್ಬ ಹಳ್ಳಿಗನು ವಿನಂತಿಸಿದನು: 'ಯಾ ರಸೂಲುಲ್ಲಾಹ್, ನನ್ನ ತಾಯಿ-ತಂದೆ ನಿಮ್ಮ ಮೇಲೆ ಅರ್ಪಣೆಯಾಗಲಿ, ಈ ಜುಬ್ಬವನ್ನು ನನಗೆ ದಯಪಾಲಿಸಿರಿ.' ಮತ್ತು ರಸೂಲುಲ್ಲಾಹ್(ಸ)ರಿಂದ ಏನನ್ನಾದರೂ ಕೇಳಿದರೆ 'ಇಲ್ಲ' ಎಂದು ಹೇಳಿದಂತಹ ಸಂದರ್ಭ ಎಂದಿಗೂ ಬಂದಿರಲಿಲ್ಲ. ರಸೂಲುಲ್ಲಾಹ್(ಸ) ತಮ್ಮ ಜುಬ್ಬವನ್ನು ತೆಗೆದು ಅವನಿಗೆ ಕೊಟ್ಟುಬಿಟ್ಟರು.' (ಸಬ್ಲುಲ್ ಹುದಾ ವರ್‌ರಶಾದ್, ಸಂಪುಟ-7, ಪುಟ-53, ದಾರುಲ್ ಕುತುಬ್ ಇಲ್ಮಿಯಾ ಬೈರುತ್ 1993)

ಒಂದು ಬಹಳ ಸುಂದರವಾದ ವರದಿಯಿದೆ. ಹಝ್ರತ್ ಇಬ್ನು ಉಮರ್(ರ) ವಿವರಿಸುತ್ತಾರೆ: 'ರಸೂಲುಲ್ಲಾಹ್(ಸ) ಬಟ್ಟೆ ಮಾರುವವನೊಬ್ಬನಿಂದ ನಾಲ್ಕು ದಿರ್ಹಮ್‌ಗೆ ಒಂದು ಅಂಗಿ ಖರೀದಿಸಿದರು. ಆ ಅಂಗಿ ಧರಿಸಿ ನಬಿ(ಸ) ಹೊರಗೆ ಬಂದಾಗ, ಅನ್ಸಾರಿಗಳಲ್ಲಿ ಒಬ್ಬ ವ್ಯಕ್ತಿ ಹೇಳಿದರು: 'ಹೇ ಅಲ್ಲಾಹನ ರಸೂಲ್(ಸ), ನನಗೆ ಈ ಅಂಗಿ ಕೊಡಿರಿ. ಅಲ್ಲಾಹನು ನಿಮಗೆ ಸ್ವರ್ಗದ ಉಡುಪನ್ನು ತೊಡಿಸಲಿ'. ನಬಿ(ಸ) ಆ ಅಂಗಿ ತೆಗೆದು ಅವನಿಗೆ ಕೊಟ್ಟರು. ನಂತರ ಅಂಗಡಿಯವನ ಬಳಿಗೆ ಹೋಗಿ ಅವನಿಂದ ನಾಲ್ಕು ದಿರ್ಹಮ್‌ಗೆ ಇನ್ನೊಂದು ಅಂಗಿ ಖರೀದಿಸಿದರು. ನಬಿ(ಸ)ರ ಬಳಿ ಎರಡು ದಿರ್ಹಮ್ ಉಳಿದಿತ್ತು. ನಬಿ(ಸ)ರ ಬಳಿ ಆ ಸಮಯದಲ್ಲಿ ಹತ್ತು ದಿರ್ಹಮ್ ಇತ್ತು, ನಾಲ್ಕಕ್ಕೆ ಮೊದಲ ಅಂಗಿ ಖರೀದಿಸಿದ್ದರು, ಅನಂತರ ನಾಲ್ಕಕ್ಕೆ ಎರಡನೆಯದು ಖರೀದಿಸಿದರು. ಎರಡು ದಿರ್ಹಮ್ ಉಳಿಯಿತು. ನಬಿ(ಸ) ದಾರಿಯಲ್ಲಿ ಹಿಂತಿರುಗಿ ಬರುತ್ತಿದ್ದಾಗ ಒಬ್ಬ ದಾಸಿ ಅಳುತ್ತಿರುವುದನ್ನು ಕಂಡರು. ನಬಿ(ಸ) ಅವಳನ್ನು ಅಳುವ ಕಾರಣ ಕೇಳಿದರು. ಆಕೆ ಹೇಳಿದಳು: 'ಹೇ ಅಲ್ಲಾಹನ ರಸೂಲ್, ನನ್ನ ಮನೆಯವರು ನನಗೆ ಎರಡು ದಿರ್ಹಮ್ ಕೊಟ್ಟು ಅದರಿಂದ ಹಿಟ್ಟು ಖರೀದಿಸಿ ತರಲು ಹೇಳಿದ್ದರು, ಆದರೆ ಅವು ನನ್ನಿಂದ ಎಲ್ಲೋ ಬಿದ್ದು ಕಳೆದುಹೋಗಿವೆ.' ನಬಿ(ಸ) ಉಳಿದ ಎರಡು ದಿರ್ಹಮ್‌ಗಳನ್ನು ಆಕೆಗೆ ದಯಪಾಲಿಸಿದರು. ಆಕೆ ಹಿಂದಿರುಗಿ ಮತ್ತೆ ಅಳಲಾರಂಭಿಸಿದಳು. ನಬಿ(ಸ) ಆಕೆಯನ್ನು ಕೇಳಿದರು, 'ಈಗ ನಿನ್ನ ಬಳಿ ಎರಡು ದಿರ್ಹಮ್‌ಗಳಿವೆ, ಹೋಗಿ ಹಿಟ್ಟು ಖರೀದಿಸು, ಈಗೇಕೆ ಅಳುತ್ತಿದ್ದೀಯಾ?' ಆಕೆ ಹೇಳಿದಳು: 'ನಾನು ಇಷ್ಟೊಂದು ಹೊತ್ತು ಎಲ್ಲಿದ್ದೆ ಎಂದು ಕೇಳಿ ಅವರು ನನ್ನನ್ನು ಹೊಡೆಯುತ್ತಾರೆಂಬ ಭಯ ನನಗಿದೆ.' ನಬಿ(ಸ) ಆಕೆಯೊಂದಿಗೆ ಆಕೆಯ ಮನೆಯವರ ಕಡೆಗೆ ಹೊರಟರು. ನಬಿ(ಸ) ಅವರಿಗೆ ಸಲಾಂ ಹೇಳಿದರು. ಅವರು ನಬಿ(ಸ)ರ ಧ್ವನಿಯನ್ನು ಗುರುತಿಸಿದರು, ಆದರೆ ಉತ್ತರಿಸುವ ಬದಲು ಮೌನವಹಿಸಿದರು. ನಬಿ(ಸ) ಪುನಃ ಸಲಾಂ ಹೇಳಿದರು, ಮನೆಯವರು ಮತ್ತೆ ಮೌನವಾಗಿದ್ದರು. ನಬಿ(ಸ) ಮೂರನೇ ಬಾರಿ ಸಲಾಂ ಹೇಳಿದರು. ಆಗ ಅವರು ನಬಿ(ಸ)ರ ಸಲಾಮಿಗೆ ಉತ್ತರಿಸಿದರು. ನಬಿ(ಸ) ಅವರನ್ನು ಕೇಳಿದರು: 'ನೀವು ಮೊದಲ ಬಾರಿ ಸಲಾಂ ಕೇಳಲಿಲ್ಲವೇ?' ಅವರು ಹೇಳಿದರು: 'ನಾವು ಕೇಳಿದ್ದೆವು, ಆದರೆ ನೀವು ನಮ್ಮ ಮೇಲೆ ಸಂರಕ್ಷಣೆಯ ದುಆವನ್ನು ಹೆಚ್ಚಿಸುತ್ತಾ ಹೋಗಬೇಕೆಂದು, ಮತ್ತೆ ಮತ್ತೆ ಸಲಾಂ ಹೇಳಬೇಕೆಂದು ನಾವು ಬಯಸಿದೆವು. ಇದು ಸಹಾಬಿಯರ ಬಯಕೆಯಾಗಿತ್ತು. ಅನಂತರ ಅವರು ಕೇಳಿದರು: 'ಹೇ ಅಲ್ಲಾಹನ ರಸೂಲ್, ನಮ್ಮ ತಾಯಿ-ತಂದೆ ನಿಮ್ಮ ಮೇಲೆ ಅರ್ಪಣೆಯಾಗಲಿ, ನೀವು ಏಕೆ ಇಲ್ಲಿಗೆ ಬಂದಿರಿ?' ನಬಿ(ಸ) ಹೇಳಿದರು: 'ಈ ಬಾಲಕಿಗೆ ನೀವು ಹೊಡೆಯುತ್ತೀರೆಂದು ಭಯವಾಗಿತ್ತು.' ಆ ದಾಸಿಯ ಯಜಮಾನನು ಹೇಳಿದನು: 'ನೀವು ಆಕೆಯೊಂದಿಗೆ ಬಂದ ಕಾರಣ, ನಾನು ಈ ದಾಸಿಯನ್ನು ಅಲ್ಲಾಹನಿಗಾಗಿ ಸ್ವತಂತ್ರಗೊಳಿಸಿದೆ.' ನಬಿ ಕರೀಮ್(ಸ) ಅವರಿಗೆ ಒಳಿತು ಮತ್ತು ಸ್ವರ್ಗದ ಶುಭವಾರ್ತೆ ನೀಡಿದರು, ಅನಂತರ ಹೇಳಿದರು: 'ಅಲ್ಲಾಹನು ಈ ಹತ್ತು ದಿರ್ಹಮ್‌ಗಳಲ್ಲಿ ಬಹಳ ಬರ್ಕತ್ ಹಾಕಿದ್ದಾನೆ, ಅಲ್ಲಾಹನು ತನ್ನ ನಬಿಗೂ ಇದರಿಂದ ಅಂಗಿ ತೊಡಿಸಿದನು, ಒಬ್ಬ ಅನ್ಸಾರಿಗೂ ತೊಡಿಸಿದನು ಮತ್ತು ದಾಸಿಯೊಬ್ಬಳನ್ನು ಕೂಡ ಇದರಿಂದಾಗಿ ಸ್ವತಂತ್ರಗೊಳಿಸಿದನು.'

(ಅಲ್‌ಮುಜಮುಲ್ ಕಬೀರ್ ಅತ್ತಬರಾನಿ, ಸಂಪುಟ-12, ಪುಟ-441-442, ಹದೀಸ್-13607, ಮಕ್ತಬ ಇಬ್ನೆ ತೈಮಿಯ, ಅಲ್‌ಖಾಹಿರಃ)

ಹಝ್ರತ್ ಉಸ್ಮಾನ್(ರ) ನಬಿ ಕರೀಮ್(ಸ)ರಿಗೆ ದ್ರಾಕ್ಷಿಯ ಒಂದು ಗೊಂಚಲನ್ನು ಉಡುಗೊರೆಯಾಗಿ ನೀಡಿದರು. ಅದು ಖರ್ಜೂರದ ಒಂದು ಗೊಂಚಲಾಗಿತ್ತು ಎಂದೂ ಹೇಳಲಾಗುತ್ತದೆ. ಒಂದೆಡೆ ದ್ರಾಕ್ಷಿಯೆಂದಿದೆ, ಇನ್ನೊಂದೆಡೆ ಖರ್ಜೂರದ ಎಂದಿದೆ. ಹೇಗಿದ್ದರೂ, ಅವರು ಹೇಳುತ್ತಾರೆ: ನಂತರ ಒಬ್ಬ ಯಾಚಕ ಬಂದನು, ನಬಿ(ಸ) ಅದನ್ನು ಅವನಿಗೆ ಕೊಟ್ಟುಬಿಟ್ಟರು. ನಂತರ ಹಝ್ರತ್ ಉಸ್ಮಾನ್(ರ) ಅದನ್ನು ಒಂದು ದಿರ್ಹಮ್‌ಗೆ ಖರೀದಿಸಿದರು. ಅವರ ತಂದಿದ್ದ ಆ ಗೊಂಚಲು ಯಾವುದೋ ವಿಶೇಷ ತರದ್ದು ಆಗಿರಬಹುದು, ಖರ್ಜೂರಗಳು ಒಳ್ಳೆಯದಾಗಿರಬಹುದು; ಅವರು ಆ ಯಾಚಕನಿಂದ ಅದನ್ನು ಒಂದು ದಿರ್ಹಮಿಗೆ ಖರೀದಿಸಿ, ಮತ್ತೆ ನಬಿ(ಸ)ರ ಸನ್ನಿಧಿಯಲ್ಲಿ ಅರ್ಪಿಸಿದರು. ನಂತರ ಆ ಯಾಚಕ ಮತ್ತೆ ಬಂದನು, ಆಗ ನಬಿ(ಸ) ಅದನ್ನು ಮತ್ತೆ ಅವನಿಗೆ ನೀಡಿದರು. ಇದೇ ರೀತಿ ಮೂರು ಬಾರಿ ನಡೆಯಿತು. ಹಝ್ರತ್ ಉಸ್ಮಾನ್ ಖರೀದಿಸುತ್ತಿದ್ದರು, ನಬಿ(ಸ)ರಿಗೆ ಅರ್ಪಿಸುತ್ತಿದ್ದರು, ಅವನು ಬಂದು ಮತ್ತೆ ಕೇಳುತ್ತಿದ್ದನು, ಆಗ ನಬಿ(ಸ) ಅವನಿಗೆ ಕೊಡುತ್ತಿದ್ದಿರಿ. ಕೊನೆಗೆ ನಬಿ ಕರೀಮ್(ಸ) ಬಹಳ ಮೃದುವಾಗಿ ಆ ಯಾಚಕನೊಡನೆ ಹೇಳಿದರು: 'ನೀನು ಯಾಚಕನೇ ಅಥವಾ ವ್ಯಾಪಾರಿಯೇ? ನೀನು ಕೇಳಲು ಬಂದಿದ್ದೀಯಾ, ಯಾಚಕರು ಈ ರೀತಿ ಮಾಡುವುದಿಲ್ಲ, ನೀನಂತೂ ದಿರ್ಹಮ್‌ಗಳನ್ನು ಸಂಪಾದಿಸುತ್ತಿದ್ದೀಯಾ ಮತ್ತು ವ್ಯಾಪಾರ ಮಾಡುತ್ತಿದ್ದೀಯಾ.' (ತಫ್ಸೀರ್ ರೂಹುಲ್ ಮಆನಿ, ಸಂಪುಟ-15, ಭಾಗ-29-30, ಪುಟ-376, ದಾರುಲ್ ಕುತುಬ್ ಇಲ್ಮಿಯಾ)

ನಬಿ(ಸ) ನಿರಾಕರಿಸಲಿಲ್ಲ, ಆದರೆ 'ನೀನು ಮಾಡುತ್ತಿರುವ ಈ ಕೆಲಸ ಸರಿಯಲ್ಲ' ಎಂದು ಬಹಳ ವಿವೇಕಯುತವಾಗಿ ಉಪದೇಶಿಸಿದರು.

ಹಝ್ರತ್ ಅಬ್ದುಲ್ಲಾಹ್ ಬಿನ್ ಸಲಾಮ್(ರ) ವಿವರಿಸುತ್ತಾರೆ: 'ಅಲ್ಲಾಹನು ಝೈದ್ ಬಿನ್ ಸಅನಾಗೆ ಮಾರ್ಗದರ್ಶನ ನೀಡಲು ಬಯಸಿದಾಗ, ಝೈದ್ ಬಿನ್ ಸಅನಾ ಹೇಳಿದನು: 'ಪ್ರವಾದಿತ್ವದ ಎಲ್ಲ ಲಕ್ಷಣಗಳು ನನಗೆ ಮುಹಮ್ಮದ್(ಸ)ರ ಪವಿತ್ರ ಮುಖದಲ್ಲಿ ಕಾಣಿಸಿದವು, ಎರಡು ವಿಷಯಗಳನ್ನು ಹೊರತುಪಡಿಸಿ; ಅವು ನಬಿ(ಸ)ರಲ್ಲಿ ಇವೆಯೋ ಇಲ್ಲವೋ ಎಂದು ನನಗೆ ತಿಳಿದಿರಲಿಲ್ಲ. ಅವುಗಳಲ್ಲಿ ಒಂದೇನೆಂದರೆ, ನಬಿ(ಸ)ರ ಸಹನೆ ಅವರ ಕೋಪದ ಮೇಲೆ ಮೇಲುಗೈ ಸಾಧಿಸುವುದೋ? ಎರಡನೇ ವಿಷಯವೆಂದರೆ, ನಬಿ(ಸ)ರೊಂದಿಗೆ ಯಾರಾದರೂ ಎಷ್ಟೇ ಅಜ್ಞಾನದಿಂದ ವರ್ತಿಸಿದರೂ ಅವರು ಸಹನೆ ಮತ್ತು ಸಹಿಷ್ಣುತೆಯಲ್ಲಿ ಇನ್ನು ಹೆಚ್ಚಾಗಿ ತೋರಿಸುವರೋ? ನಾನು

ಎಂದಾದರೂ ಅವಕಾಶ ಸಿಕ್ಕರೆ ಈ ಲಕ್ಷಣಗಳನ್ನೂ ಪರೀಕ್ಷಿಸುವ ಹುಡುಕಾಟದಲ್ಲಿದ್ದೆ.' ಹೇಗಿದ್ದರೂ ಪರೀಕ್ಷಿಸುವುದು ಬೇರೊಂದು ವಿಷಯ, ಆದರೆ ಅವಕಾಶ ಈ ರೀತಿ ಒದಗಿಬಂತು. ಝೈದ್ ಬಿನ್ ಸಅನಾ ಹೇಳುತ್ತಾರೆ: 'ಒಂದು ದಿನ ನಬಿ(ಸ) ಮನೆಯಿಂದ ಹೊರಬಂದರು. ಅವರ ಜೊತೆ ಅಲಿ ಬಿನ್ ಅಬೀ ತಾಲಿಬ್(ರ) ಇದ್ದರು. ಈ ನಡುವೆ ಒಬ್ಬ ಸವಾರನು ಬಂದನು, ಆತ ಹಳ್ಳಿಗನಂತೆ ಕಾಣುತ್ತಿದ್ದನು. ಹೇಳಿದನು: 'ಯಾ ರಸೂಲುಲ್ಲಾಹ್, ಬನೂ ಫುಲಾನ್ ಹಳ್ಳಿಯ ಬಸ್ತಾದ ಜನರು ಮುಸಲ್ಮಾನರಾಗಿದ್ದಾರೆ. ಅವರು ಮುಸಲ್ಮಾನರಾದರೆ ಅವರಿಗೆ ವಿಪುಲವಾದ ಆಹಾರ ಸಿಗುವುದು ಎಂದು ನಾನು ಅವರಿಗೆ ಹೇಳಿದ್ದೆ. ಈಗ ಅವರು ಮಳೆಯ ಕೊರತೆಯಿಂದಾಗಿ ಕ್ಷಾಮ ಮತ್ತು ಸಂಕಷ್ಟವನ್ನು ಎದುರಿಸುತ್ತಿದ್ದಾರೆ. ಯಾ ರಸೂಲುಲ್ಲಾಹ್, ಅವರು ಹೇಗೆ ಆಹಾರದ ಆಸೆಯಲ್ಲಿ ಮುಸಲ್ಮಾನರಾಗಿದ್ದರೋ, ಅದೇ ರೀತಿ ಈಗ ಆಸೆ ಮತ್ತು ದುರಾಸೆಯಿಂದ ಇಸ್ಲಾಮಿನಿಂದ ಹೊರಬರುವರೋ ಎಂಬ ಭಯ ನನಗಿದೆ. ನೀವು ದಯೆತೋರಿ ಮತ್ತು ಸೂಕ್ತವೆನಿಸಿದರೆ ಅವರ ಕಡೆಗೆ ಏನನ್ನಾದರೂ ಕಳುಹಿಸಿ ಅವರ ಸಹಾಯ ಮತ್ತು ಸಾಂತ್ವನ ಮಾಡಿರಿ.' ನಬಿ(ಸ) ಆ ವ್ಯಕ್ತಿಯ ಕಡೆಗೆ ನೋಡಿದರು. ನಬಿ(ಸ)ರ ಜೊತೆ ಹಝ್ರತ್ ಅಲಿ(ರ) ಇದ್ದರು, ಅವರು ಹೇಳಿದರು, 'ಸಹಾಯಕ್ಕಾಗಿ ತಕ್ಷಣ ಕಳುಹಿಸಬಹುದಾದ ಯಾವುದೇ ವಸ್ತು ಈಗ ಇಲ್ಲ.' ಝೈದ್ ಬಿನ್ ಸಅನಾ ಹೇಳುತ್ತಾರೆ, 'ನಾನು ನಬಿ(ಸ)ರ ಹತ್ತಿರ ಬಂದೆ, ನಾನು ನೋಡುತ್ತಿದ್ದೆ, ನಾನು ಹತ್ತಿರವೇ ನಿಂತಿದ್ದೆ. ನಾನು ಕೇಳಿದೆ: ಹೇ ಮುಹಮ್ಮದ್(ಸ), ನೀವು ಬನೂ ಫುಲಾನ್ ತೋಟದ ಖರ್ಜೂರಗಳನ್ನು ಒಂದು ನಿಶ್ಚಿತ ಪ್ರಮಾಣ ಮತ್ತು ನಿಶ್ಚಿತ ಅವಧಿಯ ಷರತ್ತಿನ ಮೇಲೆ ಮಾರಾಟ ಮಾಡಬಲ್ಲಿರಾ?' ನಬಿ(ಸ) ಹೇಳಿದರು: 'ಹೇ ಯಹೂದಿ – ಈ ಸಅನಾ ಯಹೂದಿಯಾಗಿದ್ದನು – ನಿಶ್ಚಿತ ಪ್ರಮಾಣ ಮತ್ತು ಅವಧಿಯ ಷರತ್ತಿನ ಮೇಲೆ ಖರ್ಜೂರಗಳನ್ನು ಖಂಡಿತ ಮಾರಬಲ್ಲೆ, ಆದರೆ ಈ ಖರ್ಜೂರಗಳು ಅದೇ ತೋಟದ್ದೇ ಆಗಿರಬೇಕು ಎಂಬ ಷರತ್ತನ್ನು ಒಪ್ಪಲಾರೆ.' ನಾನು, 'ಸರಿ' ಎಂದೆ. ಅಂತೆಯೇ ನಬಿ(ಸ) ನನ್ನೊಡನೆ ವ್ಯಾಪಾರ ಮಾಡಿದರು. ನಾನು ನನ್ನ ಚೀಲ ತೆರೆದು, ಮುಂಗಡವಾಗಿ ಎಂಭತ್ತು ಮಿಸ್ಕಾಲ್ (ಒಂದು ಮಿಸ್ಕಾಲ್ ಅಂದರೆ ಸುಮಾರು ನಾಲ್ಕು ಕಾಲು ಗ್ರಾಂಗೆ ಸಮಾನ) ಚಿನ್ನವನ್ನು ನಬಿ(ಸ)ರಿಗೆ ನೀಡಿದೆ; ನಿರ್ದಿಷ್ಟ ಕಾಲಾವಧಿಯೊಳಗೆ ಇಷ್ಟು ಖರ್ಜೂರಗಳನ್ನು ನಬಿ(ಸ) ನನಗೆ ಕೊಡಬೇಕೆಂದು. ನಬಿ(ಸ) ಆ ಚಿನ್ನವನ್ನು ಸಹಾಯ ಕೇಳಲು ಬಂದಿದ್ದ ವ್ಯಕ್ತಿಗೆ ಕೊಟ್ಟು ಹೇಳಿದರು: 'ಇದನ್ನು ಆ ಸಂಕಷ್ಟಕ್ಕೀಡಾದ ಜನರಲ್ಲಿ ಸಮಾನವಾಗಿ ಹಂಚಿಬಿಡು ಮತ್ತು ಇದರ ಮೂಲಕ ಅವರಿಗೆ ಸಹಾಯ ಮಾಡು.' ಝೈದ್ ಬಿನ್ ಸಅನಾ ಹೇಳುತ್ತಾರೆ: 'ಒಂದು ಅವಧಿ, ನಿಶ್ಚಿತ ಅವಧಿಗೆ ಇನ್ನೂ ಎರಡು–ಮೂರು ದಿನ ಬಾಕಿಯಿತ್ತು, ನಾನು ನಬಿ(ಸ)ರ ಬಳಿಗೆ ಬಂದು ನಬಿ(ಸ)ರ ಕಾಲರ್ ಹಿಡಿದೆ, ಚಾದರ ಎಳೆದೆ ಮತ್ತು ಬಹಳ ಕೋಪದಿಂದ ಹೇಳಿದೆ: 'ಹೇ ಮುಹಮ್ಮದ್(ಸ), ನನ್ನ ಸಾಲವನ್ನು ತೀರಿಸುವುದಿಲ್ಲವೇ? ದೇವನಾಣೆ, ಬನೂ ಅಬ್ದುಲ್ ಮುತ್ತಲಿಬ್‌ನ ಈ ಅಭ್ಯಾಸವನ್ನು ನಾನು ಚೆನ್ನಾಗಿ ಬಲ್ಲೆ, ಅವರು ಸಾಲ ತೀರಿಸುವಲ್ಲಿ ಬಹಳ ಕೆಟ್ಟವರಾಗಿದ್ದಾರೆ. ನಿಮ್ಮ ನೆಪಗಳನ್ನು ಹೇಳುವ ಅಭ್ಯಾಸವೂ ನನಗೆ ಗೊತ್ತಿದೆ.' ವಾಸ್ತವದಲ್ಲಿ ಈ ಪ್ರಶ್ನೆಯೇ ಉದ್ಭವಿಸುತ್ತಿರಲಿಲ್ಲ. ಆದರೆ ಶತ್ರುವಾಗಿದ್ದನು, ಆ ಸಮಯದಲ್ಲಿ ಮನಸ್ಸಿನಲ್ಲಿ ಶತ್ರುತ್ವವಿತ್ತೋ ಅಥವಾ ಪರೀಕ್ಷಿಸಲು ಬಯಸಿದ್ದನೋ, ಹೇಗಿದ್ದರೂ ಅವನು ಹಾಗೆ ಮಾಡಿದನು. 'ಇದರ ಅನುಭವ ನನಗಿದೆ' ಎಂದು ಹೇಳಲಾರಂಭಿಸಿದನು. ಅವರು ಹೇಳುತ್ತಾರೆ: ಆ ಸಮಯದಲ್ಲಿ ನಾನು ಹತ್ತಿರದಲ್ಲೇ ಇದ್ದ ಉಮರ್‌ರ ಕಡೆಗೆ ನೋಡುತ್ತಿದ್ದೆ, ಕೋಪದಿಂದ ಅವರ ಕಣ್ಣುಗಳು ಚಕ್ರದಂತೆ ತಿರುಗುತ್ತಿದ್ದವು. ಹಝ್ರತ್ ಉಮರ್(ರ) ಬಹಳ ತೀಕ್ಷ್ಣವಾದ ಕೋಪದ ದೃಷ್ಟಿಯಿಂದ ನನ್ನನ್ನು ನೋಡಿ ಹೇಳಿದರು: 'ಹೇ ದೇವನ ಶತ್ರುವೇ, ದೇವನ ರಸೂಲ್(ಸ)ರೊಡನೆ ನೀನು ಹೀಗೆ ಹೇಳುತ್ತಿದ್ದೀಯಾ ಮತ್ತು ಹೀಗೆ ಅಗೌರವದಿಂದ ವರ್ತಿಸುತ್ತಿದ್ದೀಯಾ? ನಬಿ(ಸ)ರನ್ನು ಸತ್ಯದೊಂದಿಗೆ ಕಳುಹಿಸಿದ ಆ ದೇವನಾಣೆ, ನನಗೆ ಅವರ ಭಯವಿಲ್ಲದಿದ್ದರೆ ನಾನು ನನ್ನ ಖಡ್ಗದಿಂದ ನಿನ್ನ ತಲೆಯನ್ನು ಹಾರಿಸುತ್ತಿದ್ದೆ.' ಅವರು ಹೇಳುತ್ತಾರೆ: 'ಆದರೆ ರಸೂಲುಲ್ಲಾಹ್(ಸ) ಬಹಳ ಸಮಾಧಾನದಿಂದ ಉಮರ್ ಕಡೆಗೆ ನೋಡುತ್ತಿದ್ದರು ಮತ್ತು ಮುಗುಳ್ನಗುತ್ತಿದ್ದರು. ನಂತರ ನಬಿ(ಸ) ಹೇಳಿದರು: 'ಹೇ ಉಮರ್, ಈ ಕೋಪದ ಬದಲಾಗಿ ಸಾಲವನ್ನು ಚೆನ್ನಾಗಿ ತೀರಿಸಲು ನನ್ನೊಡನೆ ಮತ್ತು ಇವನೊಡನೆ ಚೆನ್ನಾಗಿ ಸಾಲ ಕೇಳುವಂತೆ ಹೇಳಬೇಕಿತ್ತು. ಹೇ ಉಮರ್, ಇವನನ್ನು ಕರೆದುಕೊಂಡು ಹೋಗು ಮತ್ತು ಇವನಿಗೆ ಇವನ ಹಕ್ಕನ್ನು ಕೊಡು, ಮಾತ್ರವಲ್ಲ ಇಪ್ಪತ್ತು ಸಾಳ್ ಖರ್ಜೂರಗಳನ್ನು ಹೆಚ್ಚಾಗಿ ಕೊಡು.' ಅದನ್ನು ಕೊಡುತ್ತಿರುವಾಗ ನಾನು ಕೇಳಿದೆ, 'ಹೇ ಉಮರ್, ಈ ಹೆಚ್ಚುವರಿ ಏತಕ್ಕಾಗಿ?' ಅವರು ಉತ್ತರಿಸಿದರು: ನಾನು ತೋರಿದ ಕಠಿಣತೆಗೆ ಬದಲಾಗಿ ನಿನಗೆ ಹೆಚ್ಚಾಗಿ ನೀಡಬೇಕೆಂದು ನಬಿ(ಸ) ನನ್ನೊಡನೆ ಆದೇಶಿಸಿದ್ದರು.' ನಾನು ಉಮರ್(ರ)ರೊಡನೆ ಕೇಳಿದೆ: 'ನಾನು ಯಾರೆಂದು ನಿಮಗೆ ತಿಳಿದಿದೆಯೇ?' ಇಲ್ಲವೆಂದು ಉಮರ್(ರ) ಹೇಳಿದರು. 'ನಾನು ಝೈದ್ ಬಿನ್ ಸಅನಾ ಆಗಿದ್ದೇನೆ ಎಂದು ನಾನು ಹೇಳಿದೆ. ಉಮರ್ ಕೇಳಿದರು, 'ಯಹೂದಿಗಳ ದೊಡ್ಡ ವಿದ್ವಾಂಸರೇ?' ನಾನು ಉತ್ತರಿಸಿದೆ, 'ಹೌದು, ಯಹೂದಿಗಳ ವಿದ್ವಾಂಸ.' ಆಗ ಉಮರ್ ಹೇಳಿದರು: 'ಇಷ್ಟೊಂದು ದೊಡ್ಡ ವಿದ್ವಾಂಸರಾಗಿದ್ದುಕೊಂಡು ರಸೂಲುಲ್ಲಾಹ್(ಸ)ರೊಡನೆ ಅಗೌರವದಿಂದ ಏಕೆ ವರ್ತಿಸಿದ್ದೀರಿ? ನಾನು ಉತ್ತರಿಸಿದೆ: 'ಹೇ ಉಮರ್, ಪ್ರವಾದಿತ್ವದ ಎಷ್ಟೆಲ್ಲ ಲಕ್ಷಣಗಳಿದ್ದವೋ, ನಾನು ಅವರನ್ನು ನೋಡಿದಾಗ ಅವೆಲ್ಲವೂ ನನಗೆ ಕಂಡವು, ಎರಡು ಲಕ್ಷಣಗಳನ್ನು ಹೊರತುಪಡಿಸಿ; ಅವುಗಳ ಬಗ್ಗೆ ನನಗೆ ತಿಳಿದಿರಲಿಲ್ಲ. ಒಂದು, ಈ ಪ್ರವಾದಿಯ ಸಹನೆಯು ಅವರ ಕೋಪದ ಮೇಲೆ ಮೇಲುಗೈ ಸಾಧಿಸುತ್ತದೆಯೇ ಎಂಬುದು. ಎರಡನೆಯದಾಗಿ, ಅವರೊಂದಿಗೆ ಎಷ್ಟು ಕಠಿಣವಾಗಿ ಮತ್ತು ಅಜ್ಞಾನದಿಂದ ವರ್ತಿಸಲಾಗುತ್ತದೆಯೋ, ಅವರು ಅಷ್ಟೇ ಹೆಚ್ಚು ಸಹನೆ ಮತ್ತು ಸಹಿಷ್ಣುತೆಯಿಂದ ವರ್ತಿಸುವರೇ ಎಂಬುದು. ಈಗ ನಾನು ಈ ಎರಡೂ ವಿಷಯಗಳನ್ನು ಪರೀಕ್ಷಿಸಿದ್ದೇನೆ. ಹೇ ಉಮರ್, ನಾನು ನಿಮ್ಮನ್ನು ಸಾಕ್ಷಿಯಾಗಿಸುತ್ತೇನೆ, ಅಲ್ಲಾಹನನ್ನು ನನ್ನ ಪರಿಪಾಲಕನಾಗಿ, ಇಸ್ಲಾಮನ್ನು ನನ್ನ ಧರ್ಮವಾಗಿ, ಮುಹಮ್ಮದ್(ಸ)ರನ್ನು ನನ್ನ ಪ್ರವಾದಿಯಾಗಿ ಒಪ್ಪಿಕೊಳ್ಳುವುದರಲ್ಲಿ ನನಗೆ ಸಂತೋಷವಿದೆ. ನಾನು ನಿಮ್ಮನ್ನು ಸಾಕ್ಷಿಯಾಗಿಸುತ್ತೇನೆ, ನಾನೊಬ್ಬ ಶ್ರೀಮಂತ ವ್ಯಕ್ತಿ ಆಗಿರುವುದರಿಂದ ನನ್ನ ಅರ್ಧ ಸಂಪತ್ತು ಮುಹಮ್ಮದ್(ಸ)ರ ಉಮ್ಮತ್‌ಗಾಗಿ ದಾನ ಮಾಡುತ್ತೇನೆ.' ಆಗ ಉಮರ್ ಹೇಳಿದರು: 'ಮುಹಮ್ಮದೀಯ ಸಮುದಾಯದ ಕೆಲವರಿಗಾಗಿ ಎಂದು ಹೇಳಿರಿ, ಏಕೆಂದರೆ ಇಡೀ ಉಮ್ಮತ್ತಿನ ಲೆಕ್ಕವೇ ಇಲ್ಲ. ಅವರಿಗೆಲ್ಲ ಸಂಪತ್ತು ಹೇಗೆ ಸಾಕಾಗಲು ಸಾಧ್ಯ.' ನಾನು ಹೇಳಿದೆ, 'ಸರಿ, ಅವರಲ್ಲಿ ಕೆಲವರಿಗಾಗಿ ದಾನವಾಗಿದೆ.' ನಂತರ ಝೈದ್ ನಬಿ(ಸ)ರ ಸನ್ನಿಧಿಗೆ ಬಂದು ಹೇಳಿದರು: 'ಅಲ್ಲಾಹನ ಹೊರತು ಬೇರೆ ಆರಾಧ್ಯರಿಲ್ಲ ಮತ್ತು ಮುಹಮ್ಮದ್(ಸ) ಅಲ್ಲಾಹನ ದಾಸ ಮತ್ತು ಅವನ ರಸೂಲ್ ಎಂದು ನಾನು ಸಾಕ್ಷ್ಯ ನುಡಿಯುತ್ತೇನೆ.' 'ನಾನು ಇಸ್ಲಾಂ ಧರ್ಮದಲ್ಲಿ ವಿಶ್ವಾಸ ಇರಿಸುತ್ತೇನೆ.' ಈ ರೀತಿ ಝೈದ್ ನಬಿ(ಸ)ರನ್ನು ಸತ್ಯಪಡಿಸಿ, ಬೈಅತ್ ಮಾಡಿದರು. ಅವರು ಹಲವು ಯುದ್ಧಗಳಲ್ಲಿ ನಬಿ(ಸ)ರೊಂದಿಗೆ ಪಾಲ್ಗೊಂಡರು, ತಬೂಕ್ ಕದನದಿಂದ ಹಿಂದಿರುಗುವಾಗ ದಾರಿಯಲ್ಲೇ ಝೈದ್ ನಿಧನರಾದರು.'

(ಮುಸ್ತದ್ರಿಕ್ ಅಲಸ್ಸಹೀಹೈನ್ ಲಿಲಹುಕಮ್, ಭಾಗ–4, ಪುಟ–328–329, ಕಿತಾಬ್ ಮಾರಿಫತುಸ್ಸಹೀಹ, ಹದೀಸ್–6665, ದಾರುಲ್ ಫಿಕರ್ ಬೈರುತ್ 2002)

ಯಹೂದಿ ವಿದ್ವಾಂಸರಾಗಿದ್ದರು, ಒಳ್ಳೆಯ ಸ್ವಭಾವದವರಾಗಿದ್ದರು, ಮತ್ತು ನಬಿ(ಸ)ರನ್ನು ನೋಡಿ, ಎಲ್ಲ ಲಕ್ಷಣಗಳನ್ನು ನೋಡಿ ಇಸ್ಲಾಂ ಸ್ವೀಕರಿಸಿದರು.

ಇದು ನಿಮ್ಮ ಉನ್ನತ ನೈತಿಕತೆಯಾಗಿದೆ. ಕೇವಲ ಸಾಲ ಪಡೆದು ಒಂದು ಸಮುದಾಯವನ್ನು ಹಸಿವಿನಿಂದ ಪಾರು ಮಾಡಿದ್ದು ಮಾತ್ರವಲ್ಲ, ತಮ್ಮ ನೈತಿಕತೆಯಿಂದ ಒಬ್ಬ ಯಹೂದಿ ವಿದ್ವಾಂಸನನ್ನು ಕೂಡ ಮುಸಲ್ಮಾನನನ್ನಾಗಿ ಮಾಡಿದರು.

**ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದಿನ್ ವ ಬಾರಿಕ್ ವ ಸಲ್ಲಿಮ್ ಇನ್ನಕ ಹಮೀದುಮ್ಮಜೀದ್.**

------------*****------------

***(ಪುಟ ಸಂಖ್ಯೆ 01ರ ತಫ್ಸೀರ್‌ನ ಉಳಿದ ಭಾಗ)***

ತಮ್ಮನ್ನು ಅಲ್ಲಾಹನ ನಿಜವಾದ ದಾಸನನ್ನಾಗಿ ರೂಪಿಸಿಕೊಳ್ಳುತ್ತಾರೋ, ಅವರು ತಮ್ಮ ಎಲ್ಲಾ ಅಗತ್ಯಗಳಿಗಾಗಿ ಅಲ್ಲಾಹನ ಮೇಲೆಯೇ ಭರವಸೆ ಇಡುತ್ತಾರೆ; ವಿಶೇಷವಾಗಿ ಆತನೇ ತಮ್ಮ 'ರಬ್' ಎಂಬ ದೃಢ ನಂಬಿಕೆ ಅವರಲ್ಲಿದ್ದರೆ. ತಮ್ಮ ಎಲ್ಲಾ ಅಗತ್ಯಗಳನ್ನು ಪೂರೈಸುವವನು ಅಲ್ಲಾಹನೇ ಎಂದು ನಂಬುವ ವ್ಯಕ್ತಿಯು ಇತರರ ಆಸ್ತಿಯ ಮೇಲೆ ಕಣ್ಣಿಡುವುದಿಲ್ಲ. ತನ್ನ ಅಗತ್ಯಗಳನ್ನು ಪೂರೈಸಿಕೊಳ್ಳಲು ಅವರ ಸಂಪತ್ತಿನಲ್ಲಿ ದ್ರೋಹ ಮಾಡುವುದಿಲ್ಲ; ಅವರ ಮೇಲೆ ಅನ್ಯಾಯವನ್ನೂ ಮಾಡುವುದಿಲ್ಲ. ಆದ್ದರಿಂದ 'ತತ್ತಕೂನ್' ಎಂಬ ಪದದ ಮತ್ತೊಂದು ಅರ್ಥವೇನೆಂದರೆ: ನೀವು ನಿಮ್ಮ ರಬ್ಬಿನ ಆರಾಧನೆಯನ್ನು ಸಂಪೂರ್ಣ ಪ್ರಾಮಾಣಿಕತೆ (ಇಖ್ಲಾಸ್) ಮತ್ತು ದೃಢ ವಿಶ್ವಾಸ (ಯಕೀನ್)ದಿಂದ ಮಾಡಿದರೆ, ನೀವು ಪರಸ್ಪರ ಅನ್ಯಾಯ ಮಾಡುವುದರಿಂದಲೂ ರಕ್ಷಿಸಲ್ಪಡುವಿರಿ; ಅದರ ಫಲವಾಗಿ ಲೋಕದಲ್ಲಿ ಶಾಂತಿಯೂ ಸ್ಥಾಪನೆಯಾಗುತ್ತದೆ. ಸಹಾಬಾ ಕಿರಾಮ್ (ರಝಿಯಲ್ಲಾಹು ಅನ್ಹುಮ್) ತಮ್ಮ ರಬ್ಬಿನ ನಿಜವಾದ ದಾಸರಾಗಿದ್ದರು. ಆದ್ದರಿಂದ ಅವರ ಆಡಳಿತದಲ್ಲಿ ಜಗತ್ತಿಗೆ ಎಷ್ಟೊಂದು ಶಾಂತಿ ಮತ್ತು ಭದ್ರತೆ ದೊರಕಿತೆಂಬುದನ್ನು ಗಮನಿಸಿ. ಅವರ ಶತ್ರುಗಳೇ ಸಹ ಅವರ ಸತ್ಸಭಾವ ಮತ್ತು ನ್ಯಾಯಯುತ ವರ್ತನೆಯನ್ನು ಮೆಚ್ಚಿಕೊಂಡಿದ್ದರು. ಇಂದಿಗೂ ಹಝ್ರತ್ ಅಬೂ ಬಕರ್ (ರ.ಅ.) ಮತ್ತು ಹಝ್ರತ್ ಉಮರ್ (ರ.ಅ.) ಅವರ ಆಡಳಿತದ ಸುವರ್ಣ ನೆನಪು ಜನರ ಹೃದಯಗಳಲ್ಲಿ ಜೀವಂತವಾಗಿದೆ. ಹಝ್ರತ್ ಉಸ್ಮಾನ್ (ರ.ಅ.) ಮತ್ತು ಹಝ್ರತ್ ಅಲಿ (ರ.ಅ.) ಅವರ ಆಡಳಿತವೂ ಇದೇ ರೀತಿಯದ್ದಾಗಿತ್ತು. ಆದರೆ ಅವರ ಕಾಲದ ಕುರಿತು ಭಿನ್ನಾಭಿಪ್ರಾಯಗಳು ಉಂಟಾಗಿರುವುದರಿಂದ ಇಲ್ಲಿ ನಾನು ಅವರ ಬಗ್ಗೆ ಹೆಚ್ಚಿನ ಉಲ್ಲೇಖ ಮಾಡಿಲ್ಲ."

**(ತಫ್ಸೀರ್ ಕಬೀರ್, ಸಂಪುಟ 1, ಪುಟ 302, ಆನ್‌ಲೈನ್ ಆವೃತ್ತಿ)**

**ಪ್ರೀತಿ ಎಲ್ಲರಲ್ಲೂ, ದ್ವೇಶವಿಲ್ಲ ಯಾರಲ್ಲೂ**

**Love for All, Hatred for None**

## ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಪವಿತ್ರ ಜೀವನ

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ[ರ]

### ಇಸ್ಲಾಮಿನ ಸಂದೇಶ

ಅವಿಶ್ವಾಸಿಗಳ ವಿರೋಧ ಹೆಚ್ಚಾಗುತ್ತಾ ಇದ್ದರೂ ಹಝ್ರತ್ ಪೈಗಂಬರ್[ಸ] ಮತ್ತು ಅವರ ಶಿಷ್ಯರು ಇಸ್ಲಾಮಿನ ಸಂದೇಶವನ್ನು ನಿರ್ಭೀತಿಯಿಂದ ತಲಪಿಸುತ್ತಿದ್ದರು. ಅವರು ಹೀಗೆ ಹೇಳುತ್ತಿದ್ದರು:

"ಈ ಪ್ರಪಂಚದ ಸೃಷ್ಟಿಕರ್ತನು ಒಬ್ಬನೇ. ಅವನ ಹೊರತು ಬೇರೆ ಆರಾಧ್ಯನಿಲ್ಲ. ಇದರ ಮೊದಲು ಬಂದ ಪ್ರವಾದಿಗಳೆಲ್ಲರೂ ಅವನ ಏಕತೆಯನ್ನು ಪ್ರಕಟಿಸುತ್ತಾ ಇದ್ದರು. ಅವರು ತಮ್ಮ ಜನಾಂಗದ ಜನರನ್ನು ಇದೇ ತತ್ವದ ಕಡೆಗೆ ಆಹ್ವಾನಿಸುತ್ತಿದ್ದರು. ಓ ಜನರೇ, ನೀವು ಏಕನಾದ ಅಲ್ಲಾಹನನ್ನು ಮಾತ್ರ ಆರಾಧಿಸಿರಿ. ಈ ಕಲ್ಲಿನ ವಿಗ್ರಹಗಳನ್ನು ಆರಾಧಿಸುವುದನ್ನು ಬಿಟ್ಟು ಬಿಡಿರಿ. ಅವುಗಳು ವ್ಯರ್ಥವಾಗಿವೆ. ಅವುಗಳಿಗೆ ಯಾವುದೇ ಶಕ್ತಿ ಇಲ್ಲ. ಓ ಮಕ್ಕದ ನಿವಾಸಿಗಳೇ, ವಿಗ್ರಹಗಳ ಮುಂದೆ ನೀವಿರಿಸಿದ ನೈವೇದ್ಯಗಳ ಮತ್ತು ಅರ್ಪಿತ ವಸ್ತುಗಳ ಮೇಲೆ ನೊಣಗಳ ಹಿಂಡು ಬಂದು ಕುಳಿತರೂ ಆ ವಿಗ್ರಹಗಳು ಆ ನೊಣಗಳನ್ನು ಹೊಡೆದೋಡಿಸಲು ಕೂಡ ಶಕ್ತವಾಗಿರುವುದಿಲ್ಲ. ಯಾರಾದರೂ ಆಕ್ರಮಿಸಿದರೆ ವಿಗ್ರಹಗಳು ತಮ್ಮ ಸಂರಕ್ಷಣೆ ಮಾಡಲಾರವು. ಯಾರಾದರೂ ಅವುಗಳನ್ನು ಪ್ರಶ್ನಿಸಿದರೆ ಅವು ಪ್ರಶ್ನೆಗೆ ಉತ್ತರ ನೀಡಲಾರವು. ಯಾರಾದರೂ ಅವುಗಳಿಂದ ಸಹಾಯ ಯಾಚಿಸಿದರೆ ಅವುಗಳು ಯಾವ ಸಹಾಯವನ್ನೂ ನೀಡಲಾರವು. ಆದರೆ ಏಕದೇವನು ಬೇಡುವವರ ಅವಶ್ಯಕತೆಗಳನ್ನು ನೆರವೇರಿಸುತ್ತಾನೆ. ಪ್ರಶ್ನಿಸುವವನಿಗೆ ಉತ್ತರ ಕೊಡುತ್ತಾನೆ. ಸಹಾಯ ಯಾಚಿಸುವವನಿಗೆ ಸಹಾಯ ನೀಡುತ್ತಾನೆ. ಅವನು ತನ್ನ ಶತ್ರುಗಳನ್ನು ನೈಚ್ಯಾವಸ್ಥೆಗೆ ತಳ್ಳುತ್ತಾನೆ. ಅವನು ತನ್ನ ಭಕ್ತ ದಾಸರಿಗೆ ಅತ್ಯುನ್ನತ ಅಭಿವೃದ್ಧಿಯನ್ನು ನೀಡುತ್ತಾನೆ. ಅವನಿಂದ ಪ್ರಕಾಶ ಬರುತ್ತದೆ. ಅವನನ್ನು ಆರಾಧಿಸುವವರ ಹೃದಯಗಳನ್ನು ಅದು ಪ್ರಕಾಶಗೊಳಿಸುತ್ತದೆ. ಆದುದರಿಂದ ನೀವು ಇಂತಹ ದೇವನನ್ನು ಬಿಟ್ಟು ನಿರ್ಜೀವ ವಿಗ್ರಹಗಳ ಮುಂದೆ ಏಕೆ ತಲೆಬಾಗುತ್ತಿರುವಿರಿ? ನೀವು ನಿಮ್ಮ ಆಯುಷ್ಯವನ್ನು ಏಕೆ ವ್ಯರ್ಥಗೊಳಿಸುತ್ತಿರುವಿರಿ. ನೀವು ದೇವನ ಏಕತ್ವವನ್ನು ನಂಬದಿರುವುದರಿಂದ ನಿಮ್ಮ ಯೋಚನೆಗಳು ಕೊಳಕಾಗಿ ನಿಮ್ಮ ಹೃದಯಗಳು ಅಂಧಕಾರಮಯವಾಗಿರುವುದನ್ನು ನೀವು ನೋಡುವುದಿಲ್ಲವೇ? ನೀವು ವಿವಿಧ ಊಹಾಪೋಹಗಳ ಉಪದೇಶಗಳನ್ನು ಅವಲಂಬಿಸಿರುವಿರಿ. ಯಾವುದು ನ್ಯಾಯಬದ್ಧ? ಯಾವುದು ನಿಷಿದ್ಧ? ಎಂಬುದರ ವ್ಯತ್ಯಾಸವನ್ನು ನೀವು ಪರಿಗಣಿಸುವುದಿಲ್ಲ. ಒಳಿತು ಕೆಡುಕುಗಳ ವ್ಯತ್ಯಾಸವನ್ನು ನೀವು ಗುರುತಿಸಲಾರಿರಿ, ನೀವು ನಿಮ್ಮ ತಾಯಂದಿರಿಗೂ ಅವಮರ್ಯಾದೆ ಮಾಡುತ್ತಿರುವಿರಿ. ನೀವು ನಿಮ್ಮ ಸಹೋದರಿಯರಿಗೂ ಹೆಮ್ಮಕ್ಕಳಿಗೂ ಅನ್ಯಾಯ ಮಾಡುತ್ತಿರುವಿರಿ. ನೀವು ಅವರ ಹಕ್ಕುಗಳನ್ನು ನೀಡುತ್ತಾ ಇಲ್ಲ. ನಿಮ್ಮ ಪತ್ನಿಯರೊಂದಿಗೆ ನಿಮ್ಮ ನಡವಳಿಕೆ ಚೆನ್ನಾಗಿಲ್ಲ. ನೀವು ಅನಾಥರ ಹಕ್ಕುಗಳನ್ನು ಅಪಹರಿಸುತ್ತಿರುವಿರಿ. ನೀವು ವಿಧವೆಯರೊಂದಿಗೆ ಕೆಟ್ಟದಾಗಿ ವರ್ತಿಸುತ್ತಿರುವಿರಿ. ನೀವು ಬಡವರೊಂದಿಗೆ ಮತ್ತು ಬಲಹೀನರೊಂದಿಗೆ ಅನ್ಯಾಯದಿಂದ ವರ್ತಿಸುತ್ತಿರುವಿರಿ. ನೀವು ಬೇರೆಯವರ ಹಕ್ಕುಗಳನ್ನು ಅಪಹರಿಸಿ ನಿಮ್ಮ ದೊಡ್ಡಸ್ಥಿಕೆಯನ್ನು ಸ್ಥಾಪಿಸಿಡಲು ಇಚ್ಛಿಸುತ್ತಿರುವಿರಿ. ಸುಳ್ಳು ಮತ್ತು ಮೋಸದ ಬಗ್ಗೆ ನಿಮಗೆ ಯಾವುದೇ ನಾಚಿಕೆ ಇಲ್ಲ. ಕಳ್ಳತನ ಮತ್ತು ದರೋಡೆಯ ಬಗ್ಗೆ ನಿಮಗೆ ಯಾವುದೇ ದ್ವೇಷವಿಲ್ಲ. ಜುಗಾರಿ ಆಟ ಮತ್ತು ಮದ್ಯಪಾನ ನಿಮ್ಮ ಹವ್ಯಾಸಗಳಾಗಿವೆ. ವಿದ್ಯಾರ್ಜನೆ ಮತ್ತು ಸಾಮಾಜಿಕ ಸೇವೆಯ ಬಗ್ಗೆ ನಿಮಗೆ ಕಾಳಜಿ ಇಲ್ಲ. ಏಕದೇವನ ಬಗ್ಗೆ ನೀವು ಎಲ್ಲಿಯತನಕ ನಿರ್ಲಕ್ಷ್ಯದಿಂದಿರಬಲ್ಲಿರಿ? ನೀವು ಬನ್ನಿರಿ, ನಿಮ್ಮನ್ನು ಸುಧಾರಣೆ ಮಾಡಿಕೊಳ್ಳಿರಿ. ದೌರ್ಜನ್ಯವನ್ನು ಬಿಟ್ಟುಬಿಡಿರಿ. ಪ್ರತಿಯೊಬ್ಬ ಹಕ್ಕುದಾರನಿಗೆ ಅವನ ಹಕ್ಕುಗಳನ್ನು ನೀಡಿರಿ. ನಿಮಗೆ ಅಲ್ಲಾಹನು ಧನವನ್ನು ನೀಡಿದ್ದರೆ ದೇಶ ಮತ್ತು ಸಮಾಜದ ಸೇವೆಗಾಗಿ, ಬಡವರ ಮತ್ತು ಬಲಹೀನರ ಅಭಿವೃದ್ಧಿಗಾಗಿ ವಿನಿಯೋಗಿಸಿರಿ. ಮಹಿಳೆಯರನ್ನು ಗೌರವಿಸಿರಿ, ಅವರ ಹಕ್ಕುಗಳನ್ನು ಕೊಡಿರಿ. ಅನಾಥರನ್ನು ಅಲ್ಲಾಹನ ವಿಶ್ವಸ್ತನಿಧಿಗಳೆಂದು ಪರಿಗಣಿಸಿರಿ. ಅವರ ಸಂರಕ್ಷಣೆಯು ಉನ್ನತ ಸ್ಥಾನ ಪಡೆದ ಒಳಿತೆಂದು ಮನವರಿಕೆ ಮಾಡಿಕೊಳ್ಳಿರಿ. ನೀವು ವಿಧವೆಯರಿಗೆ ಸಹಾಯ ಮಾಡುವವರಾಗಿರಿ. ನೀವು ಒಳಿತನ್ನೂ ಭಯಭಕ್ತಿಯನ್ನೂ ಸ್ಥಾಪಿಸಿರಿ. ನೀವು ನ್ಯಾಯ ಮತ್ತು ಸಮತೆಯನ್ನು ಮಾತ್ರವಲ್ಲದೆ ದಯೆ ಮತ್ತು ಪರೋಪಕಾರವನ್ನು ನಿಮ್ಮ ಗುಣಗಳನ್ನಾಗಿ ಮಾಡಿಕೊಳ್ಳಿರಿ. ಈ ಲೋಕದಲ್ಲಿ ನೀವು ಜನಿಸಿದುದು ವ್ಯರ್ಥವಾಗಬಾರದು. ನೀವು ಒಳ್ಳೆಯ ಗುರುತುಗಳನ್ನು ನಿಮ್ಮ ಹಿಂದೆ ಬಿಟ್ಟುಹೋಗಿರಿ. ನೀವು ಸ್ಥಿರವಾಗಿ ನೆಲೆನಿಲ್ಲುವ ಒಳಿತಿನ ಬೀಜವನ್ನು ಬಿತ್ತಿರಿ. ನಿಮ್ಮ ಹಕ್ಕುಗಳನ್ನು ಪಡೆದುಕೊಳ್ಳುವುದರಲ್ಲಿ ಅಲ್ಲ, ಬಲಿದಾನ ಮತ್ತು ತ್ಯಾಗ ಮಾಡುವುದರಲ್ಲಿ ನಿಜವಾದ ಗೌರವವಿದೆ. ಆದುದರಿಂದ ನೀವು ಬಲಿದಾನ ಮಾಡಿರಿ. ನೀವು ಅಲ್ಲಾಹನಿಗೆ ಸಮೀಪವಾಗಿರಿ. ನೀವು ತ್ಯಾಗ ಮಾಡುವುದರಲ್ಲಿ ಅಲ್ಲಾಹನ ಇತರ ದಾಸರೊಂದಿಗೆ ಸ್ಪರ್ಧಿಸಿರಿ. ಅಲ್ಲಾಹನ ಸಾನ್ನಿಧ್ಯದಲ್ಲಿ ನಿಮ್ಮ ಹಕ್ಕುಗಳು ಕಾಪಾಡಲ್ಪಡಲಿ. ನಾವು ಶಕ್ತಿಹೀನರೆಂಬುದರಲ್ಲಿ ಸಂಶಯವಿಲ್ಲ. ಆದರೆ ನಮ್ಮ ಶಕ್ತಿಹೀನತೆಯನ್ನು ನೋಡಬೇಡಿರಿ. ಸತ್ಯ ಜಯಿಸುವುದೆಂಬ ತೀರ್ಮಾನ ಆಕಾಶದಲ್ಲಿ ಆಗಿಬಿಟ್ಟಿದೆ. ಈಗ ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಮೂಲಕ ನ್ಯಾಯದ ತಕ್ಕಡಿ ಸ್ಥಾಪಿಸಲ್ಪಡುವುದು. ನ್ಯಾಯ ಮತ್ತು ದಯೆಯ ಆಧಿಪತ್ಯ ಸ್ಥಾಪಿತವಾಗುವುದು. ಈ ಆಧಿಪತ್ಯದಲ್ಲಿ ಯಾರಿಗೂ ಅನ್ಯಾಯವಾಗಲಾರದು. ಧರ್ಮದ ವಿಷಯದಲ್ಲಿ ಯಾವುದೇ ಹಸ್ತಕ್ಷೇಪವಾಗಲಾರದು. ಮಹಿಳೆಯರಿಗೆ ಮತ್ತು ಗುಲಾಮರಿಗೆ ಆಗುತ್ತಿದ್ದ ಅನ್ಯಾಯ ಕೊನೆಗೊಳಿಸಲ್ಪಡುವುದು. ಶೈತಾನನ ಆಧಿಪತ್ಯಕ್ಕೆ ಪ್ರತಿಯಾಗಿ ಏಕದೇವನ ಆಧಿಪತ್ಯ ಸ್ಥಾಪಿತವಾಗುವುದು."

### ಅಬೂತಾಲಿಬರೊಂದಿಗೆ ಮಕ್ಕ ನಗರದ ಅವಿಶ್ವಾಸಿಗಳ ದೂರು ಮತ್ತು ಹಝ್ರತ್ ಪೈಗಂಬರರ[ಸ] ಅಚಂಚಲ ಮನೋಭಾವ

ಮೇಲೆ ವಿವರಿಸಲಾದ ಉಪದೇಶಗಳನ್ನು ಮಕ್ಕ ನಗರದ ನಿವಾಸಿಗಳಿಗೆ ಪದೇ ಪದೇ ನೀಡಿದಾಗ ಸಜ್ಜನರ ಹೃದಯಗಳು ಇಸ್ಲಾಮ್ ಧರ್ಮದ ಕಡೆಗೆ ಆಕರ್ಷಿಸಲ್ಪಡಲು ತೊಡಗಿದವು. ಆಗ ಮಕ್ಕದ ಮುಂದಾಳುಗಳು ಗಾಬರಿಗೊಂಡು ಹಝ್ರತ್ ಪೈಗಂಬರರ[ಸ] ಚಿಕ್ಕಪ್ಪ ಅಬೂತಾಲಿಬರ ಬಳಿಗೆ ಬಂದು ಹೀಗೆ ಹೇಳಿದರು: "ನೀವು ನಮ್ಮ ಹಿರಿಯ ನಾಯಕರಾಗಿರುವಿರಿ. ನಿಮ್ಮನ್ನು ಪರಿಗಣಿಸಿ ನಿಮ್ಮ ಸಹೋದರ ಪುತ್ರ ಮುಹಮ್ಮದ್‌ನಿಗೆ ನಾವು ಏನೂ ಹೇಳಿಲ್ಲ. ಈಗ ನಿಮ್ಮೊಂದಿಗೆ ಕೊನೆಯ ತೀರ್ಮಾನ ಮಾಡುವ ಸಮಯ ಬಂದಿದೆ. ನೀವು ಮುಹಮ್ಮದ್‌ನಿಗೆ ಉಪದೇಶಿಸಿರಿ. ಅವನು ನಮ್ಮಿಂದ ಏನನ್ನು ಬಯಸುತ್ತಾನೆಂದು ಕೇಳಿರಿ. ಅವನು ನಮ್ಮಿಂದ ಗೌರವಿಸಲ್ಪಡಲು ಬಯಸುವುದಾದರೆ ನಾವು ಅವನನ್ನು ನಮ್ಮ ಅಧಿನಾಯಕನನ್ನಾಗಿ ಮಾಡಲು ಸಿದ್ಧರಾಗುವೆವು. ಅವನು ಐಶ್ವರ್ಯವನ್ನು ಬಯಸುವುದಾದರೆ ನಮ್ಮಲ್ಲಿ ಪ್ರತಿಯೊಬ್ಬನೂ ತನ್ನ ಐಶ್ವರ್ಯದ ಒಂದು ಪಾಲನ್ನು ಅವನಿಗೆ ಕೊಡಲು ಸಿದ್ಧನಾಗಿರುತ್ತಾನೆ. ಅವನು ವಿವಾಹವಾಗಲು ಬಯಸುವುದಾದರೆ ಮಕ್ಕದಲ್ಲಿ ಅವನು ಬಯಸುವ ಯಾವುದೇ ಹುಡುಗಿಯನ್ನು ಅವನು ಹೆಸರಿಸಲಿ. ನಾವು ಅವಳೊಂದಿಗೆ ಅವನ ವಿವಾಹ ನೆರವೇರಿಸಿ ಕೊಡುವೆವು. ನಾವು ಅವನಿಂದ ಅದಕ್ಕೆ ಪ್ರತಿಯಾಗಿ ಏನನ್ನೂ ಬಯಸುವುದಿಲ್ಲ. ಅವನನ್ನು ಯಾವುದರಿಂದಲೂ ನಾವು ತಡೆಯಲಾರೆವು. ಅವನು ನಮ್ಮ ವಿಗ್ರಹಗಳನ್ನು ದೂಷಿಸುವುದನ್ನು ಮಾತ್ರ ಬಿಟ್ಟುಬಿಡಲಿ. ದೇವನು ಏಕನೆಂದು ಬೇಕಾದರೆ ಅವನು ಹೇಳಲಿ. ಆದರೆ ನಮ್ಮ ವಿಗ್ರಹಗಳು ಕೆಟ್ಟದೆಂದು ಹೇಳಬಾರದು. ಇಷ್ಟು ಮಾತನ್ನು ಒಪ್ಪಿದರೆ ನಾವು ಅವನೊಂದಿಗೆ ರಾಜಿ ಮಾಡಿಕೊಳ್ಳುವೆವು. ನೀವು ಅವನಿಗೆ ಉಪದೇಶಿಸಿ ನಮ್ಮ ಪ್ರಸ್ತಾಪವನ್ನು ಅಂಗೀಕರಿಸುವಂತೆ ಮಾಡಿರಿ. ಅವನು ನಮ್ಮ ಪ್ರಸ್ತಾಪವನ್ನು ಅಂಗೀಕರಿಸದಿದ್ದರೆ ಎರಡು ಸಂಗತಿಗಳಲ್ಲಿ ಒಂದು ಆಗಿಯೇ ತೀರುವುದು. ನೀವು ನಿಮ್ಮ ಸಹೋದರ ಪುತ್ರನನ್ನು ಬಿಟ್ಟು ಬಿಡಬೇಕಾಗುವುದು ಅಥವಾ ನಿಮ್ಮ ಗೋತ್ರದವರು ನಿಮ್ಮ ನಾಯಕತ್ವವನ್ನು ನಿರಾಕರಿಸಿ ನಿಮ್ಮನ್ನು ಬಿಟ್ಟು ಬಿಡುವರು."

ಮಕ್ಕದ ಮುಂದಾಳುಗಳ ಮಾತು ಅಬೂತಾಲಿಬರ ಮನಸ್ಸಿಗೆ ಬಹಳ ನಾಟಿತು. ಅರಬ್ ದೇಶದ ನಿವಾಸಿಗಳಲ್ಲಿ ಹಣಕಾಸು ಹೆಚ್ಚೇನೂ ಇರಲಿಲ್ಲ. ಆದರೆ ಅವರಲ್ಲಿ ನಾಯಕತ್ವದ ಬಗ್ಗೆ ಅಭಿಮಾನವಿತ್ತು. ನಾಯಕರು ತಮ್ಮ ಗೋತ್ರಗಳಿಗಾಗಿ ಜೀವಿಸುತ್ತಿದ್ದರು. ಗೋತ್ರಗಳು ತಮ್ಮ ನಾಯಕರಿಗಾಗಿ ಜೀವಿಸುತ್ತಿದ್ದುವು. ಅಬೂತಾಲಿಬರು ಮುಂದಾಳುಗಳ ಮಾತಿನಿಂದ ಸಂತಾಪಗೊಂಡರು. ಅವರು ಹಝ್ರತ್ ಪೈಗಂಬರರನ್ನು[ಸ] ಕರೆದು ಹೇಳಿದರು:

"ಓ ನನ್ನ ಸಹೋದರಪುತ್ರಾ, ನನ್ನ ಗೋತ್ರದವರು ನನ್ನ ಬಳಿಗೆ ಬಂದು ಹೀಗೆಂದಿರುವರು: 'ನಾವು ನೀಡಿದ ವಿವಿಧ ಪ್ರಸ್ತಾಪಗಳಲ್ಲಿ ಯಾವುದನ್ನೂ ನಿಮ್ಮ ಸಹೋದರಪುತ್ರ ಅಂಗೀಕರಿಸುವುದಿಲ್ಲವಾದರೆ ಮತ್ತು ಅವನು ತನ್ನ ನಡವಳಿಕೆಯನ್ನು ನಾವು ಹೇಳಿದಂತೆ ಬದಲಾಯಿಸುವುದಿಲ್ಲವಾದರೆ ನೀವು ಅವನನ್ನು ಬಿಟ್ಟು ಬಿಡಬೇಕಾಗುವುದು ನಿಮ್ಮ ಕರ್ತವ್ಯವಾಗಿದೆ. ನೀವು ಅವನನ್ನು ಬಿಡುವುದಿಲ್ಲವಾದರೆ ನಾವು ನಿಮ್ಮ ನಾಯಕತ್ವವನ್ನು ಅಲ್ಲಗಳೆದು ನಿಮ್ಮನ್ನು ಬಿಟ್ಟು ಬಿಡುವೆವು.'"

ಅಬೂತಾಲಿಬರು ಮೇಲಿನ ಮಾತುಗಳನ್ನು ಹೇಳುತ್ತಿದ್ದಾಗ ಅವರ ಕಣ್ಣುಗಳು ಅಶ್ರುಭರಿತವಾದುವು. ಅದನ್ನು ಕಂಡು ಹಝ್ರತ್ ಪೈಗಂಬರರ[ಸ] ಕಣ್ಣುಗಳೂ ಅಶ್ರುಭರಿತವಾದುವು. ಅವರು ಹೀಗೆಂದರು:

"ಓ ನನ್ನ ಚಿಕ್ಕಪ್ಪಾ, ನೀವು ನಿಮ್ಮ ಗೋತ್ರದವರನ್ನು ಬಿಟ್ಟು ನನಗೆ ಸಹಾಯ ಮಾಡಬೇಕೆಂದು ನಾನು ಹೇಳುವುದಿಲ್ಲ. ನೀವು ಯಾವುದೇ ಶಂಕೆಯಿಲ್ಲದೆ ನನ್ನನ್ನು ಬಿಟ್ಟು ಬಿಡಿರಿ ಮತ್ತು ನಿಮ್ಮ ಗೋತ್ರದವರೊಂದಿಗೆ ಸೇರಿಕೊಳ್ಳಿರಿ. ಆದರೆ ನಾನು ಏಕನಾದ ಮತ್ತು ಯಾರೂ ಸರಿಸಮಾನರಿಲ್ಲದ ಅಲ್ಲಾಹನ ನಾಮದಲ್ಲಿ ಪ್ರಮಾಣ ಮಾಡಿ ಹೇಳುತ್ತೇನೆ: ನನ್ನ ಬಲಭಾಗದಲ್ಲಿ ಸೂರ್ಯನನ್ನೂ ಎಡಭಾಗದಲ್ಲಿ ಚಂದ್ರನನ್ನೂ ತಂದು ನಿಲ್ಲಿಸಿದರೂ ನಾನು ಅಲ್ಲಾಹನ ಏಕತ್ವದ ಉಪದೇಶವನ್ನು ನೀಡುವುದನ್ನು ನಿಲ್ಲಿಸಲಾರೆನು. ನಾನು ಮೃತಪಡುವ ತನಕ ನನ್ನ ಕೆಲಸವನ್ನು ಮುಂದುವರಿಸುತ್ತಾ ಹೋಗುವೆನು. ನಿಮಗೆ ತಕ್ಕುದಾದ ನಿರ್ಧಾರವನ್ನು ನೀವೇ ಸ್ವತಃ ಯೋಚಿಸಿರಿ."

ಸತ್ಯವಿಶ್ವಾಸದಿಂದ ಕೂಡಿದ ಮತ್ತು ನಿಷ್ಠೆಯಿಂದ ತುಂಬಿದ ಈ ಉತ್ತರ ಅಬೂತಾಲಿಬರ ಕಣ್ಣನ್ನು ತೆರೆಯಲು ಪರ್ಯಾಪ್ತವಾಗಿತ್ತು. ಅವರು ಹೀಗೆ ಮನವರಿಕೆ ಮಾಡಿಕೊಂಡರು: ನನಗೆ ಸತ್ಯವಿಶ್ವಾಸವನ್ನು ಅಂಗೀಕರಿಸುವ ಭಾಗ್ಯ ಲಭಿಸಿಲ್ಲ. ಆದರೆ ಸತ್ಯವಿಶ್ವಾಸದ ದೃಶ್ಯಗಳನ್ನು ಕಾಣುವ ಭಾಗ್ಯ ಲಭಿಸಿದುದು ಎಲ್ಲಾ ಐಶ್ವರ್ಯಗಳಿಗಿಂತಲೂ ದೊಡ್ಡ ಸಂಪತ್ತಾಗಿದೆ.

ಅವರು ಹೀಗೆ ಹೇಳಿದರು: "ಓ ನನ್ನ ಸಹೋದರಪುತ್ರಾ, ನೀನು ಹೋಗು ಮತ್ತು ನಿನ್ನ ಕರ್ತವ್ಯವನ್ನು ನಿರ್ವಹಿಸು. ನನ್ನ ಗೋತ್ರದವರು ನನ್ನನ್ನು ಬಿಟ್ಟು ಬಿಡುವುದಾದರೆ ಬಿಟ್ಟು ಬಿಡಲಿ. ನಾನು ನಿನ್ನನ್ನು ಬಿಡಲಾರೆ."[14]

(ಮುಂದುವರಿಯುವುದು)

## ಹಝ್ರತ್ ಮಸೀಹ್ ಮೌಊದರ(ಅಲೈಹಿಸ್ಸಲಾಮ್) ಪವಿತ್ರ ಜೀವನ

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ)

(22) **ಬಿಸ್ಮಿಲ್ಲಾಹಿರ್ರಹ್ಮಾನ್ ನಿರ್ರಹೀಮ್:** ನನ್ನ ತಾಯಿಯವರು ನನ್ನೊಡನೆ ಹೇಳಿದರು, ಒಮ್ಮೆ ಹಝ್ರತ್ ಮಸೀಹ್ ಮೌಊದ್(ಅ) ಸಿಯಾಲ್‌ಕೋಟ್‌ನಲ್ಲಿರುವ ಮೀರ್ ಹಾಮಿದ್ ಶಾ ಸಾಹಿಬ್ ಅವರ ಮನೆಯಲ್ಲಿದ್ದಾಗ ಮತ್ತು ಊಟ ಮಾಡುತ್ತಿದ್ದಾಗ, ಅವರ ಬಾಯಿಂದ ಒಂದು ವಾಕ್ಯ ಹೊರಬರುವುದನ್ನು ನಾನು ಕೇಳಿದೆ ಎಂದು ಹಝ್ರತ್ ಮಸೀಹ್ ಸಾಹಿಬ್ ನನಗೆ ಹೇಳಿದರು. ಅವರು ದೈವವಾಣಿ ಪಡೆದಿದ್ದಾರೆ ಎಂದು ನಾನು ಭಾವಿಸಿದೆ. ನಂತರ ಅವರು ಎಚ್ಚರವಾದಾಗ ನಾನು ನಿಮಗೆ ಈ ದೈವವಾಣಿ ಲಭಿಸಿದೆ ಎಂದು ಹೇಳಿದೆ? ಅದಕ್ಕೆ ಅವರು ಹೌದು, ನಿಮಗೆ ಹೇಗೆ ಗೊತ್ತು? ಎಂದು ಕೇಳಿದರು, ಅದಕ್ಕೆ ನಾನು ಒಂದು ಧ್ವನಿಯನ್ನು ಕೇಳಿದೆ ಎಂದು ಹೇಳಿದೆ. ದೈವವಾಣಿಯ ಸಮಯದಲ್ಲಿ ನಿಮ್ಮ ಸ್ಥಿತಿ ಹೇಗಿತ್ತು ಎಂದು ವಿನೀತನು ಕೇಳಿದಾಗ ನನ್ನ ತಾಯಿ ನನಗೆ ಹೇಳಿದರು: ಅವರ ಮುಖ ಕೆಂಪಾಗುತ್ತದೆ ಮತ್ತು ಅವರ ಹಣೆಯ ಮೇಲೆ ಬೆವರು ರೂಪುಗೊಳ್ಳುತ್ತದೆ ಎಂದು ಹೇಳಿದರು. ನಾನು ಹೇಳುವುದೇನೆಂದರೆ: ಒಮ್ಮೆ ಹಝ್ರತ್ ಮಸೀಹ್ ಮೌಊದ್(ಅ) ತಮ್ಮ ಮನೆಯ ಸಣ್ಣ ಅಂಗಳದಲ್ಲಿ (ಅಂದರೆ, ಪ್ರಸ್ತುತ ತಾಯಿಯವರು ಇರುವ ಅಂಗಳ) ಮರದ ಸಿಂಹಾಸನದ ಮೇಲೆ ಕುಳಿತಿದ್ದರು. ಅದು ಬಹುಶಃ ಮುಂಜಾನೆಯ ಅಥವಾ ಸಂಜೆಯ ಸಮಯವಾಗಿರಬಹುದು. ಅವರಿಗೆ ಸ್ವಲ್ಪ ನಿದ್ದೆ ಬಂದಂತೆ ಅನಿಸಿತು, ಆದ್ದರಿಂದ ಅವರು ಮಲಗಿದರು. ನಂತರ ಅವರ ತುಟಿಗಳಿಂದ ನಮಗೆ ಅರ್ಥವಾಗದ ಕೆಲವು ಶಬ್ದಗಳು ಕೇಳಿಬಂದವು. ನಂತರ ಅವರು ಎಚ್ಚರಗೊಂಡು, **"ಆ ಸಮಯದಲ್ಲಿ ನನಗೆ ಈ ದೈವವಾಣಿ ಲಭಿಸಿದೆಯೇ?"** ಎಂದು ಕೇಳಿದರು, ಆದರೆ ನನಗೆ ಆ ದೈವವಾಣಿ ಏನಾಗಿತ್ತು ಎಂದು ನೆನಪಿಲ್ಲ. ಅವರಿಗೆ ದೈವವಾಣಿ ಲಭಿಸಿದಾಗ, ಅವರು ತಕ್ಷಣ ನಿದ್ರೆಯಿಂದ ಎಚ್ಚರಗೊಂಡು ಅದನ್ನು ಬರೆಯುತ್ತಿದ್ದರು ಎಂದು ತಾಯಿಯವರು ನನಗೆ ಹೇಳಿದರು. ಆರಂಭದಲ್ಲಿ, ಅವರು ತಮ್ಮ ಸಾಮಾನ್ಯ ಪುಸ್ತಕಗಳಲ್ಲಿ ಒಂದರಲ್ಲಿ ಟಿಪ್ಪಣಿಗಳನ್ನು ಬರೆಯುತ್ತಿದ್ದರು. ನಂತರ ಅವರು ದೊಡ್ಡ ಗಾತ್ರದ ಪ್ರತಿಯನ್ನು ಮತ್ತು ನಂತರ ಸಣ್ಣ ಆದರೆ ದಪ್ಪವಾದ ನೋಟ್‌ಬುಕ್ ಅನ್ನು ಮಾಡಿದರು. ನಾನು, **"ಈಗ ಆ ನೋಟ್‌ಬುಕ್ ಎಲ್ಲಿದೆ?"** ಎಂದು ಕೇಳಿದೆನು. ಅದಕ್ಕೆ ನನ್ನ ತಾಯಿ ಹೇಳಿದರು, **"**ನಿಮ್ಮ ಸಹೋದರ (ಸಹೋದರ ಎಂದರೆ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್(ಅತಬಿಅ)) ಅವರ ಬಳಿ ಇದೆ ಮತ್ತು ವಿನೀತನ ಮಾವ ಡಾ. ಮೀರ್ ಮುಹಮ್ಮದ್ ಇಸ್ಮಾಯಿಲ್ ಕೂಡ ನಾನು ಒಮ್ಮೆ ಹಝ್ರತ್ ಸಾಹಿಬ್ ದೈವವಾಣಿ ಪಡೆಯುವುದನ್ನು ನೋಡಿದೆ ಎಂದು ಹೇಳುತ್ತಿದ್ದರು.

(23) **ಬಿಸ್ಮಿಲ್ಲಾಹಿರ್ರಹ್ಮಾನ್ ನಿರ್ರಹೀಮ್:** ನಾನು ಹೇಳುವಂತೆ ಹಝ್ರತ್ ಮಸೀಹ್ ಮೌಊದ್(ಅ) ಅವರು ಕೊನೆಯ ದಿನಗಳಲ್ಲಿ ವಕ್ರವಾದ ನಿಬ್‌ನಿಂದ ಬರೆಯುತ್ತಿದ್ದರು ಮತ್ತು ಗೆರೆಗಳಿಲ್ಲದೆ ಬಿಳಿ ಕಾಗದವನ್ನು ಬಳಸುತ್ತಿದ್ದರು. ಅವರು ಕಾಗದವನ್ನು ತೆಗೆದುಕೊಂಡು ಎರಡೂ ಬದಿಗಳಲ್ಲಿ ಬಿಳಿ ಅಂಚು ಇರುವಂತೆ ಎರಡೂ ಬದಿಗಳಲ್ಲಿ ಮಡಿಸುತ್ತಿದ್ದರು. ಅವರು ಕಪ್ಪು ಶಾಯಿ ಮತ್ತು ನೀಲಿ ಮತ್ತು ಕಪ್ಪು ಶಾಯಿಯಿಂದ ಬರೆಯುತ್ತಿದ್ದರು ಮತ್ತು ಅವರು ಜೇಡಿಮಣ್ಣಿನ ಸಣ್ಣ ದಿಬ್ಬವನ್ನು ಮಾಡಿ ಅದರಲ್ಲಿ ತಮ್ಮ ದವತಿಯನ್ನು ಇಡುತ್ತಿದ್ದರು ಇದರಿಂದ ಅದು ಬೀಳುವ ಅಪಾಯವಿರಲಿಲ್ಲ. ಅವರು ಸಾಮಾನ್ಯವಾಗಿ ಬರೆಯುವಾಗ ನಡೆಯುತ್ತಿದ್ದರು, ಅಂದರೆ, ಅವರು ಅಲ್ಲಿಂದ ಇಲ್ಲಿ ನಡೆಯುತ್ತಾ ಬರೆಯುತ್ತಿದ್ದರು ಮತ್ತು ದವತಿಯನ್ನು ಒಂದು ಬದಿಯಲ್ಲಿರಿಸುತ್ತಿದ್ದರು, ಅದರ ಮೂಲಕ ಹಾದುಹೋದಾಗ ತಮ್ಮ ಪೆನ್ನನ್ನು ಅದರಿಂದ ಒದ್ದೆ ಮಾಡುತ್ತಿದ್ದರು. ಮತ್ತು ಬರೆಯುವಾಗ, ಅವರು ತಮ್ಮ ಬರವಣಿಗೆಯನ್ನು ಓದುತ್ತಿದ್ದರು ಮತ್ತು ಅವರು ಓದುವಾಗ ಅಭ್ಯಾಸವನ್ನು ಹೊಂದಿದ್ದರು ತನ್ನದೇ ಆದ ರೀತಿಯಲ್ಲಿ, ಅವರ ತುಟಿಗಳಿಂದ ಗುನುಗುವ ಶಬ್ದ ಬರುತ್ತಿತ್ತು ಮತ್ತು ಕೇಳುಗರಿಗೆ ಪದಗಳನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ನಾನು ಮಿರ್ಝಾ ಸುಲ್ತಾನ್ ಅಹ್ಮದ್ ಸಾಹಿಬ್ ಓದುವುದನ್ನು ಕೇಳಿದ್ದೇನೆ, ಮತ್ತು ಅವರ ಶೈಲಿ ಹಝ್ರತ್ ಸಾಹಿಬ್ ಅವರ ಶೈಲಿಯನ್ನು ಹೋಲುತ್ತದೆ. ನಿಮ್ಮ ಕೈಬರಹವು ದೃಢವಾಗಿದ್ದರೂ ಸ್ವಲ್ಪ ಮುರಿದುಹೋದಂತಿತ್ತು. ಅದಕ್ಕೆ ಒಗ್ಗಿಕೊಂಡಿರದವರಿಗೆ ಸ್ಪಷ್ಟವಾಗಿ ಓದಲು ಸಾಧ್ಯವಾಗುತ್ತಿರಲಿಲ್ಲ. ಬರೆದಿರುವುದನ್ನು ಕೆಲವೊಮ್ಮೆ ಗೆರೆ ಎಳೆದು ತಿದ್ದುಪಡಿ ಮಾಡುತ್ತಿದ್ದರು. ಆದ್ದರಿಂದ, ನಿಮ್ಮ ಬರವಣಿಗೆಯಲ್ಲಿ, ಗೆರೆಎಳೆದ ಭಾಗಗಳು ಗೋಚರಿಸುವ ಅನೇಕ ಸ್ಥಳಗಳಿದ್ದವು ಮತ್ತು ನಿಮ್ಮ ಕೈಬರಹವು ತುಂಬಾ ತೆಳುವಾಗಿತ್ತು. ಆದ್ದರಿಂದ, ಕೆಳಗೆ ಒಂದು ಮಾದರಿಯನ್ನು ನೀಡಲಾಗಿದೆ.

ಪತ್ರದ ಪ್ರತಿಯನ್ನು ಹೊರತುಪಡಿಸಿ, ನನ್ನ ಮಕ್ಕಳು ಧಾರ್ಮಿಕ ಜ್ಞಾನ ಮತ್ತು ಅರೇಬಿಕ್, ಪರ್ಷಿಯನ್ ಮತ್ತು ಇಂಗ್ಲಿಷ್‌ನಲ್ಲಿ ಸ್ವಲ್ಪ ಶಿಕ್ಷಣವನ್ನು ಪಡೆದ ಮತ್ತು ದೊಡ್ಡ ಮನೆಗಳನ್ನು ನಿಯಂತ್ರಿಸಲು ಬುದ್ಧಿವಂತಿಕೆ ಮತ್ತು ಯುಕ್ತಿಯನ್ನು ಹೊಂದಿರುವ ಹುಡುಗಿಯರನ್ನು ಮದುವೆಯಾಗಬೇಕೆಂದು ನಾನು ಭಾವಿಸುತ್ತೇನೆ. ಆದ್ದರಿಂದ ಇತರ ಗುಣಗಳನ್ನು ಹೊರತುಪಡಿಸಿ ಈ ಎಲ್ಲಾ ವಿಷಯಗಳು ಈ ಗುಣವನ್ನು ಹೊಂದಿರಬಹುದು. ಇದು ಸರ್ವಶಕ್ತನಾದ ಅಲ್ಲಾಹನ ನಿಯಂತ್ರಣದಲ್ಲಿದೆ. ಪಂಜಾಬ್‌ನ ಉದಾತ್ತ ಕುಟುಂಬಗಳಲ್ಲಿ, ಹುಡುಗಿಯರ ಶಿಕ್ಷಣಕ್ಕೆ ತುಂಬಾ ಕಡಿಮೆ ಗಮನ ನೀಡಲಾಗುತ್ತದೆ, ಈ ಬಡ ಹುಡುಗಿಯರು ಅನಾಗರಿಕರಂತೆ ಬೆಳೆಯುತ್ತಾರೆ.

ಈ ಭಾಗವನ್ನು ಹಝ್ರತ್ ಮಸೀಹ್ ಮೌಊದ್(ಅ) ಮಿರ್ಝಾ ಮಹಮೂದ್ ಬೇಗ್ ಸಾಹಿಬ್ ಪಟ್ಟಿ ಅವರಿಗೆ 1899ರಲ್ಲಿ ಬರೆದ ಪತ್ರದಿಂದ ತೆಗೆದುಕೊಳ್ಳಲಾಗಿದೆ ಎಂದು ವಿನೀತನು ಹೇಳುತ್ತೇನೆ. **(ಮುಂದುವರಿಯುವುದು)**

***(ಪುಟ ಸಂಖ್ಯೆ 02ರ ಉಳಿದ ಭಾಗ)***

ಅವರ ಉಪದೇಶಗಳನ್ನು ಉಲ್ಲೇಖಿಸಿ ಹುಝೂರ್ ಅನ್ವರ್(ಅತಬಿಅ) ಅವರು ಹೇಳಿದರು: ಕೇವಲ ಬೈಅತ್ ಮಾಡಿರುವುದರಿಂದಲೇ ಮುಕ್ತಿ ದೊರೆಯುತ್ತದೆ ಎಂದು ಭಾವಿಸುವುದು ತಪ್ಪು. ಬೈಅತ್‌ನ ಉದ್ದೇಶವೇ ಜೀವನದಲ್ಲಿ ಆತ್ಮಿಕ ಕ್ರಾಂತಿಯನ್ನು ಉಂಟುಮಾಡುವುದು. ಮನುಷ್ಯನು ತನ್ನ ಜೀವನದಲ್ಲಿ ಸತ್ಪ್ರವೃತ್ತಿಗಳನ್ನು ಅಳವಡಿಸಿಕೊಳ್ಳದಿದ್ದರೆ, ಅಲ್ಲಾಹ್ ತಆಲಾದ ಆದೇಶಗಳನ್ನು ಅನುಸರಿಸದಿದ್ದರೆ ಮತ್ತು ತನ್ನ ನಡೆ–ನುಡಿಯಲ್ಲಿ ಬದಲಾವಣೆ ತರದಿದ್ದರೆ, ಕೇವಲ ಬೈಅತ್ ಮಾಡಿರುವುದರಿಂದ ಯಾವುದೇ ಪ್ರಯೋಜನವಿಲ್ಲ.

ಮುಂದೆ ಹುಝೂರ್ ಅನ್ವರ್(ಅತಬಿಅ) ಅವರು ಸತ್ಕರ್ಮಗಳು (ಅಅಮಾಲ್–ಎ–ಸಾಲಿಹಾ) ಮತ್ತು ಇಸ್ತಿಗ್ಫಾರ್ (ಅಲ್ಲಾಹ್ ತಆಲಾದಿಂದ ಕ್ಷಮೆಯಾಚನೆ)ಗಳ ಮಹತ್ವವನ್ನು ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾತು ವಸ್ಸಲಾಮ್) ಅವರ ಅಮೂಲ್ಯ ಉಪದೇಶಗಳ ಬೆಳಕಿನಲ್ಲಿ ವಿವರಿಸಿದರು.

ಒಬ್ಬ ನಿಜವಾದ ಮುಮಿನ್ ಕೇವಲ ಪಾಪದಿಂದ ದೂರವಿರುವುದಷ್ಟೇ ಅಲ್ಲ, ಸದಾ ಸತ್ಕರ್ಮಗಳನ್ನು ಮಾಡುವುದಲ್ಲಿಯೂ ಮುಂದಿರುತ್ತಾನೆ. ಜೊತೆಗೆ ತನ್ನ ದೌರ್ಬಲ್ಯಗಳನ್ನು ಅರಿತು, ವಿನಯದಿಂದ ಅಲ್ಲಾಹ್ ತಆಲಾದ ಕ್ಷಮೆಯನ್ನು ನಿರಂತರವಾಗಿ ಬೇಡುತ್ತಾನೆ. ಇದೇ ಆಧ್ಯಾತ್ಮಿಕ ಪ್ರಗತಿಯ ಮಾರ್ಗವಾಗಿದೆ.

ನಂತರ ಹುಝೂರ್ ಅನ್ವರ್(ಅತಬಿಅ) ಅವರು ಜಮಾಅತ್‌ನ ಸದಸ್ಯರ ಗಮನವನ್ನು ಪವಿತ್ರ ಖುರ್‌ಆನ್‌ನ ಮಹತ್ವದತ್ತ ಸೆಳೆದರು.

ಅವರು ಹೇಳಿದರು: ಪವಿತ್ರ ಖುರ್‌ಆನ್‌ನ್ನು ಕೇವಲ ಕಥೆ–ಕಾದಂಬರಿಯಂತೆ ಓದಬಾರದು. ಪವಿತ್ರತ ಖುರ್‌ಆನ್ ಅಲ್ಲಾಹ್ ತಆಲಾದ ಜೀವಂತ ವಚನವಾಗಿದೆ. ಅದು ದಿವ್ಯಪ್ರಕಾಶ (ನೂರ್), ಜೀವಂತ ಮಾರ್ಗದರ್ಶಕ ಹಾಗೂ ಮಾನವಕುಲಕ್ಕೆ ಶಾಶ್ವತ ದಿವ್ಯ ಮಾರ್ಗದರ್ಶನವಾಗಿದೆ. ಆದ್ದರಿಂದ ಪ್ರತಿಯೊಬ್ಬ ಅಹ್ಮದಿಯ ಕರ್ತವ್ಯವೆಂದರೆ, ಖುರ್‌ಆನ್‌ನ್ನು ಅರ್ಥಮಾಡಿಕೊಂಡು, ಅದರ ಉಪದೇಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು.

ಹುಝೂರ್ ಅನ್ವರ್(ಅತಬಿಅ) ಅವರು ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ಅವರ ಅತ್ಯಂತ ಪ್ರಭಾವಶಾಲಿ ಮಾತುಗಳನ್ನು ಉಲ್ಲೇಖಿಸಿ ಜಮಾಅತ್ ಅಹ್ಮದಿಯ್ಯದ ಮಹತ್ವವನ್ನು ವಿವರಿಸಿದರು.

ಅವರು ಹೇಳಿದರು: ಜಮಾಅತ್ ಅಹ್ಮದಿಯ್ಯಾಕ್ಕೆ ಸೇರಿದವರ ಜೀವನವು ಸಾಮಾನ್ಯ ಲೋಕಾಸಕ್ತ ಜನರ ಜೀವನದಂತಿರಬಾರದು. ಕೇವಲ "ನಾವು ಜಮಾಅತ್‌ನವರು" ಎಂದು ಹೇಳುವುದರಿಂದ ಸಾಲದು; ಅದರಂತೆ ಬದುಕುವುದೂ ಅಗತ್ಯ. ಮಾತಿನಲ್ಲಿ ಮಾತ್ರ ಸಂಬಂಧವಿದ್ದು, ಕಾರ್ಯದಲ್ಲಿ ಯಾವುದೇ ಬದಲಾವಣೆ ಇಲ್ಲದಿದ್ದರೆ, ಅಂತಹ ಸ್ಥಿತಿಯನ್ನು ಅಲ್ಲಾಹ್ ತಆಲಾ ಇಷ್ಟಪಡುವುದಿಲ್ಲ.

ಈ ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ಅವರು ತಮ್ಮ ಜಮಾಅತ್‌ಗೆ ನೀಡಿದ ಕೆಲವು ಅಮೂಲ್ಯ ಉಪದೇಶಗಳನ್ನು ಹುಝೂರ್ ಅನ್ವರ್(ಅತಬಿಅ) ಅವರು ನೆನಪಿಸಿದರು:

* ನೀವು ನನ್ನೊಂದಿಗೆ ಸಂಬಂಧ ಹೊಂದಿದ್ದರೆ, ನನ್ನ ಉದ್ದೇಶಗಳು ಮತ್ತು ಧ್ಯೇಯಗಳನ್ನು ಸಾಕಾರಗೊಳಿಸಿ.
* ನಿಮ್ಮ ನಡೆ–ನುಡಿ ಮತ್ತು ಸತ್ಕರ್ಮಗಳ ಮೂಲಕ, ನೀವು ಸತ್ಯದ ಪರವಾಗಿರುವ ಜನರೆಂದು ಸಾಬೀತುಪಡಿಸಿ.
* ಆತ್ಮಿಕವಾಗಿ ಹೊಸ ಜೀವನವನ್ನು ಆರಂಭಿಸಿದ ಹೊಸ ಮನುಷ್ಯರಾಗಿ ರೂಪುಗೊಳ್ಳಿ.

ಹುಝೂರ್ ಅನ್ವರ್(ಅತಬಿಅ) ಅವರು ತಿಳಿಸಿದರು: ಇದೇ ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ಅವರ ಬೈಅತ್‌ನ ನಿಜವಾದ ಬೇಡಿಕೆಯಾಗಿದೆ. ಪ್ರತಿಯೊಬ್ಬ ಅಹ್ಮದಿಯೂ ತನ್ನ ನಂಬಿಕೆಯನ್ನು ಕೇವಲ ಮಾತಿನಲ್ಲಿ ಅಲ್ಲ, ತನ್ನ ಸ್ವಭಾವ, ಆರಾಧನೆ, ನೈತಿಕತೆ ಮತ್ತು ಸೇವಾಭಾವದ ಮೂಲಕವೂ ವ್ಯಕ್ತಪಡಿಸಬೇಕು.

ತಮ್ಮ ಭಾಷಣದ ಕೊನೆಯಲ್ಲಿ ಹುಝೂರ್ ಅನ್ವರ್(ಅತಬಿಅ) ಅವರು ವಿಶ್ವದ ಪರಿಸ್ಥಿತಿಯ ಕುರಿತು ಆಳವಾದ ಕಳವಳ ವ್ಯಕ್ತಪಡಿಸಿ, ಎಲ್ಲಾ ಅಹ್ಮದಿಗಳಿಗೆ ವಿಶೇಷವಾಗಿ ದುವಾ ಮಾಡುವಂತೆ ಕರೆ ನೀಡಿದರು.

ಹುಝೂರ್ ಅನ್ವರ್(ಅತಬಿಅ) ಅವರು ಹೇಳಿದರು: ಈ ಜಲ್ಸಾದ ಪವಿತ್ರ ದಿನಗಳಲ್ಲಿ ವಿಶೇಷವಾಗಿ ಇಡೀ ವಿಶ್ವಕ್ಕಾಗಿ ಹಾಗೂ ಉಮ್ಮತ್–ಎ–ಮುಸ್ಲಿಮಾಗಾಗಿ ದುವಾ ಮಾಡಿ. ಇಂದಿನ ಜಗತ್ತು ಕ್ರಮೇಣ ಯುದ್ಧ ಮತ್ತು ವಿನಾಶದತ್ತ ಸಾಗುತ್ತಿದೆ. ಅಲ್ಲಾಹ್ ತಆಲಾ ತನ್ನ ಅಪಾರ ಕೃಪೆಯಿಂದ ಮಾನವಕುಲವನ್ನು ಈ ಭೀಕರ ಆಪತ್ತಿನಿಂದ ರಕ್ಷಿಸಲಿ. ಇದಲ್ಲದೆ, ಅಲ್ಲಾಹ್ ತಆಲಾ ನಮಗೆ ಇಸ್ಲಾಮಿನ ನಿಜವಾದ ಮತ್ತು ಶಾಂತಿಯ ಸಂದೇಶವನ್ನು ವಿಶ್ವದಾದ್ಯಂತ ಹರಡುವ ಸಾಮರ್ಥ್ಯವನ್ನು

***(ಪುಟ–12ರಲ್ಲಿ ಮುಂದುವರಿಸಲಾಗಿದೆ)***

EDITOR
TARIQ AHMED IDRIS.
Mobile : +91 9902678609
e-mail:
akhbaarbadarkannadaqdn@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2026-28 Vol No.07, Thursday, 06 August 2026, Issue No. 32

Act. MANAGER
ATHAR AHMAD SHAMIM.
Mobile : +91 99156 39670
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

# ಸೈಯಿದುನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಜರ್ಮನಿಯ ಪ್ರವಾಸ ಆಗಷ್ಟ್, ಸೆಪ್ಟೆಂಬರ್ 2023

## ಬೈತ್-ಉಲ್-ಸಬೂಹ್‌ಗೆ ನಿರ್ಗಮನ

ಈಗ, ಕಾರ್ಯಕ್ರಮದ ಪ್ರಕಾರ, ಸ್ಟಟ್‌ಗಾರ್ಟ್‌ನಿಂದ ಫ್ರಾಂಕ್‌ಫರ್ಟ್, 'ಬೈತ್-ಉಲ್-ಸಬೂಹ್'ಗೆ ಹೊರಡಬೇಕಿತ್ತು. ಸಂಜೆ 7:40 ಕ್ಕೆ, ಹುಝೂರ್ ಅನ್ವರ್(ಅತಬಿಅ) ತಮ್ಮ ನಿವಾಸದಿಂದ ಹೊರಬಂದರು.

ಜಮಾಅತ್‌ನ ಹೆಚ್ಚಿನ ಸಂಖ್ಯೆಯ ಸ್ನೇಹಿತರು ತಮ್ಮ ಪ್ರೀತಿಯ ಗುರುಗಳಿಗೆ ವಿದಾಯ ಹೇಳಲು ಜಮಾಯಿಸಿದ್ದರು ಮತ್ತು ಸ್ನೇಹಿತರು ನಿರಂತರವಾಗಿ ಘೋಷಣೆಗಳನ್ನು ಕೂಗುತ್ತಿದ್ದರು. ಹುಝೂರ್ ಅನ್ವರ್(ಅತಬಿಅ), ಸ್ವಲ್ಪ ಸಮಯದವರೆಗೆ, ಸ್ನೇಹಿತರು ಹುಝೂರ್ ಅನ್ವರ್(ಅತಬಿಅ) ಅವರ ದಯೆಯಿಂದ ಉತ್ಸುಕರಾಗಿದ್ದರು. ಹುಝೂರ್ ಅನ್ವರ್(ಅತಬಿಅ) ತಮ್ಮ ಕೈಯನ್ನು ಎತ್ತಿ ಎಲ್ಲರಿಗೂ 'ಅಸ್ಸಲಾಮು ಅಲೈಕುಮ್' ಎಂದು ಹೇಳಿ ದುಆ ಮಾಡಿಸಿದರು.

ನಂತರ, ಸಂಜೆ 7:50 ಕ್ಕೆ, ಬೈತ್-ಉಲ್-ಸಬೂಹ್‌ಗೆ ಹೊರಟಿತು. ಇಲ್ಲಿನ ಪೊಲೀಸರು ಬೆಂಗಾವಲು ಪಡೆಯನ್ನು ಹೆದ್ದಾರಿಗೆ ಕರೆದೊಯ್ದರು. ಸುಮಾರು ಎರಡು ಗಂಟೆಗಳ ಪ್ರಯಾಣದ ನಂತರ, ಬೆಳಿಗ್ಗೆ 9:50 ಕ್ಕೆ, ಹುಝೂರ್ ಅನ್ವರ್(ಅತಬಿಅ) ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ ಬೈತ್-ಉಲ್-ಸಬೂಹ್‌ಗೆ ಬಂದರು.

ನಂತರ, ಬೆಳಿಗ್ಗೆ 10:05 ಕ್ಕೆ, ಹುಝೂರ್ ಅನ್ವರ್(ಅತಬಿಅ) ಆಗಮಿಸಿ ಮಗ್ರಿಬ್ ಮತ್ತು ಇಶಾ ಪ್ರಾರ್ಥನೆಗಳನ್ನು ಒಟ್ಟಿಗೆ ನಿರ್ವಹಿಸಿದರು. ನಮಾಝ್ ನಿರ್ವಹಿಸಿದ ನಂತರ, ಹುಝೂರ್ ಅನ್ವರ್(ಅತಬಿಅ) ತಮ್ಮ ನಿವಾಸಕ್ಕೆ ಹೋದರು.

## ಬೈಅತ್ ಮಾಡಿದ ಸ್ನೇಹಿತರ ವಿಶ್ವಾಸ ವರ್ಧಕ ಅನಿಸಿಕೆಗಳು

ಇಂದು, ಸರ್ವಶಕ್ತನಾದ ಅಲ್ಲಾಹನ ಕೃಪೆಯಿಂದ, 39 ಜನರು ಹುಝೂರ್ ಅನ್ವರ್(ಅತಬಿಅ) ಅವರ ಅನುಗ್ರಹದಾಯಕ ಕೈ ಮೇಲೆ ಬೈಅತ್ ಮಾಡುವ ಸೌಭಾಗ್ಯವನ್ನು ಪಡೆದರು. ಈ ಜನರು ಏಳು ವಿಭಿನ್ನ ರಾಷ್ಟ್ರಗಳಿಗೆ ಸೇರಿದವರು. ಬೈಅತ್ ಮಾಡಿದ ಸ್ನೇಹಿತರ ಸಂತೋಷವು ವರ್ಣನಾತೀತವಾಗಿತ್ತು. ಕೆಲವು ಸ್ನೇಹಿತರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದರು, ಅದು ಈ ಕೆಳಗಿನಂತಿದೆ.

* ಸೆರ್ಬಿಯಾದ ಸ್ನೇಹಿತ ಉರೋಸ್ ಮಾಟೋವಿಕ್ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತಾ ಹೇಳಿದರು: ಈ ವರ್ಷದ ಜಲ್ಸ ಸಾಲಾನಕ್ಕೆ ನನಗೆ ಆಹ್ವಾನ ಬಂದಿತು, ಆದ್ದರಿಂದ ನಾನು ಬಯಸದಿದ್ದರೂ ಆಹ್ವಾನವನ್ನು ಸ್ವೀಕರಿಸಿದೆ. ನಂತರ, ಜಲ್ಸಕ್ಕೆ ಬಂದಾಗ, ಜಲ್ಸವನ್ನು ಅರ್ಥಮಾಡಿಕೊಳ್ಳುವ ಅವಕಾಶ ನನಗೆ ಸಿಕ್ಕಿತು ಮತ್ತು ನಿಮ್ಮ ಸಮುದಾಯವು ಜಾಗತಿಕವಾಗಿ ಪರಸ್ಪರ ಸಂಬಂಧ ಹೊಂದಿದೆ ಎಂದು ನಾನು ಅರಿತುಕೊಂಡೆ. ಎಲ್ಲಕ್ಕಿಂತ ಹೆಚ್ಚಾಗಿ, ಬೈಅತ್ ಸಮಾರಂಭವು ನನ್ನ ಮೇಲೆ ಆಧ್ಯಾತ್ಮಿಕ ಮತ್ತು ಭಾವನಾತ್ಮಕ ಪ್ರಭಾವ ಬೀರಿತು. ಮೊದಲ ಕ್ಷಣದಿಂದಲೇ, ನಾವೆಲ್ಲರೂ ಪರಸ್ಪರರ ಹೆಗಲ ಮೇಲೆ ಕೈ ಹಾಕಿದೆವು. ನನಗೆ ಒಂದೇ ಒಂದು ಪದ ಅರ್ಥವಾಗಲಿಲ್ಲ, ಆದರೆ ಏನು ಹೇಳಲಾಗಿದೆಯೋ ಅದು ಹೇಗೋ ನನ್ನ ದೇಹ ಮತ್ತು ಮನಸ್ಸಿನಲ್ಲಿ ಹಾದುಹೋಯಿತು, ಮತ್ತು ಒಂದು ನಡುಕ ಹುಟ್ಟಿಕೊಂಡಿತು, ಅದು ನನ್ನನ್ನು ಆಧ್ಯಾತ್ಮಿಕವಾಗಿ ಅಲ್ಲಾಹನಿಗೆ ಹತ್ತಿರ ತಂದಿತು. ಬೈಅತ್‌ನ ಕಾರಣದಿಂದ ನಾನು ಕಣ್ಣೀರು ಹಾಕಿದೆ.

* ಜಾರ್ಜಿಯಾದ ಮಹಿಳೆ ಲಿಯಾ ಡೆಕನಾಡ್ಜೆ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತಾ ಹೇಳಿದರು: ಯುವಕರು ಮತ್ತು ವೃದ್ಧರು ವಿಶೇಷ ಸಮರ್ಪಣೆಯೊಂದಿಗೆ ತಮ್ಮ ಸೇವೆಗಳನ್ನು ಹೇಗೆ ನೀಡುತ್ತಿದ್ದಾರೆಂದು ನಾನು ಜಲ್ಸದಲ್ಲಿ ಮತ್ತೆ ಮತ್ತೆ ನೋಡಿದೆ. ಜಾಗತಿಕ ಬೈಅತ್ ಸಮಾರಂಭವನ್ನು ನೋಡಿ, ಭಾವನೆಗಳನ್ನು ನಿಯಂತ್ರಿಸಲಾಗುತ್ತಿಲ್ಲ. ಕೂಟದ ಈ ಕೊನೆಯ ದಿನದಂದು, ಭವಿಷ್ಯದಲ್ಲಿ ನಾವು ಇಸ್ಲಾಂ ಧರ್ಮದ ಪ್ರಕಾರ ನಮ್ಮ ಜೀವನವನ್ನು ಮುಂದುವರಿಸುತ್ತೇವೆ ಎಂದು ಪ್ರತಿಯೊಬ್ಬರಿಂದ ಭರವಸೆಯನ್ನು ತೆಗೆದುಕೊಳ್ಳಲಾಗುತ್ತಿದೆ.

* ಜೆಕ್ ಗಣರಾಜ್ಯದ ನಿವೃತ್ತ ಪ್ರಾಧ್ಯಾಪಕ ಡೇನಿಯಲ್ ಬರ್ಟ ಅವರು ಕೂಟದಲ್ಲಿ ಬೈಅತ್ ಸಮಾರಂಭಕ್ಕೆ ಸಾಕ್ಷಿಯಾದರು. ಅವರು ಹೇಳುತ್ತಾರೆ: ಖಿಲಾಫತ್‌ನಿಂದ ಒಂದು ಆಧ್ಯಾತ್ಮಿಕ ಶಕ್ತಿ ಹೇಗೆ ಹೊರಹೊಮ್ಮಿತು ಎಂಬುದನ್ನು ನಾನು ನೋಡಿದೆ, ಅದನ್ನು ಜಮಾಅತ್ತಿನ ಸದಸ್ಯರು ಮುಂದಿನ ವ್ಯಕ್ತಿಯ ಹೆಗಲ ಮೇಲೆ ಕೈ ಹಾಕುವ ಮೂಲಕ ಹೀರಿಕೊಳ್ಳುತ್ತಿದ್ದರು. ಆದರೆ ಈ ಶಕ್ತಿಯ ಪರಿಣಾಮವು ಅಹ್ಮದೀಯರಿಗೆ ಮಾತ್ರ ಸೀಮಿತವಾಗಿರಲಿಲ್ಲ, ಆದರೆ ಅಹ್ಮದೀಯರಲ್ಲದವರಿಗೂ ಸಹ ಇತ್ತು. ನಾನು ಮೇಲಿನ ಗ್ಯಾಲರಿಯಲ್ಲಿ ಜಮಾಅತ್ತಿನೊಂದಿಗೆ ನಿಂತಿದ್ದೆ. ಈ ಲಿಂಕ್ ನಮ್ಮನ್ನು ಭೌತಿಕವಾಗಿ ಮೇಲಕ್ಕೆ ತಲುಪಲಿಲ್ಲ. ಆದರೆ ಮುಂದೆ ನಿಂತಿದ್ದ ಒಬ್ಬ ವ್ಯಕ್ತಿ ಗ್ಯಾಲರಿಯಲ್ಲಿನ ರೇಲಿಂಗ್ ಅನ್ನು ಹಿಡಿದುಕೊಂಡನು ಮತ್ತು ನಾವು ಅವನ ಹೆಗಲ ಮೇಲೆ ಕೈಯಿಟ್ಟು ಮೇಲಿನ ಗ್ಯಾಲರಿಯಲ್ಲಿ ದೈಹಿಕ ಸಂಪರ್ಕವನ್ನು ಸ್ಥಾಪಿಸಿದೆವು. ಆದ್ದರಿಂದ ಈ ಆಧ್ಯಾತ್ಮಿಕ ಶಕ್ತಿಯು ತುಂಬಾ ಆಕರ್ಷಕವಾಗಿತ್ತು, ಅದು ನನ್ನ ದೇಹ ಮತ್ತು ಹೃದಯದ ಮೇಲೆ ಆಳವಾದ ಪ್ರಭಾವ ಬೀರಿತು.

* ಜಾನ್ ಮೆರ್ಟ್ ಎಂಬ ಯುವಕ ಟರ್ಕಿಶ್ ವ್ಯಕ್ತಿ ಹ್ಯಾಂಬರ್ಗ್‌ನಿಂದ ಜಲ್ಸದಲ್ಲಿ ಭಾಗವಹಿಸಿದ್ದರು ಅವರು ಹೇಳುತ್ತಾರೆ: ಈ ಜಲ್ಸಕ್ಕೆ ಸೇರುವ ಮೂಲಕ, ಹಝ್ರತ್ ಮಸೀಹ್ ಮೌಊದ್(ಅ) ಅವರು ಇಸ್ಲಾಮಿನ ವಿಜಯಕ್ಕಾಗಿ ಅಹ್ಮದಿಯವರ ಹೃದಯದಲ್ಲಿ ಆರದ ಬೆಂಕಿಯನ್ನು ಹೊತ್ತಿಸಿದ್ದಾರೆ ಎಂದು ನಾನು ಗಮನಿಸಿದ್ದೇನೆ. ಜಲ್ಸದ ಕೊನೆಯ ದಿನದಂದು ಲಿಖಿತ ಬೈಅತ್ ಸ್ವೀಕರಿಸಿದ ನಂತರ, ಜಾನ್ ಮೆರ್ಟ್ ಹುಝೂರ್ ಅನ್ವರ್(ಅತಬಿಅ) ಅವರ ಅನುಗ್ರಹದಾಯಕ ಹಸ್ತದ ಮೇಲೆ ಬೈಅತ್ ಮಾಡುವ ಸೌಭಾಗ್ಯ ಪಡೆದರು.

* ಸ್ಲೋವಾಕಿಯಾದ ಭೇಟಿ ನೀಡುವ ಮಹಿಳಾ ಶಿಕ್ಷಕಿ ಮಾರ್ಟಿನಾ ಹ್ಲಾವಟಾ ತಮ್ಮ ಆಲೋಚನೆಗಳನ್ನು ವ್ಯಕ್ತಪಡಿಸುತ್ತಾ ಹೇಳಿದರು: ಈ ಇಡೀ ಜಲ್ಸವು ನನ್ನ ಹೃದಯದ ಮೇಲೆ ಆಳವಾದ ಪ್ರಭಾವ ಬೀರಿತು ಮತ್ತು ವಿಶೇಷವಾಗಿ ಬಾಯತ್ ಸಮಾರಂಭವು ಮತ್ತು ಪ್ರಾರ್ಥನೆಯ ಸಮಯದಲ್ಲಿ, ನಾನು ನನ್ನ ಭಾವನೆಗಳನ್ನು ನಿಯಂತ್ರಿಸಲು ಸಾಧ್ಯವಾಗಲಿಲ್ಲ. ಬೈಅತ್ ಸ್ವೀಕಾರದ ಸಂಪೂರ್ಣ ಸಮಾರಂಭದ ಉದ್ದಕ್ಕೂ ನಾನು ಅಳುತ್ತಿದ್ದೆ. ನನ್ನ ಜೀವನದಲ್ಲಿ ಈ ಕ್ಷಣವನ್ನು ನಾನು ಎಂದಿಗೂ ಮರೆಯುವುದಿಲ್ಲ, ಎಲ್ಲಾ ಅಹ್ಮದೀಯರು ಖಲೀಫರ ಕೈಯಲ್ಲಿ ಒಂದಾಗಿ ಪ್ರಮಾಣವಚನ ಸ್ವೀಕಾರದಲ್ಲಿ ಹೇಗೆ ಸೇರಿಕೊಂಡರು ಎಂದು. **(ಮುಂದುವರಿಯುವುದು)**

*(ಪುಟ ಸಂಖ್ಯೆ 11ರ ಉಳಿದ ಭಾಗ)*

ನೀಡಲಿ ಹಾಗೂ ನಾವು ಇಸ್ಲಾಮಿನ ಧ್ವಜವನ್ನು ವಿಶ್ವದಲ್ಲಿ ಎತ್ತರಕ್ಕೆ ಹಾರಿಸುವವರಾಗೋಣ ಎಂದು ಹುಝೂರ್ ಅವರು ಪ್ರಾರ್ಥಿಸಿದರು.

ಹುಝೂರ್ ಅನ್ವರ್(ಅತಬಿಅ) ಅವರ ಈ ಆತ್ಮೀಯ ಮತ್ತು ಪ್ರೇರಣಾದಾಯಕ ಉದ್ಘಾಟನಾ ಭಾಷಣವು ಸಂಜೆ 6:12 ಗಂಟೆಗೆ ಮುಕ್ತಾಯವಾಯಿತು. ನಂತರ ಅವರು ಸಾಮೂಹಿಕ ದುವಾ ನಡೆಸಿದರು ಮತ್ತು ಉದ್ಘಾಟನಾ ಅಧಿವೇಶನವು ಸಮಾಪ್ತಿಯಾಯಿತು.

ಅಲ್ಲಾಹ್ ತಆಲಾ, ಹುಝೂರ್ ಅನ್ವರ್(ಅತಬಿಅ) ಅವರ ಈ ಅಮೂಲ್ಯ ಮಾರ್ಗದರ್ಶನವನ್ನು ಆಲಿಸುವ, ಅದನ್ನು ಸರಿಯಾಗಿ ಅರ್ಥಮಾಡಿಕೊಳ್ಳುವ ಹಾಗೂ ನಮ್ಮ ದೈನಂದಿನ ಜೀವನದಲ್ಲಿ ಸಂಪೂರ್ಣವಾಗಿ ಅನುಸರಿಸುವ ತೌಫೀಕ್ ನಮಗೆಲ್ಲರಿಗೂ ಅನುಗ್ರಹಿಸಲಿ. ಆಮೀನ್.

**(ಅಲ್-ಫಝ್ಲ್ ಇಂಟರ್ನ್ಯಾಷನಲ್‌ಗೆ ಕೃತಜ್ಞತೆಗಳು)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE : 1800-103-2131**

**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**

**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.